ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಯೂಸುಫ್ ಅರಕ್ಕಲ್ ಇನ್ನಿಲ್ಲ



ಸಂಪುಟ 10 | ಸಂಚಿಕೆ 42 ಪುಟ 16 | ಅಕ್ಟೋಬರ್ 16,2016| ರೂ. 10/-

web: www.janashakthi.co.in e-mail : js_weekly@yahoo.com

ಯುದ್ಧೋನ್ಮಾದ ಬೇಡ





ಕಾವೇರಿ: ಪರಿಸ್ಥಿತಿ ತಿಳಿಯಾಗಿದೆ. ಆದರೆ....



ಚಲೋ ಉಡುಪಿ



ಎಕ್ಸಿಡಿ ಕ್ಲಚ್ ಕಾರ್ಮಿಕ ನಾಯಕನ ನಾವು

ಕೆಟ್ಟ ಸಾಲ ಅಳಿಸಲು ಕೆಟ್ಟ ಬ್ಯಾಂಕ್?!

ಕಾಶ್ಮೀರಿ ಯುವಕರೇಕೆ ಲ್ಯಾಪ್‌ಟಾಪ್ ಬದಲು ಕಲ್ಲು ಹಿಡಿದಿದ್ದಾರೆ?

ಕುಲಾಂತರಿ ಸಾಸಿವೆಗೆ ತರಾತುರಿಯ ಮಂಜೂರಾತಿ ಬೇಡ

– ಅಖಿಲ ಭಾರತ ಕಿಸಾನ್ ಸಭಾ

ಕುಲಾಂತರಿ ಸಾಸಿವೆಯ ಬಗ್ಗೆ ಎಲ್ಲ ಲಭ್ಯ ಮಾಹಿತಿಗಳನ್ನು ಸಾರ್ವಜನಿಕಗೊಳಿಸಿ, ಈ ಬಗ್ಗೆ ಸಂಬಂಧಪಟ್ಟ ಎಲ್ಲರೊಂದಿಗೆ ವ್ಯಾಪಕವಾದ ಪ್ರಜಾಸತ್ತಾತ್ಮಕ ಸಮಾಲೋಚನೆಗಳನ್ನು ನಡೆಸುವ ವರೆಗೆ ಅದಕ್ಕೆ ಮಂಜೂರಾತಿ ನೀಡಬಾರದು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಸರಕಾರವನ್ನು ಆಗ್ರಹಿಸಿದೆ.

ಕುಲಾಂತರಿ ಸಾಸಿವೆಯ ವಾಣಿಜ್ಯ ಬಿಡುಗಡೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಮತ್ತು ಜೆನೆಟಿಕ್ ಇಂಜಿನಿಯರಿಂಗ್ ಪರಿಶೀಲನಾ ಸಮಿತಿ (ಜಿಇಎಸಿ) ಕಾತುರವಾಗಿರುವಂತೆ ಕಾಣುತ್ತದೆ. ದೀರ್ಘಕಾಲದ ಪರೀಕ್ಷಣೆಗಳನ್ನು ನಡೆಸಿ ಜೈವಿಕ ಸುರಕ್ಷಿತತೆಯ ಪ್ರಶ್ನೆಗಳನ್ನು ಪರಿಶೀಲಿಸಬಲ್ಲ ಒಂದು ವಿಶ್ವಾಸಾರ್ಹ ನಿಯಂತ್ರಣ ವ್ಯವಸ್ಥೆಯಿಲ್ಲದಿದ್ದರೂ ತರಾತುರಿ ಮಾಡಲಾಗುತ್ತಿದೆ. ಮತ್ತೆ-ಮತ್ತೆ ಕೇಳಿದರೂ, ಕೇಂದ್ರೀಯ ಮಾಹಿತಿ ಆಯುಕ್ತರು ಆದೇಶ ನೀಡಿದರೂ ಕೂಡ ಇದುವರೆಗೂ ಈ ಕುರಿತ ಮಾಹಿತಿಗಳನ್ನು ಸಾರ್ವಜನಿಕಗೊಳಿಸಿಲ್ಲ. ಕುಲಾಂತರಿ ಸಾಸಿವೆಯ ಉತ್ಪಾದಕತೆ ಕುರಿತಂತೆ ವಿವಿಧ ಹಿತಾಸಕ್ತಿ ತಿಕ್ಕಾಟದ ದಾವೆಗಳಿವೆ, ಪ್ರಶ್ನಾರ್ಹ ದಾವೆಗಳೂ ಇವೆ ಎಂದು ಎಐಕೆಎಸ್ ಹೇಳಿದೆ.

ಈ ಸಸ್ಯನಾಶಕವನ್ನು ತಾಳಿಕೊಳ್ಳಬಲ್ಲ ತಳಿ ಬಾಯರ್ ಕಂಪನಿಯ ಸಸ್ಯನಾಶಕಕ್ಕೆ ಅನುಗುಣವಾಗಿದೆ ಎಂಬುದು ಗಮನಾರ್ಹ. ಇತ್ತೀಚೆಗೆ ಈ ಬಾಯರ್ ಕಂಪನಿ ಮೊನ್ಸಾಂಟೊ ಕಂಪನಿಯನ್ನು ವಹಿಸಿಕೊಂಡಿದೆ ಎಂಬ ಸಂಗತಿಯನ್ನೂ ಗಮನಿಸಬೇಕು. ಇತರ ಕೃಷಿವ್ಯಾಪಾರ ಕಂಪನಿಗಳನ್ನೂ ವಹಿಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ ಎನ್ನಲಾಗಿದೆ. ಅಂದರೆ ಇವೆಲ್ಲ ಬಾಯರ್ ಕಂಪನಿಯ ಗುತ್ತೇದಾರಿಕೆಯನ್ನು ಉತ್ತೇಜಿಸುತ್ತವೆ, ಆಮೂಲಕ ಲಂಗುಲಗಾಮಿಲ್ಲದ ಲಾಭಕೋರತನಕ್ಕೆ ಬಾಗಿಲು ತೆರೆಯುತ್ತವೆ ಎಂಬುದು ನಿಸ್ಸಂದೇಹ ಎಂದು ಎಐಕೆಎಸ್ ವಿಶ್ಲೇಷಿಸಿದೆ.

ಸಸ್ಯನಾಶಕಗಳ ಬಳಕೆಯಿಂದ ಮಾನವರು ಮತ್ತು ಪ್ರಾಣಿಗಳ ಆರೋಗ್ಯದ ಮತ್ತು ಪರಿಸರದ ಮೇಲಾಗುವ ಪರಿಣಾಮಗಳು ಇನ್ನೊಂದು ಆತಂಕದ ಸಂಗತಿ.

ಮತ್ತೊಂದು ಆತಂಕದ ಸಂಗತಿಯೆಂದರೆ ಕಳೆ ಕೀಳುವ ಕೆಲಸಗಳನ್ನು ಅವಲಂಬಿಸಿರುವ ಬಡ ರೈತರು ಮತ್ತು ಕೃಷಿಕೂಲಿಕಾರರ ಜೀವನಾಧಾರದದ ಮೇಲೆ ಆಗುವ ಪರಿಣಾಮಗಳು.

ಹಲವು ರಾಜ್ಯಗಳೂ ಕುಲಾಂತರಿ ಸಾಸಿವೆಯ ವಾಣಿಜ್ಯ ಬಿಡುಗಡೆಯ ಬಗ್ಗೆ ವಿರೋಧ ವ್ಯಕ್ತಪಡಿಸಿವೆ. ರಾಜ್ಯಗಳು ಇಂತಹ ನಿಲುವು ತಳೆಯಲು ಕಾರಣಗಳೇನು ಎಂದು ತಿಳಿಯುವುದೂ ಇಲ್ಲಿ ಅಗತ್ಯವಾಗಿದೆ. ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಮೇಲೆ ಇಂತಹ ನಿರ್ಧಾರಗಳನ್ನು ಹೇರುವುದೂ ಸಾಧ್ಯವಿಲ್ಲ ಎಂದು ಎಐಕೆಎಸ್ ಹೇಳಿದೆ.

ಅಖಿಲ ಭಾರತ ಕಿಸಾನ್ ಸಭಾ ವೈಜ್ಞಾನಿಕ ನಾವೀನ್ಯಕ್ಕೆ ವಿರುದ್ಧವಾಗಿಲ್ಲವಾದರೂ ಇದು ಜೈವಿಕ ಸುರಕ್ಷಿತತೆ ಮತ್ತು ಜೈವಿಕ ವೈವಿಧ್ಯತೆಯನ್ನು ಬಲಿಗೊಡುವಂತಾಗಬಾರದು ಎಂದು ಒತ್ತಿ ಹೇಳಿದೆ.

ಮಾತೆಂದರೆ ಇದು

ಭಾರತ ದೇಶದಲ್ಲಿನ ಕಾರ್ಮಿಕರಿಗೆ, ರೈತರಿಗೆ ಶತ್ರುಪಾಯವಾದ ಎರಡು ಶಕ್ತಿಗಳೆಂದರೆ ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿ ಪದ್ಧತಿ. ಇವೆರಡನ್ನೂ ಎದುರಿಸಿ ಹೋರಾಡಬೇಕು. ಬ್ರಾಹ್ಮಣವಾದ ಎಂದರೆ ಬ್ರಾಹ್ಮಣ ಜಾತಿ ಎಂದಾಗಲಿ, ಅವರ ಸ್ಥಾನಮಾನ, ಸುಖಗಳು, ಅಭಿರುಚಿಗಳೆಂದಾಗಲಿ ಅರ್ಥವಲ್ಲ. ಬ್ರಾಹ್ಮಣವಾದ ಎಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವದ ಭಾವನೆಗಳಿಗೆ ವಿರುದ್ಧವಾದ ಸಿದ್ಧಾಂತ ಎಂದು ನನ್ನ ಅರ್ಥ.

-ಡಾ. ಬಿ. ಆರ್. ಅಂಬೇಡ್ಕರ್

'ಕೆಟ್ಟ ಬ್ಯಾಂಕ್' ನಿರ್ಮಿಸುವ ವಿಚಾರವನ್ನು ತಿರಸ್ಕರಿಸಿ-ಪ್ರಧಾನಿಗಳಿಗೆ ಯೆಚೂರಿ ಪತ್ರ

ದೊಡ್ಡ ಕಾರ್ಪೋರೇಟ್‌ಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡದೆ ಅಪಾರ ಪ್ರಮಾಣದಲ್ಲಿ ಬಾಕಿ ಉಳಿಸಿಕೊಂಡಿರುವ ಸಮಸ್ಯೆಯ ಪರಿಹಾರಕ್ಕೆ ಪ್ರತ್ಯೇಕ "ಕೆಟ್ಟ ಬ್ಯಾಂಕ್" ಒಂದನ್ನು ರಚಿಸುವ ಪ್ರಸ್ತಾವವನ್ನು ಸರಕಾರ ಮಾಡಿದೆ ಎನ್ನಲಾಗಿದೆ. ಸ್ವಾಭಾವಿಕ ನ್ಯಾಯದ ನೀತಿಯನ್ನು ಉಲ್ಲಂಘಿಸುವ ಈ ಪ್ರಸ್ತಾವವನ್ನು ತಿರಸ್ಕರಿಸಬೇಕು, ಇಲ್ಲವಾದರೆ ಪ್ರಧಾನ ಮಂತ್ರಿಗಳು ತಮ್ಮ ಸವಿಧಾನಿಕ ಕರ್ತವ್ಯದ ಲೋಪ ಮಾಡಿದಂತಾಗುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಪ್ರಧಾನ ಮಂತ್ರಿಗಳಿಗೆ ಈ ಕುರಿತು ಅಕ್ಟೋಬರ್ 4ರಂದು ಎರಡನೇ ಪತ್ರವನ್ನು ಬರೆದಿದ್ದಾರೆ. ಅದರ ಪೂರ್ಣ ಒಕ್ಕಣಿಕೆಯನ್ನು ಈ ಮುಂದೆ ಕೊಡಲಾಗಿದೆ.

ಪ್ರಿಯ ಪ್ರಧಾನ ಮಂತ್ರಿಗಳೇ,

ಸರಕಾರೀ ಒಡೆತನದ ಬ್ಯಾಂಕುಗಳ 'ಕಾರ್ಯನಿರ್ವಹಿಸದ ಆಸ್ತಿ'(ಎನ್‌ಪಿಎ) ಗಳಲ್ಲಿ ಆತಂಕಕಾರಿ ಹೆಚ್ಚಳ ಮತ್ತು ಈ ಕೆಟ್ಟ ಸಾಲಗಳನ್ನು ವಸೂಲಿ ಮಾಡಲು ನಿಮ್ಮ ಸರಕಾರದ ಹಿಂದೇಟು ಕುರಿತಂತೆ ನನ್ನ ದಿನಾಂಕ 7 ಜುಲೈ 2016ರ ಪತ್ರವನ್ನು ದಯವಿಟ್ಟು ನೋಡಿ. ಆ ಅಂಶಗಳ ಮೇಲೆ ಇದುವರೆಗೆ ಯಾವುದೇ ಕ್ರಿಯೆಯನ್ನು ಕಾಣದ್ದರಿಂದ ಮತ್ತು ಹೊಸ ಬೆಳವಣಿಗೆಗಳಾಗಿರುವುದರಿಂದ ನಾನು ಈ ಪತ್ರವನ್ನು ಬರೆಯಲೇ ಬೇಕಾಗಿದೆ.

ಇತ್ತೀಚಿನ ವರದಿಗಳು 2015–16ರಲ್ಲಿ ಹೆಚ್ಚಿನ ಸರಕಾರೀ ಒಡೆತನದ ಬ್ಯಾಂಕುಗಳು ಕೆಟ್ಟ ಸಾಲಗಳಿಗಾಗಿ ಇಡಬೇಕಾದ ಮೊತ್ತ ದ್ವಿಗುಣಗೊಂಡಿದೆ– ಕೆಲವು ಬ್ಯಾಂಕುಗಳಲ್ಲಿ ಮೂರು ಪಟ್ಟೂ ಆಗಿದೆ ಎಂದು ತೋರಿಸುತ್ತಿವೆ. ಈ ಹೆಚ್ಚಿನ ಬ್ಯಾಂಕುಗಳಲ್ಲಿ ಮೂಲ ಗಳಿಕೆಗಳು ಕೆಟ್ಟ ಸಾಲಕ್ಕೆ ಇಡಬೇಕಾದುದಕ್ಕಿಂತ ಬಹಳ ಕಡಿಮೆಯಾಗಿರುವುದು ಪರಿಸ್ಥಿತಿಯನ್ನು ಇನ್ನೂ ಕೆಟ್ಟದಾಗಿಸಿದೆ. ಈ ಕೆಟ್ಟ ಸಾಲಗಳನ್ನು ವಸೂಲಿ ಮಾಡಲು ಸತತ ಪ್ರಯತ್ನದ ಅಭಾವ ಇದೆ ಮತ್ತು ಅದರ ಬದಲು ನಿಮ್ಮ ಸರಕಾರ 2015–16ರಲ್ಲಿ ದೊಡ್ಡ ಸಾಲಗಾರರ ರೂ.59547 ಕೋಟಿ ರೂ.ಗಳನ್ನು ಮನ್ನಾ ಮಾಡಿದೆ. ಹೀಗೆ ಮಾಡುತ್ತಿರುವಾಗಲೇ, ಬರದ ವರ್ಷಗಳಲ್ಲಿ ಸಣ್ಣ ಮೊತ್ತಗಳ ಮರುಪಾವತಿಗಾಗಿ ರೈತರನ್ನು ಬೆನ್ನಟ್ಟಲಾಗುತ್ತಿದೆ.

ಈ ದೊಡ್ಡ ಸಾಲಗಾರರ ಬಳಿ ಅಗತ್ಯ ಆಸ್ತಿಗಳಿವೆ, ಅವನ್ನು ಬ್ಯಾಂಕುಗಳು, ರಾಜಕೀಯ ಇಚ್ಛಾಶಕ್ತಿ ಮತ್ತು ದೃಢನಿರ್ಧಾರದ ಬೆಂಬಲವಿದ್ದರೆ ಸುಲಭವಾಗಿ ವಸೂಲಿ ಮಾಡಬಹುದು. ಇದರ ಬದಲು ಎಲ್ಲ ಸರಕಾರೀ ಒಡೆತನದ ಬ್ಯಾಂಕುಗಳ ಕೆಟ್ಟ ಸಾಲಗಳನ್ನು ಒಂದು 'ಕೆಟ್ಟ ಬ್ಯಾಂಕ್' ರಚಿಸಿ ಅದಕ್ಕೆ ವರ್ಗಾಯಿಸುವ ಒಂದು ಪ್ರಸ್ತಾವವನ್ನು ನಾವು ಕಾಣುತ್ತಿದ್ದೇವೆ. ಇದು ಕೆಟ್ಟ ಸಾಲಗಳನ್ನೆಲ್ಲ ಒಂದು ಪ್ರತ್ಯೇಕವಾದ ಹೊಸ ಸಂಸ್ಥೆಗೆ ತಿರುಗಿಸಿ ಬ್ಯಾಂಕ್ ಖಾತೆ ಮಸ್ತಕಗಳು ಸ್ವಚ್ಛವಾಗಿವೆ ಎಂದು ಬಿಂಬಿಸುವ ಒಂದು ಪ್ರಯತ್ನ . ಆದರೆ ಕೆಟ್ಟ ಸಾಲಗಳ ಸಂಸ್ಥೆ ಆಗಲೂ ಸರಕಾರೀ ಒಡೆತನದಲ್ಲೇ ಇರುತ್ತದೆ. ಈ 'ಕೆಟ್ಟ ಬ್ಯಾಂಕ್' ಸಾರ್ವಜನಿಕ ಹಣವನ್ನೇ ಕೊಡಬೇಕು, ಏಕೆಂದರೆ ಇತರ ಎಲ್ಲ ಬ್ಯಾಂಕುಗಳಿಗೆ ನಿಮ್ಮ ಸರಕಾರವೇ ಮರು ಬಂಡವಾಳ ಕೊಡುತ್ತದೆ, **ಅತ್ತ ದೊಡ್ಡ ಸಾಲಗಾರರಿಗೆ ಶಿಕ್ಷೆ ತಪ್ಪಿಸಿಕೊಳ್ಳಲು ಬಿಡಲಾಗುತ್ತಿದೆ, ಅದರ ವೆಚ್ಚವನ್ನು ಪ್ರಾಮಾಣಿಕ ತೆರಿಗೆ ಪಾವತಿದಾರರೇ ಭರಿಸುತ್ತಾರೆ. ಈ ಮೂಲಕ ಈ ದೇಶದ ಬಹುಪಾಲು ಮಧ್ಯಮ ವರ್ಗದವರು ಮತ್ತು ಬಡವರು ಕಷ್ಟಪಟ್ಟು ಗಳಿಸಿದ ಉಳಿತಾಯಗಳಿಂದ ಚಮಚಾಗಳಿಗೆ ಅವರ ದುಂದುವೆಚ್ಚಕ್ಕೆ, ಕೆಟ್ಟ ವ್ಯಾಪಾರೀ ಆಚರಣೆಗಳಿಗೆ ಮತ್ತು ಅವರ ಐಷಾರಾಮೀ ವೈಯಕ್ತಿಕ ಜೀವನ ಶೈಲಿಗಳಿಗೆ ಬಹುಮಾನ ನೀಡಿದಂತಾಗುತ್ತದೆ.**

ಪುಟ 13 ನೋಡಿ

ಹೈದರಾಬಾದ್ ವಿವಿ ಉಪಕುಲಪತಿಯನ್ನು ಬಚಾವ್ ಮಾಡುವ, ವೆಮುಲ ತಾಯಿಯ ಹೆಸರು ಕೆಡಿಸುವ ಪ್ರಯತ್ನ ಕಾನೂನು ಪರಿಮಿತಿಯನ್ನು ಉಲ್ಲಂಘಿಸಿರುವ ರೂಪನ್‌ವಾಲ್ ಆಯೋಗದ ವರದಿಯನ್ನು ತಿರಸ್ಕರಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ರೋಹಿತ್ ವೆಮುಲ ಆತ್ಮಹತ್ಯೆಗೆ ಕಾರಣವಾದ ಬೆಳವಣಿಗೆಗಳ ಬಗ್ಗೆ ತನಿಖೆ ಮಾಡಲೆಂದು ನೇಮಿಸಿದ ರೂಪನ್‌ವಾಲ್ ಆಯೋಗ ತನ್ನ ವರದಿ ಸಲ್ಲಿಸಿದ್ದು ವೆಮುಲ ಆತ್ಮಹತ್ಯೆ 'ವೈಯಕ್ತಿಕ' ಕಾರಣಗಳಿಂದ ಆಗಿದೆ, ವಿವಿಯ ಉಪಕುಲಪತಿಗಳು ಮತ್ತು ಮಾನವ ಸಂಪನ್ಮೂಲ ಮಂತ್ರಿಗಳ ವರ್ತನೆ ಇದಕ್ಕೆ ಕಾರಣವಲ್ಲ ಎಂದು ಹೇಳಿದೆ. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ವಿದ್ಯಾರ್ಥಿಗಳಿಗೆ, ಅದರಲ್ಲೂ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾನಸಿಕ ಸಲಹೆ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಪರಿಹಾರ ಸೂಚಿಸಿದೆ!

ಗಮನಾರ್ಹ ಸಂಗತಿಯೆಂದರೆ ಈ ಆಯೋಗ ತನಗೆ ವಹಿಸಿದ ಕೆಲಸದ ಮೇರೆಗಳನ್ನು ದಾಟಿ ರೋಹಿತ್ ವೆಮುಲಾ ತಾಯಿಯ ಜಾತಿ ಸ್ಥಾನಮಾನದ ಬಗ್ಗೆ ಪ್ರಶ್ನೆ ಎತ್ತಿದೆ. ಅವರು ಪರಿಶಿಷ್ಟ ಜಾತಿಯಾದ 'ಮಾಲಾ' ಸಮುದಾಯಕ್ಕೆ ಸೇರಿದವರು ಎಂಬ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ, ಕೇವಲ ತನ್ನ ಮಗನಿಗೆ ಜಾತಿ ಸರ್ಟಿಫಿಕೇಟ್ ಪಡೆಯಲಿಕ್ಕಾಗಿ ತಾನು ಮಾಲಾ ಜಾತಿಗೆ ಸೇರಿದವಳು ಎಂದು ಹೇಳಿಕೆ ನೀಡಿರಬಹುದು ಎಂದು ಹೇಳಿದೆ. ಇದು ಈ ಆಯೋಗದ ತನಿಖೆಯ ವ್ಯಾಪ್ತಿಯನ್ನು ಮೀರಿದ ವಿಚಾರ ಎನ್ನುವುದನ್ನು ಮಾನವ ಸಂಪನ್ಮೂಲ ಮಂತ್ರಾಲಯವೂ ಒಪ್ಪಿಕೊಂಡಿರುವುದಾಗಿ ವರದಿಯಾಗಿದೆ.

ಈ ರೀತಿ ಕಾನೂನಿನ ಪರಿಮಿತಿಗಳನ್ನು ಉಲ್ಲಂಘಿಸಿರುವ ತನ್ನ ವ್ಯಾಪ್ತಿಯನ್ನು ಮೀರಿ ಹೋಗಿರುವ ಈ ರೂಪನ್‌ವಾಲ್ ಆಯೋಗದ ವರದಿಯನ್ನು ತಿರಸ್ಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪರಿಶಿಷ್ಟ ಜಾತಿಗಳ ಮೇಲೆ ಅತ್ಯಾಚಾರ ತಡೆ ಕಾನೂನಿನ ಅಡಿಯಲ್ಲಿ ಉಪಕುಲಪತಿಯ ಮೇಲೆ ಕೇಸು ದಾಖಲಿಸದಂತೆ ಮಾಡುವ ಪ್ರಯತ್ನ ಇದು ಎಂದು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಶ್ರೀಮತಿ ವೆಮುಲಾ ಅವರ ಬಗ್ಗೆ ಈ ಆಯೋಗ ಮಾಡಿರುವ ಆಪಾದನೆ ಹೆಸರಗೆಡಿಸುವ ಕ್ರಿಮಿನಲ್ ಪ್ರಯತ್ನವಾಗುತ್ತದೆ ಎಂದು ಹೇಳುತ್ತ ಈ ವರದಿಯನ್ನು ತಕ್ಷಣವೇ ವಜಾ ಮಾಡಬೇಕು ಎಂದು ಆಗ್ರಹಿಸಿದೆ.

ಹೈದರಾಬಾದ್ ವಿವಿಯಲ್ಲೂ ಎಡ-ದಲಿತ ಐಕ್ಯರಂಗಕ್ಕೆ ಭಾರೀ ವಿಜಯ

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಎಸ್‌ಎಫ್‌ಐ, ಡಿಎಸ್‌ಯು(ದಲಿತ ವಿದ್ಯಾರ್ಥಿ ಸಂಘ), ಟಿವಿಎಫ್(ಬುಡಕಟ್ಟು ವಿದ್ಯಾರ್ಥಿಸಂಘ), ಬಿಎಸ್‌ಎಫ್(ಬಹುಜನ ವಿದ್ಯಾರ್ಥಿ ರಂಗ) ಮತ್ತು ಟಿವಿವಿ(ತೆಲಂಗಾಣ ವಿದ್ಯಾರ್ಥಿ ವೇದಿಕ) ಈ ಐದು ಸಂಘಟನೆಗಳ 'ಸಾಮಾಜಿಕ ನ್ಯಾಯದ ಐಕ್ಯರಂಗ'(ಯುಎಫ್‌ಎಸ್‌ಜೆ) ಎಲ್ಲ ಪದಾಧಿಕಾರಿಗಳ ಸ್ಥಾನಗಳನ್ನು ಪಡೆದು ಕೊಂಡಿದೆ.

ಜವಹರಲಾಲ್ ನೆಹರೂ ವಿವಿ, ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ (ಇಎಫ್‌ಎಲ್‌ಯು) ಜಲ್ಲಿ ವಿಜಯದ ನಂತರ ಹೈದರಾಬಾದ್ ಕೇಂದ್ರೀಯ ವಿವಿಯಲ್ಲಿನ ಈ ಮಹತ್ವದ ವಿಜಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಆರೆಸ್ಸೆಸ್–ಬಿಜೆಪಿ ಮತ್ತು ಕ್ಯಾಂಪಸ್‌ಗಳಲ್ಲಿ ಅವರ ಪ್ರತಿನಿಧಿ ಎಬಿವಿಪಿಯ ವಿದ್ಯಾರ್ಥಿ–ವಿರೋಧಿ, ದಲಿತ–ವಿರೋಧಿ, ಕೋಮುವಾದಿ ಮತ್ತು ಶ್ರೀಮಂತ–ಪರ ಧೋರಣೆಗಳನ್ನು ತಿರಸ್ಕರಿಸುತ್ತಿದ್ದಾರೆ ಎಂಬ ಸ್ಪಷ್ಟ ಸಂದೇಶವನ್ನು ನೀಡಿದೆ ಎಂದು ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಟಿಪ್ಪಣಿ ಮಾಡಿದೆ

ಎಸ್‌ಎಫ್‌ಐನ ಕುಲದೀಪ್‌ಸಿಂಗ್ ನಾಗಿ ಎಬಿವಿಪಿ–ಒಬಿಸಿಎಸ್‌ಯು ಪ್ರತಿಸ್ಪರ್ಧಿಯನ್ನು ಸೋಲಿಸಿ ಹೈದರಾಬಾದ್ ಕೇಂದ್ರೀಯ ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ರೋಹಿತ್ ವೆಮುಲ ಅವರ ಸಾಂಸ್ಥಿಕ ಕೊಲೆಯ ನಂತರ ನಡೆದಿರುವ ಸಾಮಾಜಿಕ ನ್ಯಾಯದ ದೀರ್ಘ ಹೋರಾಟದ ದೃಷ್ಟಿಯಿಂದ ಈ ವಿಜಯ ಬಹಳ ಮಹತ್ವದ್ದು.

ರೋಹಿತ್ ವೆಮುಲ ಸದಸ್ಯರಾಗಿದ್ದ ಎಎಸ್‌ಎ ಈ ಯುಎಫ್‌ಎಸ್‌ಜೆ ಭಾಗವಾಗಲು ನಿರಾಕರಿಸಿತು, ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಈಗ ಚರ್ಚೆ ನಡೆದಿದೆ. ಈ ಬಗ್ಗೆ ಸ್ಪಷ್ಟೀಕರಣ ನೀಡಿರುವ ಬಿಎಸ್‌ಎಫ್(ಬಹುಜನ ಸ್ಟೂಡೆಂಟ್ಸ್ ಫ್ರಂಟ್) ಎಎಸ್‌ಎ ಸಾಮಾಜಿಕ ನ್ಯಾಯದ ಐಕ್ಯರಂಗವನ್ನು ಸೇರಲು ನಿರಾಕರಿಸಿ ಕಳೆದ ವರ್ಷದಂತೆ ಎನ್‌ಎಸ್‌ಯುಐ ಜತೆಗೂಡಿ ಸ್ಪರ್ಧಿಸಲು ನಿರ್ಧರಿಸಿತು ಎಂದು ಹೇಳಿದೆ.

ಅದೇನೇ ಇರಲಿ, ರೋಹಿತ್ ವೆಮುಲ ಹೆಸರು ಕ್ಯಾಂಪಸ್‌ಗಳಲ್ಲಿ ಬ್ರಾಹ್ಮಣವಾದ ಮತ್ತು ಜಾತಿ–ಆಧಾರಿತ ಪಕ್ಷಪಾತದ ವಿರುದ್ಧ ವಿಶಾಲ ಹೋರಾಟದ ಪ್ರತೀಕವಾಗಿದೆ. ಆದ್ದರಿಂದ ಸಾಮಾಜಿಕ ನ್ಯಾಯದ ಹೋರಾಟಕ್ಕೆ ಬದ್ಧರಾದ ಎಲ್ಲ ಶಕ್ತಿಗಳನ್ನು ಒಟ್ಟುಗೂಡಿಸಿ ಈ ಹೋರಾಟವನ್ನು ಮುಂದುವರೆಸುವುದಾಗಿ ಎಸ್‌ಎಫ್‌ಐ ಹೇಳಿದೆ.



ಅಧ್ಯಕ್ಷ ಕುಲದೀಪ್‌ಸಿಂಗ್ ನಾಗಿ | ಉಪಾಧ್ಯಕ್ಷ ಬುಕ್ಕ ಸುಂದರ್ | ಪ್ರಧಾನ ಕಾರ್ಯದರ್ಶಿ ಸುಮನ್ ದಮೇರ | ಜಂಟಿ ಕಾರ್ಯದರ್ಶಿ ಪಿಲ್ಲಿ ವಿಜಯಕುಮಾರ್ | ಸಾಂಸ್ಕೃತಿಕ ಕಾರ್ಯದರ್ಶಿ ನಪ್ಪೊ ದೇಬ್‌ಬರ್ಮ | ಕ್ರೀಡಾ ಕಾರ್ಯದರ್ಶಿ ಉಷ್ಣಿಷ್ ದಾಸ್

ಕಾವೇರಿ : ಪರಿಸ್ಥಿತಿ ತಿಳಿಯಾಗಿದೆ, ಆದರೆ...

ಸಂಪಾದಕೀಯ

ಕಾವೇರಿ ವಿವಾದದಲ್ಲಿ ಕೊನೆಗೂ ಕೇಂದ್ರ ಸರಕಾರ ಮಧ್ಯಪ್ರವೇಶ ಮಾಡಿದೆ.

ಅಕ್ಟೋಬರ್ 1 ರಂದು ಜೆಡಿ(ಎಸ್) ನಾಯಕ ದೇವೇಗೌಡರ ಉಪವಾಸ, ಸೂಕ್ತ ಮಧ್ಯಪ್ರವೇಶ ಮಾಡುವ ಬಗ್ಗೆ ಫೋನ್ ಮೂಲಕ ಪ್ರಧಾನಿ ಭರವಸೆ, ಅ. 3 ರಂದು ಕೇಂದ್ರ ಸರಕಾರದ ಮರು ಪರಿಶೀಲನಾ ಅರ್ಜಿ, ಅ.4 ಸುಪ್ರೀಂ ಕೋರ್ಟಿನ ಆದೇಶ – ಇವುಗಳಿಂದ ಬಿಕ್ಕಟ್ಟು ಸದ್ಯಕ್ಕೆ ತಿಳಿಯಾಗಿದೆ. ಆದರೆ ವಿವಾದ ಇನ್ನೂ ಬಗೆಹರಿದಿಲ್ಲ. ತಾತ್ಕಾಲಿಕವಾಗಲಿ ಶಾಶ್ವತ ಪರಿಹಾರ ಇನ್ನೂ ಸಿಕ್ಕಿಲ್ಲ.

ಅಕ್ಟೋಬರ್ 3 ರಂದು ಕರೆದಿದ್ದ ವಿಧಾನ ಮಂಡಳದ ತುರ್ತು ಅಧಿವೇಶನ ಕರ್ನಾಟಕದ ಬೆಳೆಗಳಿಗೆ ನೀರು ಬಿಡಲು ನಿರ್ಣಯ ಮಾಡಿತು. ಕುಡಿಯುವ ನೀರಿನ ಉದ್ದೇಶಕ್ಕೆ ಅಗತ್ಯವಾದ 27.60 ಟಿಎಂಸಿ ಮೀರಿ ಒಟ್ಟು 34.13 ಟಿಎಂಸಿ ಸಂಗ್ರಹವಾಗಿರುವ ಹಿನ್ನೆಲೆಯಲ್ಲಿ ಈ ಹೆಚ್ಚುವರಿ ನೀರನ್ನು ರೈತರ ಬೆಳೆಗಳಿಗೆ ಹರಿಸಲು ನಿರ್ಣಯ ಮಾಡಿತು. ಆ ಮೂಲಕ ಪರೋಕ್ಷವಾಗಿ ತಮಿಳುನಾಡಿಗೆ ನೀರು ಬಿಡಲು ಅನುವು ಮಾಡಿಕೊಟ್ಟಿತು.

ಕಾವೇರಿ ನಿರ್ವಹಣಾ ಮಂಡಳಿ ರಚನೆಗೆ ಸುಪ್ರೀಂ ಕೋರ್ಟು ನೀಡಿರುವ ಆದೇಶವನ್ನು ಮಾರ್ಪಾಟು ಮಾಡಲು ಕೋರಿ ಕೇಂದ್ರ ಸರಕಾರ ಅಕ್ಟೋಬರ್ 3ರಂದು ಮಾಪಾಟು ಅರ್ಜಿ ಸಲ್ಲಿಸಿತು. ಕಾವೇರಿ ನಿರ್ವಹಣಾ ಮಂಡಳಿ ರಚಿಸುವಂತೆ ಸುಪ್ರೀಂ ಕೋರ್ಟು ತನ್ನ ಸೆ. 20 ಮತ್ತು ಸೆ. 30ರ ಆದೇಶದಲ್ಲಿ ನಿರ್ದೇಶಿಸಿದಾಗ ಅದನ್ನು ಒಪ್ಪಿಕೊಂಡಿದ್ದ ಅಟಾರ್ನಿ ಜನರಲ್ ಮುಕುಲ್ ರೊಹಟಗಿ, ಬಹುಶಃ ಪ್ರಧಾನಿ ನಿರ್ದೇಶನದಂತೆ ಈ ಅರ್ಜಿ ಸಲ್ಲಿಸಿದರು.

ಸಂವಿಧಾನದ 262ನೇ ಕಲಂ ಪ್ರಕಾರ ಅಂತರರಾಜ್ಯ ನದಿ ನೀರು ವ್ಯಾಜ್ಯಗಳು ಸುಪ್ರೀಂ ಕೋರ್ಟಿನ ವ್ಯಾಪ್ತಿಗೆ ಬರುವುದಿಲ್ಲ. ಶಾಸನಾತ್ಮಕ ಪ್ರಕ್ರಿಯೆ ಮೂಲಕ ಮಂಡಳಿ ರಚನೆ ಮಾಡಬೇಕಾಗುತ್ತದೆ. ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದರೆ ಮಾತ್ರ ಮಂಡಳಿ ರಚನೆ ಆಗುತ್ತದೆ. ಆದ್ದರಿಂದ ನಿರ್ವಹಣಾ ಮಂಡಳಿ ರಚಿಸುವಂತೆ ಆದೇಶ ನೀಡುವುದು ಸುಪ್ರೀಂ ಕೋರ್ಟು ನಿರ್ದೇಶನ ನೀಡುವಂತಿಲ್ಲ. ಹೀಗೆ ನಿರ್ದೇಶನ ನೀಡಿದರೆ ಅಂತರರಾಜ್ಯ ಜಲವಿವಾದ ಕಾಯಿದೆ–1956ರ ಕಲಮು 15ರ ಅಡಿ ಕೇಂದ್ರ ಸರಕಾರಕ್ಕೆ ಇರುವ ಅಧಿಕಾರವನ್ನು ಕಿತ್ತು–ಕೊಂಡಂತಾಗುತ್ತದೆ. ಎಂಬುದು ಮಾರ್ಪಾಟು ಅರ್ಜಿಯ ಪ್ರಮುಖ ವಾದವಾಗಿತ್ತು. ಅಲ್ಲದೆ ನಿರ್ವಹಣಾ ಮಂಡಳಿ ರಚನೆಗೆ ಶಿಫಾರಸು ಮಾಡಿದ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪು ಪ್ರಶ್ನಿಸಿ ನಾಲ್ಕೂ ರಾಜ್ಯಗಳು ಸಲ್ಲಿಸಿದ ಅರ್ಜಿಗಳು ವಿಚಾರಣೆಯಲ್ಲಿವೆ. ಆದ್ದರಿಂದ ಕಾವೇರಿ ನಿರ್ವಹಣಾ ಮಂಡಳಿಯ ರಚನೆಯ ಆದೇಶವನ್ನು ಮಾರ್ಪಾಟು ಮಾಡಬೇಕೆಂದು ಈ ಅರ್ಜಿಯಲ್ಲಿ ಅಟಾರ್ನಿ ಜನರಲ್ ಮನವಿ ಮಾಡಿಕೊಂಡರು.

ಇದಲ್ಲದೆ ಕೇಂದ್ರ ಸರಕಾರ ಸಲ್ಲಿಸಿದ ಮಾರ್ಪಾಟು ಅರ್ಜಿಯಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ವಾಸ್ತವ ಸ್ಥಿತಿ ಅಧ್ಯಯನಕ್ಕೆ ಹೈ–ಪವರ್ ಟೆಕ್ನಿಕಲ್ ಸಮಿತಿ ರಚನೆ ಮಾಡುವುದಾಗಿ ಹೇಳಿತು. ಸಮಿತಿ ಎರಡೂ ರಾಜ್ಯಗಳ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರವಾಸ ಮಾಡಿ ವಾಸ್ತವ ಸ್ಥಿತಿ ಮತ್ತು ನೀರಿನ ಅಗತ್ಯತೆಯನ್ನು ಅಧ್ಯಯನ ಮಾಡಿ ಸುಪ್ರೀಂ ಕೋರ್ಟಿಗೆ ವರದಿ ಮಾಡಲಿದೆ ಎಂದೂ ಮರು ಪರಿಶೀಲನಾ ಅರ್ಜಿಯಲ್ಲಿ ಹೇಳಲಾಗಿತ್ತು.

ಅಕ್ಟೋಬರ್ 4ರಂದು ಕೇಂದ್ರ ಸರಕಾರದ ಹಾಗೂ ಕರ್ನಾಟಕ ಸರಕಾರದ ಮರುಪರಿಶೀಲನಾ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಸುಪ್ರೀಂ ಕೋರ್ಟು ಕೇಂದ್ರ ಸರಕಾರ ಸಲ್ಲಿಸಿದ ಮಾರ್ಪಾಟು ಅರ್ಜಿಯ ಅಂಶಗಳನ್ನು ಮನ್ನಿಸಿತು. ಕೇಂದ್ರ ಸರಕಾರ ರಚಿಸಿದ ತಂಡ 10 ದಿನಗಳ ಕಾಲ ಕಾವೇರಿ ಕಣಿವೆಯಲ್ಲಿ ಸಂಚರಿಸಿ ಅಧ್ಯಯನ ನಡೆಸಿ ವಸ್ತುಸ್ಥಿತಿ ಅರಿಯಬೇಕು. ಆ ಕುರಿತು ವರದಿಯನ್ನು ಅಕ್ಟೋಬರ್ 17ರೊಳಗೆ ಸಲ್ಲಿಸಬೇಕು ಅಲ್ಲಿಯ ತನಕ 12 ದಿನಗಳ ಕಾಲ (ಅಂದರೆ ಅ. 18ರ ವರೆಗೆ) ನಿತ್ಯ 2 ಸಾವಿರ ಕ್ಯುಸೆಕ್ಸ್ ನೀರು ಬಿಡಬೇಕು ಎಂದು ಆದೇಶಿಸಿತು.

ಕೇಂದ್ರದ ತಜ್ಞರ ತಂಡ ಈ ಬರಹ ಪ್ರಿಂಟಿಗೆ ಹೋಗುವ ಹೊತ್ತಿಗೆ (ಅಕ್ಟೋಬರ್ 7 ಮಧ್ಯಾಹ್ನ) ಬೆಂಗಳೂರಿಗೆ ಬಂದು ಜಲಸಂಪನ್ಮೂಲ ಸಚಿವ ಮತ್ತು ಅಧಿಕಾರಿಗಳ ತಂಡ ಭೇಟಿ ಮಾಡಿದೆ. ರಾಜ್ಯ ಸರಕಾರದ ಪರವಾಗಿ ತಂಡಕ್ಕೆ ಮನವಿ ಸಲ್ಲಿಸಲಾಗಿದೆ. ಕಾವೇರಿ ಕೊಳ್ಳದ ಭೇಟಿಗೆ ತಂಡ ಹೊರಟಿದೆ. ತಂಡದ ನಾಯಕತ್ವವನ್ನು ಕೇಂದ್ರ ಜಲ ಆಯೋಗದ ಅಧ್ಯಕ್ಷ ಜಿ.ಎಸ್.ಝಾ ವಹಿಸಿದ್ದಾರೆ. ತಂಡದಲ್ಲಿ ಜಲ ಆಯೋಗದ ಸದಸ್ಯ ಸೈಯದ್ ಮಸೂದ್ ಹುಸೇನ್, ಗೋದಾವರಿ ಮತ್ತು ಕೃಷ್ಣಾ ಕಣಿವೆಯ ಮುಖ್ಯ ಇಂಜಿನೀಯರ್ ಆರ್.ಕೆ.ಗುಪ್ತ, ಕಾವೇರಿ ಕೊಳ್ಳದ ನಾಲ್ಕೂ ರಾಜ್ಯಗಳ ಜಲಸಮನ್ಮೂಲ ಇಲಾಖೆ ಮುಖ್ಯ ಇಂಜಿನೀಯರುಗಳು ಇದ್ದಾರೆ. ರಾಜ್ಯ ಜಲಸಂಪನ್ಮೂಲ ಇಲಾಖೆ ಕಾರ್ಯದಶಿ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಕೆ.ಆರ್.ಎಸ್. ಅಣೆಕಟ್ಟಿನ ಮುಖ್ಯ ಇಂಜಿನೀಯರುಗಳು ಈ ತಂಡಕ್ಕೆ ಅಗತ್ಯ ಮಾಹಿತಿ ಒದಗಿಸುತ್ತಾರೆ. ತಂಡ ಕಬಿನಿ, ಕೆ.ಆರ್.ಎಸ್., ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಗೆ ಖುದ್ದು ಬೇಟಿ ನೀಡಿ ಮಾಹಿತಿ ಪಡೆಯಲಿದೆ. ಅ. 8ರಂದು ತಮಿಳುನಾಡಿನ ಮೆಟ್ಟೂರು ಜಲಾಶಯದ ನೀರಿನ ಸಂಗ್ರಹಣೆ ಮತ್ತು ಬೆಳೆಗಳ ಪರಿಸ್ಥಿತಿ ಪರಿಶೀಲಿಸಲಿದೆ.

ಇವೆಲ್ಲದರಿಂದ ಸದ್ಯಕ್ಕೆ ತೀರಾ ಬಿಗಡಾಯಿಸಿದ್ದ ಮತ್ತು ಸಾಂವಿಧಾನಿಕ ಬಿಕ್ಕಟ್ಟಿನತ್ತ ಜಾರುತ್ತಿದ್ದ ಪರಿಸ್ಥಿತಿ ತಿಳಿಯಾಗಿದೆ. ಆದರೆ ನಿಜವಾದ ಸಮಸ್ಯೆ ಹಾಗೇ ಇದೆ. ಈ ತಿಂಗಳ ಆರಂಭದಿಂದ ಎರಡೂ ರಾಜ್ಯಗಳಲ್ಲಿ ಪ್ರಮುಖ ಪಕ್ಷಗಳು ತಮ್ಮ ಚುನಾವಣಾ ರಾಜಕೀಯದ ದೃಷ್ಟಿಯಿಂದ ಈ ಬಿಕ್ಕಟ್ಟು ಸೃಷ್ಟಿಸಿದ್ದವು. ಪ್ರಮುಖ ರಾಜಕೀಯ ಪಕ್ಷಗಳು, ಕೇಂದ್ರ ಸರಕಾರ, ರಾಜ್ಯ ಸರಕಾರಗಳು, ನ್ಯಾಯಾಂಗ ಎಲ್ಲವೂ ಕಾವೇರಿ ನದಿ ನೀರಿನ ಹಂಚಿಕೆಯ ಸಮಸ್ಯೆಯನ್ನು ಕಗ್ಗಂಟಾಗಿಸುತ್ತಾ ಬಿಕ್ಕಟ್ಟಿನತ್ತ ತೆಗೆದು–ಕೊಂಡು ಹೋಗಿದ್ದವು. ಈಗ ಆಗಿದ್ದು ಸೆಪ್ಟೆಂಬರ್ ಆದಿಯಲ್ಲೇ ಆಗಬಹುದಾಗಿತ್ತು. ಈ ಕಾಲಮುಗಳಲ್ಲಿ ಹಿಂದೆಯೂ ವಾದಿಸಿದಂತೆ ಕೇಂದ್ರ ಮಧ್ಯಪ್ರವೇಶ ಮಾಡಿ ರಾಜ್ಯ ಸರಕಾರಗಳ ನಡುವೆ ಮಾತುಕತೆ ನಡೆಸುವುದು ಮಾತ್ರ ಇದಕ್ಕೆ ಪರಿಹಾರ. ಇದಕ್ಕೆ ನ್ಯಾಯಾಲಯಗಳ ಮೂಲಕ ಪರಿಹಾರ ಸಾಧ್ಯವಿಲ್ಲ ಎಂಬುದು ಪುನಃ ಸಾಬೀತಾಗಿದೆ.



ಕೃಪೆ: ಪಿ. ಮಹಮ್ಮದ್, ಪ್ರಜಾವಾಣಿ

ಆದರೆ ಈಗಲೂ ರಾಜಕೀಯ ಪಕ್ಷಗಳು, ಸರಕಾರಗಳು ಸಮಸ್ಯೆಯ ತಾತ್ಕಾಲಿಕ ಅಥವಾ ಶಾಶ್ವತ ಪರಿಹಾರ ಹುಡುಕುವತ್ತ ಪ್ರಯತ್ನ ಮಾಡುತ್ತಾರೆ ಎಂಬ ಗ್ಯಾರಂಟಿ ಇನ್ನೂ ಇಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಮೂರೂ ಪಕ್ಷಗಳು ತಮ್ಮ ಪಕದ ರಾಜಕೀಯಕ್ಕೆ ಕಾವೇರಿ ವಿವಾದವನ್ನು ದಾಳ ಮಾಡಿಕೊಳ್ಳಬಹುದು ಎಂಬ ಲೆಕ್ಕಾಚಾರಗಳು ತಲೆಕೆಳಗಾಗುವ ಸೂಚನೆ ಕಂಡು ಬಂದಿದ್ದರಿಂದಷ್ಟೇ ತಾವೇ ಸೃಷ್ಟಿಸಿದ ಬಿಕ್ಕಟ್ಟು ತಿಳಿಯಾಗಿಸಿವೆ. ಬಿಕ್ಕಟ್ಟು ಹೀಗೆ ಮುಂದುವರೆದರೆ ಬಿಜೆಪಿಗೆ ಹಿನ್ನಡೆಯಾಗಬಹುದು. ಕಾಂಗ್ರೆಸ್, ಜೆಡಿ(ಎಸ್) ಗಳಿಗೆ ರಾಜಕೀಯ ಪ್ರಯೋಜನವಾಗಬಹುದು ಎಂಬ ಆತಂಕ ಕೇಂದ್ರ ಸರಕಾರದ ಮಧ್ಯಪ್ರವೇಶಕ್ಕೆ ಕಾರಣವಾದಂತೆ ಕಾಣುತ್ತದೆ ಕಾಂಗ್ರೆಸ್ ಸಹ ನ್ಯಾಯಾಂಗ ನಿಂದನೆಯ ತೂಗುಗತ್ತಿಯ ಆತಂಕದಿಂದ ತಿಳಿಯಾಗಿಸುವತ್ತ ಹೆಜ್ಜೆ ಹಾಕಿತು. ದೇವೇಗೌಡರ ಉಪವಾಸ, ನಾರಿಮನ್ ಅವರು ವಾದದಿಂದ ಹಿಂತೆಗೆದದ್ದೂ ಈ ಬೆಳವಣಿಗೆಗಳಿಗೆ ಪೂರಕವಾಯಿತು.

ಆದರೆ ಕಾವೇರಿ ಕೊಳ್ಳದ ರೈತರ ಆತಂಕ ಇನ್ನೂ ಹೋಗಿಲ್ಲ. 1.88 ಲಕ್ಷ ಎಕರೆ ಬೆಳೆ ನಷ್ಟವಾಗಿದೆ. 4.76 ಲಕ್ಷ ಎಕರೆಯಲ್ಲಿ ಬೆಳೆ ಇದೆ. ಎಷ್ಟು ಪ್ರದೇಶದಲ್ಲಿ ಬಿತ್ತನೆ ಆಗಬೇಕಿತ್ತು, ಎಷ್ಟರಲ್ಲಿ ಬೆಳೆ ಇದೆ, ರೈತರಿಗೆ ಎಷ್ಟು ನಷ್ಟವಾಗಿದೆ – ಇವೆಲ್ಲದರ ಬಗ್ಗೆ ಸಮೀಕ್ಷೆ ನಡೆಸಿ ಪರಿಹಾರ ನೀಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಹೇಳಿದ್ದಾರೆ. ರೈತರಿಗೆ ಸೂಕ್ತ ಪರಿಹಾರ ಕೊಡುವ ಬಗ್ಗೆ ಶೀಘ್ರದಲ್ಲೇ ಸರಕಾರ ನಿರ್ಣಯ ಕೈಗೊಳ್ಳಬೇಕು.

ಈ ವಾರ ಚರಿತ್ರೆಯಲ್ಲಿ

4 ಅಕ್ಟೋಬರ್, 1957 ಸ್ಪುಟ್ನಿಕ್ ಉಡಾವಣೆ

ಈ ದಿನದಂದು ಜಗತ್ತಿನ ಮೊದಲ ಉಪಗ್ರಹವನ್ನು ಆಗಿನ ಸೋವಿಯೆಟ್ ಒಕ್ಕೂಟ ಬಾಹ್ಯಾಕಾಶಕ್ಕೆ ಹಾರಿ ಬಿಟ್ಟು ವೈಜ್ಞಾನಿಕ–ತಾಂತ್ರಿಕ ಕ್ರಾಂತಿಯ ಹೊಸ ಯುಗವೊಂದನ್ನು ಆರಂಭಿಸಿತು. ಸ್ಪುಟ್ನಿಕ್ ಎಂದು ಕರೆಯಲಾದ 23 ಇಂಚು ವ್ಯಾಸವಿದ್ದ ಗೋಳಾಕಾರದ ಉಪಗ್ರಹವನ್ನು ಈಗ ಕಝಾಕಿಸ್ತಾನದಲ್ಲಿರುವ ಬೈಕಾನೋರ್ ಉಡಾವಣಾ ಕೇಂದ್ರದಿಂದ ಹಾರಿ ಬಿಡಲಾಯಿತು. ಅದು ಭೂಮಿ ಸುತ್ತ ಸೆಕೆಂಡಿಗೆ 8100 ಮೀಟರ್ ವೇಗದಲ್ಲಿ 96.2 ನಿಮಿಷಗಳಲ್ಲಿ ಭೂಮಿ ಸುತ್ತ ಒಂದು ಸುತ್ತು ಮುಗಿಸುತ್ತಿತ್ತು. ಅದು ರೇಡಿಯೋ ಸಂವಹನವನ್ನು ಹೊಂದಿದ್ದು 3 ತಿಂಗಳುಗಳ ಕಾಲ ಭೂಮಿ ಸುತ್ತ ತಿರುಗಿ ವಿಜ್ಞಾನಿಗಳಿಗೆ ಭೂಮಿಯ ವಾತಾವರಣದ ಬಗ್ಗೆ ಬಾಹ್ಯಾಕಾಶದ ಬಗ್ಗೆ ಹಲವು ಸಂಶೋಧನೆಗಳಲ್ಲಿ ಸಹಾಯಕವಾಯಿತು.

ಸೋವಿಯೆಟ್ ಒಕ್ಕೂಟದ ಈ ವೈಜ್ಞಾನಿಕ ಪ್ರಗತಿ ಜಗತ್ತನ್ನೇ ದಂಗು ಬಡಿಸಿತ್ತು. ಅಮೆರಿಕದಲ್ಲಂತೂ ಒಂದು ಬಿಕ್ಕಟ್ಟನ್ನೇ ಉಂಟು ಮಾಡಿತು. ಇದು ಬಾಹ್ಯಾಕಾಶ ವಿಜ್ಞಾನದಲ್ಲಿ ಸ್ಪರ್ಧೆ ಆರಂಭಿಸಿ ಅಮೆರಿಕದ ಮತ್ತು ಇಡೀ ಜಗತ್ತಿನ ವಿಜ್ಞಾನದ ಪ್ರಗತಿಗೆ ಕುಮ್ಮಕ್ಕು ಕೊಟ್ಟಿತು. ಸೋವಿಯೆಟ್ ಒಕ್ಕೂಟದ ವೈಜ್ಞಾನಿಕ ಪ್ರಗತಿಗೆ ಬೆದರಿದ ಅಮೆರಿಕ 'ಶೀತ ಸಮರ' ಆರಂಭಿಸಿತು. ಇದು ಅಮೆರಿಕ ಮತ್ತು ಸೋವಿಯೆಟ್ ಒಕ್ಕೂಟಗಳ ನಡುವೆ ದಶಕಗಳ ಕಾಲ ವೈಜ್ಞಾನಿಕ, ಮಿಲಿಟರಿ, ರಾಜಕೀಯ ಪೈಪೋಟಿ ಉಂಟು ಮಾಡಿತು.

ಫೇಸ್ ಬುಕ್‌ನಲ್ಲಿ

ದಲಿತರ 'ಚಲೋ ಉಡುಪಿ' ಕಾರ್ಯಕ್ರಮ ಹಿಂದುತ್ವವಾದಿಗಳಲ್ಲಿ ಭಯ ಹುಟ್ಟಿಸಿದೆ.. 'ದಲಿತರು ಎಷ್ಟೇ ಹೋರಾಟ ನಡೆಸಿದರೂ ಚಿಂತೆಯಿಲ್ಲ. ಅದರಿಂದ ನಮಗೇನೂ ಭಯವಿಲ್ಲ. ಆದರೆ, ಅಂತಹ ಹೋರಾಟಗಳಲ್ಲಿ ಕಮ್ಯುನಿಷ್ಟರು ಜೊತೆಗೂಡಬಾರದಷ್ಟೆ' ಎಂದು ಮನುವಾದಿಗಳು ಹೇಳತೊಡಗಿದ್ದಾರೆ. ಕಮ್ಯುನಿಷ್ಟರು ದಲಿತರಲ್ಲಿ ಎಡಚಿಂತನೆ ಬಿತ್ತುವ ಮೂಲಕ ಅವರನ್ನು ಜಾಗೃತಗೊಳಿಸುತ್ತಾರೆ ಎಂಬ ಭಯ ಪುರೋಹಿತಶಾಹಿಗಳನ್ನು ಕಾಡತೊಡಗಿದೆ. ಶೋಷಿತ ಜನರಲ್ಲಿ ಜಾಗೃತಿ ಮೂಡುವುದನ್ನು ಕಂಡು ಹಿಂದೂ ಮಾತ್ರವಲ್ಲದೆ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳ ಪುರೋಹಿತಶಾಹಿಗಳು/ ಮೂಲಭೂತವಾದಿಗಳಿಗೂ ಭಯ ಉಂಟಾಗಿದೆ. ಹಾಗಾಗಿಯೇ ದಲಿತರನ್ನು ಕಮ್ಯುನಿಷ್ಟರ ಹಿಡಿತದಿಂದ ಹೊರತರಬೇಕೆಂದು ಹೇಳತೊಡಗಿದ್ದಾರೆ.

ಇಂತದೇ ಹೇಳಿಕೆಯನ್ನು ನಮ್ಮ ಕೆಲ ಕಮ್ಯುನಿಸ್ಟ್ ವಿರೋಧಿ ದಲಿತ ಚಿಂತಕರೂ ಹೇಳುವ ಮೂಲಕ, ತಮಗೆ ಅರಿವಿಲ್ಲದಂತೆ ಪುರೋಹಿತಶಾಹಿಗಳ ಹಿತ ಕಾಯತೊಡಗಿದ್ದಾರೆ. ತಮಗಿರುವ ಬಡತನ, ಹಸಿವು, ಅನಕ್ಷರತೆ. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳಿಗೆ ಮೂಲ ಕಾರಣವನ್ನು ದಲಿತರು ತಿಳಿದುಕೊಳ್ಳಲು ಬಿಡಿ. ಮೊದಲು ಅವರಲ್ಲಿರುವ ಮೌಢ್ಯತೆಗಳು ತೊಲಗಿ, ವೈಜ್ಞಾನಿಕ ಚಿಂತನೆಗೆ ತೊಡಗಲಿ. ನಂತರ ಕೆಂಪ್ರೋ, ನೀಲಿಯೋ ಅಥವಾ 'ನೀಲಿ ಆಕಾಶದಲಿ ಕೆಂಪು ಸೂರ್ಯನೋ' ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಯಾವ ಹಾದಿಯಲ್ಲಿ ಸಾಗಬೇಕೆಂಬ ಆಯ್ಕೆಯ ಹಕ್ಕು ಅವರಿಗೆ ಇದ್ದೇ ಇರುತ್ತದೆ.

– ಸಿ. ಸಿದ್ದಯ್ಯ

ತೋರಣಗಲ್ ಡಾಂಬಾರ್ ಕಾರ್ಖಾನೆ ಬೇಡ: ಮುಂದುವರೆದ ಆಕ್ರೋಶ



ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್‌ನಲ್ಲಿ ಡಾಂಬಾರ್ ಕಾರ್ಖಾನೆಯ ಸ್ಥಾಪನೆ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಮತ್ತಿತರ ಹಲವು ಸಂಘಟನೆಗಳ ನೇತೃತ್ವದಲ್ಲಿ ಹೋರಾಟ ಮತ್ತೆ ಮುಂದುವರೆದಿದೆ. ತಹಶೀಲ್ದಾರ್‌ರವರು ಕಾರ್ಖಾನೆ ಮುಚ್ಚುವುದಾಗಿ ಭರವಸೆ ಈಡೇರದೆ ಕೆಲಸ ಮುಂದುವರೆದ ಪರಿಣಾಮ ಗ್ರಾಮಸ್ಥರ ಆಕ್ರೋಶ ಮತ್ತೆ ಬುಗಿಲೆದ್ದಿದೆ.

ಸೆಪ್ಟಂಬರ್ 27ರಂದು ತೋರಣಗಲ್ಲು ಗ್ರಾಮಸ್ಥರು ಎನ್‌ಓಸಿ ಇಲ್ಲದೆ ಪ್ರಾರಂಭಿಸಿರುವ ಕಾರ್ಖಾನೆಯನ್ನು ನೆಲಸಮ ಮಾಡಬೇಕೆಂದು ಗ್ರಾಮ ಪಂಚಾಯತಿಯನ್ನು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಬೆಳಿಗ್ಗೆ 11 ಘಂಟೆಗೆ ಪ್ರಾರಂಭವಾದ ಪ್ರತಿಭಟನೆ ಶಾಂತಿಯುತವಾಗಿ ಮುಂದುವರೆದಿತ್ತು.

ಆದರೆ ಮಧ್ಯಾಹ್ನ 1.15ಕ್ಕೆ ಕಂಪನಿಯ ಅಧಿಕಾರಿಗಳು 300ಕ್ಕೂ ಹೆಚ್ಚಿನ ಜನರನ್ನು ಕಂಪನಿ ಬಸ್‌ನಲ್ಲಿ ಕರೆತಂದು ಬಡಿಗೆ ಮಾರಕಾಸ್ತ್ರಗಳಿಂದ ಶಾಂತಿಯುತವಾಗಿ ಪ್ರತಿಭಟನೆ ನಡೆಸುವವರ ಮೇಲೆ ಏಕಾಏಕಿಯಾಗಿ ಹಲ್ಲೆಗೆ ಮುಂದಾದರು. ಪ್ರಾಣಹಾನಿ ಬೆದರಿಕೆ ಹಾಕಿದರು. ದಲಿತ ಸಮುದಾಯದವರನ್ನು ಗುರಿಯಾಗಿಸಿ ಜಾತಿ ನಿಂದನೆ ಕೂಡ ಮಾಡಿದ್ದಾರೆ.

ಜೆಎಸ್‌ಡಬ್ಲ್ಯೂ ಕಾರ್ಖಾನೆಯು ಅಮಾಯಕ ಕಾರ್ಮಿಕರನ್ನು ರೂ.200 ಕೊಟ್ಟು ಪ್ರತಿ ಗ್ರಾಮದಿಂದ ಗುತ್ತಿಗೆ ಆಧಾರದಲ್ಲಿ ದುಡಿಯುವ 7–8 ಜನ ಕಾರ್ಮಿಕರಿಗೆ ತಪ್ಪು ಮಾಹಿತಿ ನೀಡಿ ಡಾಂಬರ್ ಕಾರ್ಖಾನೆ ಬೇಕು ಎಂದು ಜನರನ್ನು ಪುಸಲಾಯಿಸಲಾಗುತ್ತಿದೆ. ತಾಳುರು ಗ್ರಾಮದ ಕಾರ್ಮಿಕರು ಒಲ್ಲದ ಮನಸ್ಸಿನಿಂದ ಅಧಿಕಾರಿಗಳ ಒತ್ತಡಕ್ಕೆ ಮಣಿದು ಗುತ್ತಿಗೆದಾರರ ಪರವಾಗಿ ನಿಂತಿದ್ದರು.

ಪ್ರತಿಭಟನೆ ಮುಂಚಿತವಾಗಿ ಕಾರ್ಖಾನೆ ಸ್ಥಾಪನೆ ವಿರುದ್ಧ ಪ್ರತಿಭಟನೆ ನಡೆಸುವ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿ ಅನುಮತಿ ಪಡೆಯಲಾಗಿತ್ತು. ಅದೇ ಸಮಯದಲ್ಲಿ ಕಾರ್ಖಾನೆ ಪರವಾಗಿರುವವರನ್ನು ಸ್ಥಳಕ್ಕೆ ಆಗಮಿಸುವಂತೆ ಠಾಣಾ ಅಧಿಕಾರಿ ಮಹಮ್ಮದ್ ರಫೀಕ್, ಕರ್ತವ್ಯ ನಿರತ ಪೊಲೀಸ್ ಅಧಿಕಾರಿ ಮಲ್ಲೇಶ್ ಡಿ., ಮಹೇಶ್ ಗೌಡ, ಮುಂದಾಗಿದ್ದು ಕಾರ್ಖಾನೆ ಅಣತಿಯಂತೆ ನಡೆದುಕೊಳ್ಳುತ್ತಿದ್ದಾರೆ.

ನ್ಯಾಯಕ್ಕಾಗಿ ಹೋರಾಟ ಮಾಡುವ ಮುಖಂಡರ ಮೇಲೆ ಜಿಂದಾಲ್ ಹೇಳಿದ ಹಾಗೆ ಸುಳ್ಳು ಕೇಸ್ ದಾಖಲಿಸುವ ಪೊಲೀಸ್ ಇಲಾಖೆ. ಕಾರ್ಖಾನೆ ಸ್ಥಾಪನೆ ಸಂಬಂಧಿಸಿ ಪರ ವಿರುದ್ಧ ಇರುವ ಎರಡು ಗುಂಪುಗಳ ನಡುವೆ ವಾಗ್ವಾದ ನಡೆದಿದ್ದರಿಂದ ಕೇಸು ದಾಖಲಾಗಿದೆ ಎಂದು ಪೊಲೀಸರು ಹೇಳುತ್ತಿದ್ದಾರೆ. ಇದು ಅಪ್ಪಟ್ಟ ಸುಳ್ಳು ಗಲಭೆಗೆ ಮುಂದಾದ ಗುತ್ತಿಗೆದಾರರನ್ನು ಬಿಟ್ಟು ಕೇವಲ ಹೋರಾಟಗಾರರ ಮೇಲೆ ಮಾತ್ರ ಕೇಸು ದಾಖಲಿಸಿದ್ದಾರೆ. ಗುತ್ತಿಗೆದಾರರ ಮೇಲೆ ಕೇಸು ದಾಖಲಿಸಿಲು ತೋರಣಗಲ್ಲು ಗ್ರಾಮದ ಮಹಿಳೆಯರ ಪೊಲೀಸ್ ಠಾಣೆ ಹೋದರೆ ಅವರ ವಿರುದ್ಧವೇ ದೌರ್ಜನ್ಯ ನಡೆಸಿದ್ದಾರೆ.

ಪ್ರತಿಭಟನಾ ದಿನದಂದು ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಜನರು ಭಾಗವಹಿಸಿದ್ದರು. ಧರಣಿ ಸ್ಥಳದ ಗಲಭೆ ನಂತರದಲ್ಲಿ ಇದುವರೆಗೆ ಸುಮಾರು 35 ಜನರ ಮೇಲೆ ಕೇಸು ದಾಖಲಿಸಿದ್ದು, ಗಲಭೆ ನಂತರ 8 ಜನರನ್ನು ಜೈಲಿಗೆ ಹಾಕಲಾಗಿತ್ತು. ಇವರಲ್ಲಿ ಡಿವೈಎಫ್‌ಐ ತಾಲ್ಲೂಕು ಅಧ್ಯಕ್ಷರಾದ ಅರ್ಜುನ್, ಘಟಕ ಕಾರ್ಯದರ್ಶಿ ಎಂ.ಡಿ.ಶೇಷಾ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಲೋಕೇಶ್ ಪ್ರಮುಖರು. ಕೇಸುದಾರರರಿಗೆ ಜಾಮೀನು ಸಿಗದಂತೆ ಮಾಡಲು ಹಲವು ಸುಳ್ಳು ಪ್ರಕರಣಗಳನ್ನು ಕೊಲೆ ಆರೋಪಗಳನ್ನು ಹೊರಿಸಲು ಪೊಲೀಸ್ ಇಲಾಖೆ ಮುಂದಾಗಿತ್ತು. ಸಂಘಟನೆಯ ಸತತ ಪ್ರಯತ್ನದಿಂದಾಗಿ ಆರು ದಿನಗಳ ನಂತರದಲ್ಲಿ ಜಾಮೀನಿನ ಮೇಲೆ ಬಿಡುಗಡೆಗೊಂಡರು. ಅಕ್ಟೋಬರ್ 03ರ ಸೋಮವಾರದಂದು ಮತ್ತೆ 18 ಜನರನ್ನು ಜೈಲಿಗೆ ಕಳುಹಿಸಿದ್ದರು ಮತ್ತು ಬುಧವಾರದಂದು ಬಿಡುಗಡೆಗೊಂಡಿದ್ದಾರೆ. 35 ಜನರ ಮೇಲೆ ಮೊಕದ್ದಮೆ ಮುಂದುವರೆದಿದೆ.

ಸೆಪ್ಟಂಬರ್ 27ರ ಮರು ದಿನದಿಂದ ಗ್ರಾಮದಲ್ಲಿ ಮಹಿಳೆಯರು ಮಕ್ಕಳು ಇರುವ ಸಂದರ್ಭವನ್ನು ಗಮನಿಸಿ ಮನೆಗಳಿಗೆ ನಿರಂತರವಾಗಿ ಕಲ್ಲು ತೂರುತ್ತಿದ್ದಾರೆ. ತೋರಣಗಲ್ಲು ಪ್ರದೇಶದ ಜನರನ್ನು ಊರು ಬಿಡಿಸಲು ಮುಂದಾಗುವುದು ಮತ್ತು ಜನತೆಯಲ್ಲಿ ಭಯದ ವಾತಾವರಣ ನಿರ್ಮಾಣ ಮಾಡುವುದು ಕಾರ್ಖಾನೆ ಮತ್ತು ಆಡಳಿತ ವರ್ಗದ ಹುನ್ನಾರ ಆಗಿದೆ.

ಘಟನಾ ಸ್ಥಳಕ್ಕೆ ಜನವಾದಿ ಮಹಿಳಾ ಸಂಘಟನೆ ಮತ್ತು ವಿವಿಧ ಸಂಘಟನೆಯ ಮುಖಂಡರು ಆಗಮಿಸಿ ಜನತೆಯಲ್ಲಿ ವಿಶ್ವಾಸ ಮೂಡಿಸಿದರು. ಅಕ್ಟೋಬರ್ 1, ಶನಿವಾರದಂದು ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿರವರು ಆಗಮಿಸಿದ್ದು ಹೊಸಪೇಟೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಮತ್ತು ಕುಡುತಿನಿ ಪಟ್ಟಣ ಪಂಚಾಯತಿಯಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ತೋರಣಗಲ್‌ನಲ್ಲಿ ಜಿ.ವಿ.ಶ್ರೀರಾಮರೆಡ್ಡಿ, ಆರ್.ಎಸ್.ಬಸವರಾಜು ಸೇರಿದಂತೆ ಇನ್ನಿತರೆ ಮುಖಂಡರು ಮನೆ ಮನೆಗೆ ಭೇಟಿ ನೀಡಿ ಜನತೆಗೆ ಸಾಂತ್ವನ ನೀಡಿದರು ಮತ್ತು ನಿಮ್ಮ ಜೊತೆಗೆ ನಾವಿದ್ದೇವೇ ಎಂದು ಭರವಸೆ ನೀಡಿದರು.

ಗಲಭೆ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ದೂರು ಸ್ವೀಕರಿಸದೆ ಇರುವುದರಿಂದ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿರವನರನು ಭೇಟಿ ಮಾಡಿದ ಪ್ರತಿಭಟನಾಕಾರರು ಮೊಕದ್ದಮೆ ದಾಖಲಿಸಿದ್ದಾರೆ. ಸೆಪ್ಟಂಬರ್ 27ರ ಪ್ರತಿಭಟನೆ ನಂತರದಲ್ಲಿ ಕಾರ್ಖಾನೆ ಸ್ಥಾಪನೆ ಸಂಬಂಧಿಸಿದ ಕಾಮಗಾರಿಗಳು ಸ್ಥಗಿತಗೊಳಿಸಿದ್ದಾರೆ. ●

ನವೆಂಬರ್ 18 ರಂದು ಆದಿವಾಸಿಗಳಿಂದ ಜೈಲುಭರೋ

ಶತ ಶತಮಾನಗಳಿಂದ ವಾಸಮಾಡುತ್ತಾ ಕೃಷಿ ಮಾಡಿಕೊಂಡು ಜೀವಿಸುತ್ತಿರುವ ಆದಿವಾಸಿಗಳಾದ ಮಲೆಕುಡಿಯರಿಗೆ ಅವರ ಸ್ವಾದೀನದ ಭೂಮಿಯ ಹಕ್ಕನ್ನು ನೀಡದ ಕಾಂಗ್ರೆಸ್, ಬಿಜೆಪಿ ಪಕ್ಷಗಳು ನಮ್ಮ ದೇಶವನ್ನಾಳುವ ಪ್ರಧಾನ ಶತ್ರುಗಳಾಗಿವೆ ಎಂದು ಸಿಪಿಐ(ಎಂ) ನಾಯಕ ನ್ಯಾಯವಾದಿ ಬಿ.ಎಂ.ಭಟ್ ಹೇಳಿದರು.

ಅವರು ಅಕ್ಟೋಬರ್ 05ರಂದು ಭೂಮಿಯ ಹಕ್ಕು, ಸಮುದಾಯ ಹಕ್ಕು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆಗ್ರಹಿಸಿ ಬೆಳ್ತಂಗಡಿ ತಾಲೂಕು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತಾನಾಡಿದರು.

ಬಂಡವಾಳಶಾಹಿ ಕಂಪೆನಿ ಕೃಷಿಗೆ ಮುಂದಾಗಿ ರೈತರ ಭೂಮಿಯನ್ನು ಕಿತ್ತುಕೊಳ್ಳುವ ಮಸೂದೆ ಮಾಡುವ ಕಾಂಗ್ರೆಸ್, ಬಿಜೆಪಿ ಪಕ್ಷಗಳೇ ರೈತರ ನಿಜವಾದ ಶತ್ರುಗಳು ಎಂದರು. ಅದೇ ರೀತಿ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ ಓಡಿಸಲು ವಿಠಲ ಮಲೆಕುಡಿಯರ ಮೇಲೆ ದೇಶದ್ರೋಹದ ಕೇಸ್, ಸುಂದರ ಮಲೆಕುಡಿಯರ ಕೈಕಡಿದ ಪ್ರಕರಣ, ನಕ್ಸಲ್ ಬೆದರಿಕೆ ಒಡ್ಡಿ ಪೊಲೀಸ್ ದೌರ್ಜನ್ಯ ಇತ್ಯಾದಿಗಳಿಂದ ಸರಕಾರವೇ ಆದಿವಾಸಿಗಳ ಮದ್ಯೆ ಭಯೋತ್ಪಾದನೆ ನಡೆಸುತ್ತಿದೆ ಎಂದು ಟೀಕಿಸಿದರು. ಇನ್ನು ಒಂದು ತಿಂಗಳ ಒಳಗೆ ಹಕ್ಕುಪತ್ರ ನೀಡದಿದ್ದರೆ ನವೆಂಬರ್ 18ರಂದು ಆದಿವಾಸಿಗಳು 'ಜೈಲು ಭರೋ' ನಡೆಸಲಿದ್ದಾರೆ ಎಂದು ಎಚ್ಚರಿಸಿದರು.

ಮೊದಲಿಗೆ ಎಲ್ಲರನ್ನೂ ಸ್ವಾಗತಿಸಿದ ಆದಿವಾಸಿ ಸಂಘಟನೆಯ ರಾಜ್ಯ ಸಹ ಸಂಚಾಲಕರಾದ ವಿಠಲ ಮಲೆಕುಡಿಯ ಅವರು "ಇಂದು ನಮ್ಮನ್ನು ಓಡಿಸುವ ಯೋಜನೆಗಳು ಸರಕಾರದಲ್ಲಿ ಇದೆಯೇ ವಿನಃ ನಮ್ಮನ್ನು ಉಳಿಸಿ ರಕ್ಷಿಸುವ ಯೋಜನೆಗಳಿಲ್ಲ ಎಂದರು. ನಾವು ಆದಿವಾಸಿಗಳು ಒಂದಾಗಿ ಸರಕಾರದ ಈ ನೀತಿಯನ್ನು ಅರ್ಥ ಮಾಡಿಕೊಂಡು ಇಂತಹ ಸರಕಾರ ನಡೆಸುವ ಪಕ್ಷಗಳನ್ನು ಓಡಿಸಬೇಕು ಎಂದರು.

ಹೋರಾಟದ ನೇತೃತ್ವದಲ್ಲಿ ಆದಿವಾಸಿ ಸಂಘಟನೆಯ ಮುಖಂಡರುಗಳಾದ ಜಯಾನಂದ ಎಂ.ಕೆ., ಚನಿಯಪ್ಪ ಎಂ.ಕೆ., ಸದಾಶಿವ ಎಂ.ಕೆ., ಕೇಶವ ಎಂ.ಕೆ., ಸುಂದರ ಎಂ.ಕೆ., ಬೋಜ ಲಾಯಿಲ, ಸಿಪಿಐ(ಎಂ) ಮುಖಂಡರುಗಳಾದ ಜಯರಾಮ ಮಯ್ಯ, ನಾರಾಯಣ ಕೈಕಂಬ, ನೆಬಿಸಾ, ಲೋಕೇಶ್ ಕುದ್ಯಾಡಿ, ದೇವಕಿ, ಲಾರೆನ್ಸ್ ಕೈಕಂಬ, ದಲಿತ ಹಕ್ಕು ಸಮಿತಿಯ ಈಶ್ವರಿ, ಮೊದಲಾದವರು ಇದ್ದರು.



ಉಡುಪಿ ಸರ್ಕಾರಿ ಆಸ್ಪತ್ರೆ ಖಾಸಗೀಕರಣದ ವಿರುದ್ಧ ಚಳುವಳಿ

ಸುಮಾರು 75 ವರ್ಷಗಳ ಹಿಂದೆ ಹಾಜಿ ಅಬ್ದುಲ್ಲಾ ಸಾಹೇಬರು ದಾನವಾಗಿ ನೀಡಿದ್ದ ಉಡುಪಿ ನಗರಸಭೆಗೆ ಚಾಚಿಕೊಂಡಿರುವ ಬೆಲೆ ಬಾಳುವ ಜಾಗದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಖಾಸಗಿಯವರಿಗೆ ವಹಿಸಿಕೊಡುವ ರಾಜ್ಯ ಸರಕಾರದ ನಿರ್ಧಾರವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉಡುಪಿ ಜಿಲ್ಲಾ ಸಮಿತಿ ವಿರೋಧಿಸಿದೆ. ಈ ಕುರಿತು ಸ್ವತಂತ್ರವಾಗಿ ಮತ್ತು ಇತರರೊಂದಿಗೆ ಸೇರಿ ಹೋರಾಟ ನಡೆಸಲು ತೀರ್ಮಾನಿಸಿದೆ.

ಇದೇ ಸಂದರ್ಭದಲ್ಲಿ "ಉಡುಪಿಯ ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಉಳಿವಿಗಾಗಿ ನಾಗರಿಕ ಒಕ್ಕೂಟ" ವಿವರವಾದ ಮನವಿಯನ್ನು ರಾಜ್ಯ ಸರಕಾರಕ್ಕೆ ಮತ್ತು ಉಸ್ತುವಾರಿ ಸಚಿವರಿಗೆ ನೀಡಿದ್ದು, ಸಿಪಿಐ (ಎಂ) ಅದನ್ನು ಬೆಂಬಲಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿರವರು ತಿಳಿಸಿದರು.

ರಾಯಚೂರಿನಲ್ಲಿ ಜಿಲ್ಲಾ ಕೇಂದ್ರದಲ್ಲಿರುವ ಸರಕಾರಿ ಆಸ್ಪತ್ರೆಯನ್ನು ಖಾಸಗಿಯವರಿಗೆ ನೀಡಿದ ಪರಿಣಾಮವಾಗಿ ಜನಸಾಮಾನ್ಯರು ಉಚಿತ ಚಿಕಿತ್ಸೆಯನ್ನು ಪಡೆಯಲಾಗದೆ, ಪ್ರತಿಷ್ಠಿತ ಖಾಸಗಿ ಕಂಪೆನಿ ಅದನ್ನು ಮುಂದುವರಿಸಲಾಗದೆ, ಬಹುತೇಕ ಆಸ್ಪತ್ರೆಯನ್ನು ಮುಚ್ಚಲಾಗಿದೆ.

ಉಡುಪಿಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ 2015–16ನೇ ಸಾಲಿನಲ್ಲಿ 2,257 ಹೆರಿಗೆಗಳಾಗಿವೆ ಎಂದು ವರದಿಯಾಗಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ಸುಮಾರು 30,000/–ರೂ ವೆಚ್ಚ ತಗಲುವ ಸಿಸೇರಿಯನ್ ಇಲ್ಲಿ ಉಚಿತವಾಗಿ ನಡೆಸಲಾಗುತ್ತಿದೆ. ಯಾವುದೇ ಕಾರಣಕ್ಕೂ ಈ ಆಸ್ಪತ್ರೆಯನ್ನು ಖಾಸಗಿಯವರಿಗೆ ನೀಡಬಾರದು ಎಂದು ಸಿ.ಪಿ.ಐ.(ಎಂ.) ಆಗ್ರಹಿಸಿದೆ.

ವಿದ್ಯಾರ್ಥಿ ಅಕಿಪ್ ಮೇಲೆ ಹಲ್ಲೆ : ಸಿಪಿಎಂ ಖಂಡನೆ

ಕುಂದಾಪುರ ನಗರದ ಭಂಡಾರ್‌ಕಾರ್ಸ್ ಕಾಲೇಜಿನ ಕ್ಯಾಂಪಸ್‌ನಲ್ಲಿ ತನ್ನ ಸಹಪಾಠಿ ವಿದ್ಯಾರ್ಥಿನಿ ಮಾತನಾಡಿಸಿದಳು ಎಂಬ ಕಾರಣಕ್ಕೆ ಅಕಿಪ್ ಮಾತಾಡಿದಕ್ಕೆ ಅಕ್ಟೋಬರ್ 4ರಂದು ಕೆಲ ವಿದ್ಯಾರ್ಥಿಗಳ ಗುಂಪು ವಿದ್ಯಾರ್ಥಿ ಅಕಿಪ್‌ಗೆ ಅವಾಚ್ಯವಾಗಿ ನಿಂದಿಸಿ, ಗಂಭೀರವಾಗಿ ಹಲ್ಲೆ ಮಾಡಿರುವುದನ್ನು ಸಿಪಿಐ(ಎಂ) ಪಕ್ಷವು ಖಂಡಿಸಿದೆ.

ವಿದ್ಯಾರ್ಥಿಗಳು ಜಾತಿಮತ ಧರ್ಮಗಳನ್ನು ಮೀರಿ ಕಲಿಯಬೇಕಾದಂತಹ ಶೈಕ್ಷಣಿಕ ಸಂಸ್ಥೆಗಳಲ್ಲಿ ಇಂದು ರಾಜಕೀಯ ಕಾರಣಗಳಿಗಾಗಿ ಎಳೆ ಮನಸ್ಸಿನಲ್ಲಿ ಧಾರ್ಮಿಕ ಅಸಹನೆ, ಅಪನಂಬಿಕೆ, ದ್ವೇಷ ಹುಟ್ಟುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ಕೆಟ್ಟ ಘಟನೆಗಳನ್ನು ಆರಂಭದಲ್ಲಿಯೇ ತಡೆಯದಿದ್ದರೆ ಶೈಕ್ಷಣಿಕ ಸಂಸ್ಥೆಗಳು ದ್ವೇಷ ಬಿತ್ತುವ ತಾಣಗಳಾಗುವ ಅಪಾಯವಿದೆ.

ಕಾಲೇಜಿನ ಆಡಳಿತ ಮಂಡಳಿ, ಪೊಲೀಸ್ ಇಲಾಖೆಯು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೇ ತಪಿತಸ್ಥ ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕು ಎಂದು ಸಿಪಿಐ(ಎಂ) ಪಕ್ಷ ಆಗ್ರಹಿಸುತ್ತದೆ.

ಎಕ್ಸೀಡಿ ಕ್ಲಬ್ ಕಾರ್ಮಿಕ ಸಂಘದ ಅಧ್ಯಕ್ಷ ಎನ್ ರಾಜಣ್ಣ ಸಾವು : ಪ್ರತಿಭಟನೆ





ಶಿವಾನಂದ ಗೂಡೂರು

ಎಕ್ಸಿಡಿ ಕಾರ್ಖಾನೆಗೆ ಭೂಮಿ ನೀಡಿದ್ದ ರೈತ ಕುಟುಂಬಗಳಲ್ಲಿ ರಾಜಣ್ಣ ಕುಟುಂಬವು ಒಂದಾಗಿತ್ತು. ಭೂಮಿ ಕಳೆದುಕೊಂಡು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ್ದ ರಾಜಣ್ಣ ಮತ್ತು ಇತರೇ ಕಾರ್ಮಿಕರಿಗೆ ಅತಿ ಕಡಿಮೆ ಸಂಬಳ ಮತ್ತು ಕಾನೂನು ರೀತ್ಯ ನೀಡಬೇಕಾಗಿದ್ದ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿತ್ತು. ಇದನ್ನು ವಿರೋಧಿಸಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿದ್ದರು.

ವೇತನ ಏರಿಕೆ ಮತ್ತು ಇತರೇ ಸೌಲಭ್ಯಕ್ಕಾಗಿ ಕಾರ್ಮಿಕರು ಕಳೆದ 15 ದಿನಗಳಿಂದ ಹೋರಾಟ ಮಾಡುತ್ತಿದ್ದರು. ಕಾರ್ಖಾನೆಯ ಏಜೆಂಟರು, ಗುತ್ತಿಗೆದಾರರು ಮತ್ತು ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಮೂಲಕ ಹೋರಾಟವನ್ನು ಮುರಿಯಲು ಸತತವಾಗಿ ಪ್ರಯತ್ನಿಸಿದರು. ಆದರೂ ರಾಜಣ್ಣ ಸೇರಿದಂತೆ ನೂರಾರು ಕಾರ್ಮಿಕರು ಛಲ ಬಿಡದೇ ಹೋರಾಟ ಮುಂದುವರೆಸಿದ್ದರು. ಅಕ್ಟೋಬರ್ 4 ರಂದು ಬೆಳಿಗ್ಗೆ ಕಾರ್ಮಿಕ ಸಂಘದ ಅಧ್ಯಕ್ಷ ರಾಜಣ್ಣ ನಿಧನರಾಗಿದ್ದಾರೆ. ಬಹುಶ ಸಕಾಲಕ್ಕೆ ಜಿಲ್ಲಾಡಳಿತ ಮಧ್ಯೆ ಪ್ರವೇಶ ಮಾಡಿ ಸಮಸ್ಯೆಯನ್ನು ಬಗೆಹರಿಸಿದ್ದರೇ ಈ ಸಾವು ಸಂಭವಿಸುತ್ತಿರಲಿಲ್ಲ

ಕೋಲಾರ ಜಿಲ್ಲೆಯ ನಗರಸಾಪುರದಲ್ಲಿನ ಎಕ್ಸೀಡಿ ಕ್ಲಬ್ ಕಾರ್ಮಿಕ ಸಂಘದ ಅಧ್ಯಕ್ಷ ಎನ್ ರಾಜಣ್ಣ ಅವರ ಸಾವಿಗೆ ಯಾರು ಹೊಣೆ ಎಕ್ಸೀಡಿ ಆಡಳಿತ ಮಂಡಳಿಯೋ ಅಥವಾ ಸಂಘದ ಸಾಂವಿಧಾನಿಕ ಕಾರ್ಯಾಚರಣೆಗೆ ಅಡ್ಡಿಪಡಿಸಿದ ಶಾಸಕರೋ ಅಥವಾ ಕಾರ್ಖಾನೆಯ ಮಾಲೀಕರ ಪರ ಲಾಬಿ ಮಾಡಿ ಕಾರ್ಮಿಕರ ನ್ಯಾಯಯುತ ಹೋರಾಟವನ್ನು ಒಡೆಯಲು ಕುತಂತ್ರ ಮಾಡಿದ ಸ್ಥಳೀಯ ರಾಜಕೀಯ ನಾಯಕರೋ ಒಂದು ಗೊತ್ತಾಗುತ್ತಿಲ್ಲ.

ಈ ರೀತಿಯ ಪ್ರಶ್ನೆಗಳು ಉದ್ಭವಿಸಲು ಬಹಳಷ್ಟು ಕಾರಣಗಳು ಈ ಪ್ರಕರಣದಲ್ಲಿವೆ. ಈ ಕಾರ್ಮಿಕ ಸಂಘದ ಹೋರಾಟದ ಸಂದರ್ಭದಲ್ಲಿ ಶಾಸಕರು ನಡೆದುಕೊಂಡ ರೀತಿ ಹಾಗು ಅವರ ಮಾಲೀಕರ ಪರವಾದ ಧೋರಣೆಗಳು ಕಾರ್ಖಾನೆಗಳನ್ನು ಉಳಿಸುವುದು ರಾಜಕೀಯ ನಾಯಕರ ಎಷ್ಟು ಜವಾಬ್ದಾರಿ ಕಾಳಜಿ ಇದೆಯೋ, ಅಷ್ಟೆ ಕಾಳಜಿ ಹಾಗು ಕರ್ತವ್ಯ ಜಿಲ್ಲೆಯ ಕಾರ್ಮಿಕರು ಹಾಗು ಅವರ ಹಕ್ಕುಗಳನ್ನು ಉಳಿಸುವುದು ಕೂಡ.

ಈ ಹಿನ್ನೆಯಲ್ಲಿ ಬಾಗೇಪಲ್ಲಿಯ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿರವರು ಕೋಲಾರದಲ್ಲಿ ಅಕ್ಟೋಬರ್ 05, 2016ರಂದು ಪತ್ರಿಕಾಗೋಷ್ಠಿ ನಡೆಸಿದರು.

ಕೋಲಾರ ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಮಿಕ ಸಂಘಟನೆಗಳನ್ನು ರೋಲ್ ಕಾಲ್ ಸಂಘಟನೆಗಳೆಂದು ಕರೆದಿರುವುದಕ್ಕೆ ಶಾಸಕರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಕಾರ್ಯಕರ್ತರ ಪರವಾಗಿ ಹಲವು ದಶಕಗಳಿಂದ ಹೋರಾಟ ಮಾಡುತ್ತಿರುವ ಸಿಐಟಿಯು ಸಂಘಟನೆಯ ವಿರುದ್ಧ ರೋಲ್ಕಾಲ್ ಸಂಘಟನೆ ಎಂಬ ಶಬ್ದ ಪ್ರಯೋಗಿಸಿ ತಮ್ಮ ಹೀನಾಯ ಸಂಸ್ಕೃತಿ ಪ್ರದರ್ಶಿಸಿದ್ದಾರೆ ಎಂದು ಕಿಡಿಕಾರಿದರು.

ಶಾಸಕ ವರ್ತೂರು ಪ್ರಕಾಶ್‌ಗೆ ತಾಕತ್ತಿದ್ದರೆ ಕಾರ್ಮಿಕರ ಪರ ಹೋರಾಟಗಳನ್ನು ತಡೆಯಲಿ ಎಂದು ಸಿಪಿಐ(ಎಂ) ಮಾಜಿ ಶಾಸಕರು ಹಾಗೂ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಸವಾಲು ಹಾಕಿದರು. ದಶಕಗಳಿಂದಲೂ ಸಂಘಟನೆಯು ಕಾರ್ಮಿಕರ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿದೆ. ನಮಗೆ ಯಾವುದೇ ಕಾರ್ಖಾನೆಗಳ ವಿರುದ್ಧ ವೈಯಕ್ತಿಕ ದ್ವೇಷವಿಲ್ಲ ಎಂದರು. ಶಾಸಕರಿಗೆ ಕಾರ್ಖಾನೆಯ ಮಾಲೀಕರ ಪರ ನಿಲ್ಲುವ ಅವಶ್ಯಕತೆ ಏನು ಎಂದು ಪ್ರಶ್ನಿಸಿದರು? ಶಾಸಕರು ಯಾವುದೇ ಒಂದು ಜಾತಿ, ಧರ್ಮದ ಮತಗಳಿಂದ ಚುನಾವಣೆಯಲ್ಲಿ ಗೆದ್ದಿಲ್ಲ. ಕಾರ್ಮಿಕರು ಕೂಡ ಮತಚಲಾಯಿಸಿದ್ದಾರೆ. ಆ ವಿಚಾರ ಮರೆಯಬಾರದು ಎಂದು ತೀಕ್ಷ್ಣವಾಗಿ ಹೇಳಿದರು.

ಕಾರ್ಖಾನೆಗಳನ್ನು ಉಳಿಸುವ ಗುತ್ತಿಗೆಯನ್ನು ಶಾಸಕರಿಗೆ ಯಾರೂ ಕೊಟ್ಟಿಲ್ಲ. ಕಾರ್ಮಿಕರ ಪರ ದುಡಿಯುವ ಮನಸ್ಸಿದ್ದರೆ ನರಾಸಪುರದಲ್ಲಿನ ಕಂಪನಿಯೊಂದರಲ್ಲಿ ತಲೆದೋರಿರುವ ಕಾರ್ಮಿಕರು ಮತ್ತು ಮಾಲೀಕರ ನಡುವಿನ ಸಮಸ್ಯೆಯನ್ನು ಬಗೆಹರಿಸಲಿ ಎಂದು ಒತ್ತಾಯಿಸಿದರು.

ಕೋಲಾರ ಜಿಲ್ಲೆಯ ಕೈಗಾರಿಕೆಗಳು ಮುಚ್ಚಿಹೋಗಲು ಕಾರ್ಮಿಕ ಸಂಘಟನೆಗಳು ನೇರ ಕಾರಣ ಎಂಬ ಶಾಸಕರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಬಿಜಿಎಂಎಲ್ ಗಣಿ ಮುಚ್ಚಲು ಕಾರಣವಾದ ಅಂಶಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಸಂಘಟನೆಯ ವಿರುದ್ಧ ಲಘುವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದರು.

ನರಾಸಪುರದಲ್ಲಿನ ಕೈಗಾರಿಕಾ ಪ್ರದೇಶದ ಕಾರ್ಖಾನೆಯೊಂದರಲ್ಲಿ ಸೃಷ್ಟಿಯಾಗಿರುವ ವೈಮನಸ್ಸನ್ನು ಬಗೆಹರಿಸಲು ಸಂಘಟನೆಯು ಪ್ರತಿಭಟಿಸಿ ಎಲ್ಲರಿಗೂ ಮನವಿ ನೀಡಿದೆ. ಜಿಲ್ಲಾಡಳಿತ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗುಲಾಮಗಿರಿ ರೀತಿಯಲ್ಲಿ ಕಾರ್ಮಿಕರನ್ನು ಕಾಣುವ ಕಾರ್ಖಾನೆಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯುತ್ತದೆ. ಕಾರ್ಮಿಕರ ಶ್ರಮವನ್ನು ಲೂಟಿ ಮಾಡಿ ಯಾವುದೇ ಸೌಲಭ್ಯ ನೀಡದೇ ವಂಚಿಸುತ್ತಿರುವ ಕೈಗಾರಿಕೆಗಳ ವಿರುದ್ಧ ಹೋರಾಟ ಅನಿವಾರ್ಯ ಎಂದರು.

ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯ ಜನರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ನೀಡಬೇಕಾದರೂ, ಯಾರು ಅನುಸರಿಸುತ್ತಿಲ್ಲ ಎಂದು ದೂರಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಗಾಂಧಿನಗರ ನಾರಾಯಣಸ್ವಾಮಿ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಏಕ್ಸಿಡಿ ಕಾರ್ಮಿಕರ ಸಮಸ್ಯೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕೋಲಾರದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಹೋರಾಟ ಮುಂದುವರೆಯುತ್ತಿದೆ. ●

ಸುರತ್ಕಲ್, ಕಾನ, MRPL ರಸ್ತೆ ದುರಸ್ತಿಗೆ ಆಗ್ರಹಿಸಿ ಹೋರಾಟ



ಸುರತ್ಕಲ್, ಕಾನ, MRPL ರಸ್ತೆ ದುರಸ್ತಿಗೆ ಆಗ್ರಹಿಸಿ ನಾಗರಿಕರು ನಡೆಸುತ್ತಿರುವ ಹೋರಾಟ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಕಂಪೆನಿ ಮತ್ತು ಪಾಲಿಕೆಯ ಮಧ್ಯೆ ರಸ್ತೆ ನಿರ್ವಹಣೆ ಕುರಿತು ಹೆಚ್ಚುತ್ತಿರುವ ತಿಕ್ಕಾಟ ವಿವಾದದ ನಡುವೆಯೇ ಇಂದು "ನಾಗರಿಕ ಹೋರಾಟ ಸಮಿತಿ, ಕಾನ ಸುರತ್ಕಲ್" ಸುರತ್ಕಲ್ ನಿಂದ ಎಮ್ ಆರ್ ಪಿ ಎಲ್ ಪ್ರಧಾನ ದ್ವಾರದವರಗೆ ಪಾದಯಾತ್ರೆ ನಡೆಸಿತು.

ಎಮ್ ಅರ್ ಪಿ ಎಲ್ ಪ್ರಧಾನ ದ್ವಾರದ ಮುಂಭಾಗ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ DYFI ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಕಂಪೆನಿ ಮತ್ತು ಜನಪ್ರತಿನಿಧಿಗಳ ವಿರುದ್ದ ವಾಗ್ದಾಳಿ ನಡೆಸಿದರು. " MRPL ಕಂಪೆನಿಯು ರಸ್ತೆ ದುರಸ್ತಿಗೊಳಿಸದಿದ್ದಲ್ಲಿ ತಾನು ಮತ್ತು ಇಡೀ ಪಾಲಿಕೆ ಸಾರ್ವಜನಿಕರೊಂದಿಗೆ ಸೇರಿ ಕಂಪೆನಿ ವಿರುದ್ಧ ಪ್ರತಿಭಟನೆ ನಡೆಸುತ್ತೇವೆ" ಎಂಬ ಮಾತನ್ನು ಉಲ್ಲೇಖಿಸಿದ ಮುನೀರ್ ಕಾಟಿಪಳ್ಳ, ಮೇಯರ್ ಮತ್ತು ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿರುವುದು ಅಧಿಕಾರ ನಡೆಸಲು, ಪ್ರತಿಭಟನೆ ಮಾಡಲಲ್ಲ. ಪಾಲಿಕೆ ಸೇರಿದಂತೆ ಜಿಲ್ಲಾಡಳಿತ ತಮಗಿರುವ ಅಧಿಕಾರ ಬಳಸಿ ಕಂಪೆನಿಗಳನ್ನು ನಿಯಂತ್ರಿಸಬೇಕು. ಅದು ಬಿಟ್ಟು ಪ್ರತಿಭಟನೆ ಮಾಡುವುದಲ್ಲ. ಎಮ್ ಆರ್ ಪಿ ಎಲ್, ಎಚ್ ಪಿ ಸಿ ಎಲ್, ಬಿ ಎ ಎಸ್ ಎಫ್ ಮುಂತಾದ ಕಂಪೆನಿಗಳಿಂದ ರಸ್ತೆಯನ್ನು ಕಾಪಾಡಲು ನಿಮ್ಮಿಂದ ಸಾಧ್ಯವಿಲ್ಲ ಎಂದಾದರೆ ಮೇಯರ್ ಹರಿನಾಥ್ ಮೊದಲು ತನ್ನ ಸ್ಥಾನಕ್ಕೆ ರಾಜಿನಾಮೆ ನೀಡಲಿ ನಂತರ ಸಾರ್ವಜನಿಕರ ಜೊತೆ ಹೋರಾಟಕ್ಕೆ ನೇತೃತ್ವ ಕೊಡಲಿ ಎಂದು ಮೇಯರ್ ಹರಿನಾಥ್ ರವರಿಗೆ ನೇರ ಸವಾಲು ಹಾಕಿದರು. ಇನ್ನು ಹದಿನೈದು ದಿನಗಳಲ್ಲಿ ರಸ್ತೆ ದುರಸ್ತಿಗೊಳ್ಳದಿದ್ದಲ್ಲಿ MRPL ಸುರತ್ಕ ರಸ್ತೆ ಸಂಚಾರವನ್ನು ಪೂರ್ಣಪ್ರಮಾಣದಲ್ಲಿ ತಡೆದು ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪಾದಯಾತ್ರೆ ಸಾಗುವ ಮಾರ್ಗದಲ್ಲಿ BASF, HPCL ಕಂಪೆನಿಗಳ ದ್ವಾರದ ಮುಂಭಾಗ ಒಂದಷ್ಟು ಹೊತ್ತು ನಿಂತು ಘೋಷಣೆಗಳನ್ನು ಹಾಕುವ ಮೂಲಕ ಕಂಪೆನಿಗಳ ವಿರುದ್ದ ಜನರ ಅತೃಪ್ತಿಯನ್ನು ಪ್ರತಿಭಟನಾಕಾರರು ವ್ಯಕ್ತಪಡಿಸಿದರು. ಹೋರಾಟ ಸಮಿತಿಯ ಸಂಚಾಲಕ ಬಿ ಕೆ ಇಮ್ತಿಯಾಜ್, ಸಹ ಸಂಚಾಲಕ ನವೀನ್ ಪೂಜಾರಿ ಪಾದಯಾತ್ರೆಯ ನೇತೃತ್ವ ವಹಿಸಿದ್ದರು. ಸಲೀಂ ಶ್ಯಾಡೋ, ಮೆಹಬೂಬ್ ಕಾನ, ಶ್ರೀನಿವಾಸ ಹೊಸಬೆಟ್ಟು, ಮುಹಮ್ಮದಾಲಿ ಬಾಳ, ಬಿ ಕೆ ಮಕ್ಸೂದ್, ಅಜ್ಮಾಲ್ ಕಾನ ಸಹಿತ ಸ್ಥಳೀಯ ಹಲವು ಸಂಘಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸತತ ಪ್ರತಿಭಟನೆಗಳಿಂದ ರಸ್ತೆ ಅವ್ಯವಸ್ಥೆ ವಿವಾದವಾಗುತ್ತಿರುವುದು, ಜನಪ್ರತಿನಿಧಿಗಳು, ಪಾಲಿಕೆಗೆ ಕಗ್ಗಂಟಾಗಿರುವುದು ಜಿಲ್ಲಾಡಳಿತಕ್ಕೆ ಬಗ್ಗೆ ಬಿಸಿ ಮುಟ್ಟಿಸಿದೆ. ಪಾದಯಾತ್ರೆಯ ನಂತರ ಸಂಜೆ ಜಿಲ್ಲಾಧಿಕಾರಿ ರಸ್ತೆ ಅವ್ಯವಸ್ತೆ ವೀಕ್ಷಣೆಗೆ ಪಾಲಿಕೆ ಅಧಿಕಾರಿಗಳ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿದರು.

ಕೇಳಿಸಿದ್ದು

ಪಾಕಿಸ್ತಾನವನ್ನು ಭಾರತ ಶಿಕ್ಷಿಸಬಹುದಾದ ವಿವಿಧ ವಿಧಾನಗಳ ಬಗೆಗಿನ ಪ್ರಶ್ನೆಗಳಿಗೆ ಸಮಾಧಾನದಿಂದಲೇ ಉತ್ತರ ಕೊಟ್ಟ ಮುಷರ್ರಫ್, ಸಿಂಧೂ ಕಣಿವೆಯ ನೀರನ್ನು ನಿಲ್ಲಿಸುವ ಮಾತು ಬಂದಾಗ ಮಾತ್ರ ಭುಗಿಲೆದ್ದರು. 'ಏನು ಏನಂತೀರಿ ರಾಹುಲ್! ಪಾಕಿಸ್ತಾನದಂಥ ಅಣ್ವಸ್ತ್ರ ಸನ್ನದ್ಧ ದೇಶಕ್ಕೆ ನೀರು ಸಿಗದಂತೆ ಮಾಡುತ್ತೀರಾ? ಅದು ತೀರಾ ತೀರಾ ಗಂಭೀರ ವಿಷಯ. ಅದರ ಸೊಲ್ಲೆತ್ತಬೇಡಿ' ಎಂದು ಗದರಿದರು.

ಆದರೆ ನಮ್ಮಲ್ಲಿಯೇ ಸಡಿಲ ನಾಲಗೆಯ ಕೆಲವು ತೀವ್ರವಾದಿಗಳು ಮಾಧ್ಯಮಗಳ ಎದುರು ಅಣ್ವಸ್ತ್ರ ಪ್ರಯೋಗದ ಬಗ್ಗೆ ಮನ ಬಂದಂತೆ ಮಾತಾಡುತ್ತಾರೆ. 'ನಮ್ಮ ಹತ್ತು ಕೋಟಿ ಜನರು ಪಾಕಿಸ್ತಾನದ ಅಣುಬಾಂಬ್‌ಗೆ ತಲೆಯೊಡ್ಡಿದರೆ ನಾವು ಇಡೀ ಪಾಕಿಸ್ತಾನವನ್ನು ದೂಳೀಪಟ ಮಾಡಬಹುದು' ಎಂಬರ್ಥದ ಸುಬ್ರಹ್ಮಣ್ಯ ಸ್ವಾಮಿಯ ಹೇಳಿಕೆ ಲಂಗುಲಗಾಮಿಲ್ಲದೆ ಹರಿದಾಡುತ್ತದೆ.

ಎರಡು ದೇಶಗಳ ನಡುವೆ ಚಿಕ್ಕದೊಂದು ಸಂಘರ್ಷವೂ (ಅಥವಾ ಮುಷರ್ರಫ್ ಹೇಳಿದ ಹಾಗೆ, ಸಿಂಧೂ ನದಿಗೆ ದಿಗ್ಬಂಧನ ಹಾಕುವ ಸಿದ್ಧತೆಯೂ) ಅಣ್ವಸ್ತ್ರ ಪ್ರಯೋಗಕ್ಕೆ ಕಾರಣವಾಗಬಹುದು.

ಅಣುದಾಳಿಗೆ ಸಿಕ್ಕ ಭಾರತ– ಪಾಕಿಸ್ತಾನದ ಎರಡು ಕೋಟಿ ಜನರು ದಿಢೀರಾಗಿ ಸಾಯುವುದಿಲ್ಲ.

ಬದುಕುಳಿದವರಿಗೆ ಬದುಕೇ ಅಸಹನೀಯವಾಗುತ್ತದೆ.

ಬಾರಾಮುಲ್ಲಾದ ಬಳಿಯ 'ಉರಿ' ಎಂದು ನಾವು ಕರೆಯುವ ಚಳಿಪ್ರದೇಶವನ್ನು ಅಲ್ಲಿನವರು 'ಉಡಿ' ಎನ್ನುತ್ತಾರೆ. ಉಡಿಯಲ್ಲಿದ್ದ ಕಿಡಿಯನ್ನು ಅಲ್ಲೇ ಆರಿಸಬೇಕೆ ಅಥವಾ ತಿದಿಯೂದಿ ಇಡೀ ಜಗತ್ತನ್ನು ಹಿಮಯುಗಕ್ಕೆ ತಳ್ಳಬೇಕೇ?

– ನಾಗೇಶ್ ಹೆಗಡೆ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

‘ದ್ರೌಪದಿ’ ಮತ್ತು ಎ.ಬಿ.ವಿ.ಪಿ. ‘ದೇಶಭಕ್ತಿ’

ಇತ್ತೀಚೆಗೆ ಅಸಹಿಷ್ಣುತೆಯ ಘಟನೆಯೊಂದು ಮತ್ತೊಮ್ಮೆ ವಿಶ್ವವಿದ್ಯಾನಿಲಯವೊಂದರಲ್ಲಿ ನಡೆದಿದೆ. ಕೇಂದ್ರೀಯ ವಿಶ್ವವಿದ್ಯಾನಿಲಯವೊಂದರ ಇಂಗ್ಲಿಷ್ ವಿಭಾಗವು ಇತ್ತೀಚೆಗೆ ನಮ್ಮನ್ನು ಅಗಲಿದ ಶ್ರೇಷ್ಠ ಲೇಖಕಿ ಮಹಾಶ್ವೇತಾದೇವಿಯವರ ಪ್ರಸಿದ್ಧ ಕತೆ ದೋಪ್ದಿ (ದ್ರೌಪದಿ) ಯನ್ನು ಆಧರಿಸಿದ ನಾಟಕವೊಂದನ್ನು ಏರ್ಪಡಿಸಿತ್ತು. ಜಗತ್ತಿನ ಮಹಾನ್ ಲೇಖಕಿಯರಲ್ಲಿ ಒಬ್ಬರೆಂದು ಪರಿಗಣಿಸಲಾಗುವ ಮಹಾಶ್ವೇತಾದೇವಿಯವರ ಈ ಕತೆ ದೇಶ ವಿದೇಶಗಳಲ್ಲಿ ಬಹು ಚರ್ಚಿತವಾದ ಕತೆಯಾಗಿದೆ. ಕತೆಯ ತಿರುಳು ಹೀಗಿದೆ. ದೋಪ್ದಿ ಎನ್ನುವವಳು ಬುಡಕಟ್ಟು ಜನಾಂಗಕ್ಕೆ ಸೇರಿದ ಒಬ್ಬಳು ಮಹಿಳೆ. ಅವಳು ಹಾಗೂ ಅವರ ಸಂಗಾತಿ ದುಲ್ನಾ ಇಬ್ಬರೂ ಕ್ರೂರಿಗಳಾದ ಜಮೀನ್ದಾರರು ಹಾಗೂ ವ್ಯಾಪಾರಿಗಳ ವಿರುದ್ಧ ಬಂಡಾಯಕ್ಕೆ ಬೆಂಬಲವಾಗಿರುವವರು. ಅವರ ಬಗ್ಗೆ ಮಾಹಿತಿಯನ್ನು ಕೊಟ್ಟು ಕಾಡಿನಲ್ಲಿ ಮರೆಯಾಗಿಹೋಗುವರು. ತೀವ್ರ ಬರಗಾಲದ ಕಾಲದಲ್ಲಿ ಊರಿನ ಬಾವಿ ಹಾಗೂ ಕೊಳವೆಬಾವಿಗಳನ್ನು ಜನರು ಉಪಯೋಗಿಸದಂತೆ ಮಾಡಿರುವ ಜಮೀನ್ದಾರನ ಕೊಲೆಗೆ ಇವರು ಕಾರಣವೆಂದು ನಂಬಿದ ಸೈನ್ಯವು ಇವರನ್ನು ಮುಗಿಸಲು ಒಂದು ಆಪರೇಶನ್ ಶುರುಮಾಡುತ್ತದೆ. ಅದರಲ್ಲಿ ದುಲ್ನಾ ಬಲಿಯಾಗುತ್ತಾನೆ. ಇನ್ನಾರೋ ಮೋಸ ಮಾಡಿದ್ದರಿಂದ ದೋಪ್ದಿ ಸೆರೆಸಿಕ್ಕುತ್ತಾಳೆ. ಇಡೀ ರಾತ್ರಿ ಆಪರೇಶನ್ ಅಧಿಕಾರಿಯಾಗಿದ್ದ ಸೇನಾನಾಯಕನ ಸೂಚನೆಯ ಮೇರೆಗೆ ಅವಳ ಮೇಲೆ ಅಮಾನುಷವಾದ ಬಲಾತ್ಕಾರ ನಡೆಯುತ್ತದೆ. ಅವಳ ಮೈಯೆಲ್ಲಾ ರಕ್ತಸಿಕ್ತವಾಗುತ್ತದೆ. ಪೂರ್ಣ ಬೆತ್ತಲೆಯಾಗಿರುವ ದೋಪ್ದಿ ಹಾಗೆಯೇ ಸೇನಾನಾಯಕನ ಎದುರಿಗೆ ಬಂದು ನಿಂತು “ನನ್ನನ್ನು ಬೆತ್ತಲು ಮಾಡಬಹುದು. ಮತ್ತೆ ಬಟ್ಟೆ ತೊಡಿಸಿ ನೋಡೋಣ. ಲೋ ನೀನೂ ಒಬ್ಬ ಗಂಡಸೇನೋ” ಎಂದು ಕೂಗುತ್ತಾಳೆ.

ಇದೊಂದು ಪ್ರಬಲವಾದ ಕತೆ, ಬುಡಕಟ್ಟು ಜನಾಂಗದ ಬಂಡಾಯಗಳನ್ನು ಸರಕಾರ ಪೋಲೀಸರು ಹಾಗೂ ಸೇನೆಗಳು ಹೇಗೆ ಬಗ್ಗು ಬಡಿಯುತ್ತ ಬಂದಿವೆಯೆನ್ನುವುದು ಮಹಾಶ್ವೇತಾದೇವಿಯವರ ಬರಹದ ಒಂದು ವಸ್ತುವಾಗಿದೆ. ತಮ್ಮ ಬರಹ

ನಮ್ಮ ಸರಕಾರಗಳು ಸೇನೆ ಹಾಗೂ ಪೋಲೀಸರನ್ನು ಜನರ ವಿರುದ್ಧ, ಅವರ ಪ್ರತಿಭಟನೆಗಳನ್ನು ಹತ್ತಿಕ್ಕಲು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಅಂಥ ಸಂದರ್ಭದಲ್ಲಿ ಜನರು ಪ್ರಶ್ನೆ ಮಾಡುವುದು ಸೇನೆಯನ್ನಲ್ಲ, ಸೇನೆಯನ್ನು ಪ್ರಜಾಪ್ರಭುತ್ವದ ವಿರುದ್ಧ ಬಳಸಿಕೊಳ್ಳುವ ಸರಕಾರಗಳನ್ನು. ಹೀಗಾಗಿ ಈ ಪ್ರಶ್ನೆಗಳನ್ನು ಟೀಕೆಗಳನ್ನು ಮಾಡುವವರನ್ನು ಸೇನೆಯ ಅವಮಾನ ಮಾಡುವ ದೇಶದ್ರೋಹಿಗಳೆಂದು ಬಿಂಬಿಸುವವರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರದ ಸರಕಾರಗಳ ಬೆಂಬಲಿಗರಾಗಿರುತ್ತಾರೆ. ಅವರಿಗೆ ಮಹಾಶ್ವೇತಾದೇವಿಯಂಥ ಬರಹಗಾರರು ಅಪಾಯಕಾರಿಯಾಗಿ ಕಾಣುತ್ತಾರೆ.

ಹಾಗೂ ಬದುಕನ್ನು ಸಂಪೂರ್ಣವಾಗಿ ಬುಡಕಟ್ಟು ಜನರಿಗಾಗಿ ಅವರು ಮುಡುಪಾಗಿ ಇಟ್ಟಿದ್ದರು. ಒಂದು ಉದಾಹರಣೆಯನ್ನು ಪ್ರಸಿದ್ಧ ಭಾಷಾತಜ್ಞ ಗಣೇಶ್ ದೇವಿಯವರು ನೆನಪು ಮಾಡಿಕೊಡುತ್ತಾರೆ. ಬುಡಕಟ್ಟು ಜನಾಂಗದವರಿಗೆ ಶೇಕಡಾ 80 ರಿಂದ 120 ರಷ್ಟು ಬಡ್ಡಿಯ ಮೇಲೆ ಸಾಲವನ್ನು ಕೊಡುತ್ತಿದ್ದ ಸಾಹುಕಾರರ ಮೇಲೆ ಕಡಿವಾಣ ಹಾಕಿ ಎಂದು ಕೋರಿ ಅವರಿಬ್ಬರೂ ಒಂದು ರಾಜ್ಯದ ಮುಖ್ಯಮಂತ್ರಿ ಹಾಗೂ ರಾಷ್ಟ್ರಪತಿಯವರಿಗೆ ಅಹವಾಲು ಸಲ್ಲಿಸಿದ್ದರು. ಆದರೆ ಏನೂ ಆಗಲಿಲ್ಲ.

ಇನ್ನು ಆ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಏನಾಯಿತು ನೋಡೋಣ. ಪತ್ರಿಕೆಗಳ ವರದಿಯ ಪ್ರಕಾರ ನಾಟಕದ ಪ್ರದರ್ಶನವನ್ನು ನೋಡಿದ ಅ.ಭಾ.ವಿ.ಪ.ದ ಸದಸ್ಯನೊಬ್ಬ ಬಲಪಂಥೀಯ ಸಂಘಟನೆಯ ಧುರೀಣನೊಬ್ಬನಿಗೆ ವಿಷಯವನ್ನು ತಿಳಿಸಿದನಂತೆ. ನಾಟಕದಲ್ಲಿ ದೇಶಕ್ಕಾಗಿ ಪ್ರಾಣವನ್ನು ಅರ್ಪಿಸುವ ಸೈನಿಕರನ್ನು ಅವಮಾನಿಸಿ ದೇಶದ್ರೋಹ ಮಾಡಲಾಗಿದೆಯೆಂದು ಗಲಾಟೆ ಆರಂಭಿಸಲಾಯಿತು. ಇಂಗ್ಲಿಷ್ ವಿಭಾಗದ ಮೇಲೆ ಕ್ರಮಕೈಗೊಳ್ಳಲು ಒತ್ತಾಯಿಸಲಾಯಿತು. ದುರ್ದೈವದಿಂದ ಮಹಾಶ್ವೇತಾದೇವಿಯವರು ತೀರಿ ಹೋಗಿದ್ದರಿಂದ ಅವರ ಮೇಲೆ ದೇಶದ್ರೋಹದ ಆಪಾದನೆ ಹೊರಿಸಿ ಜೈಲಿಗೆ ಕಳಿಸುವುದು ಸಾಧ್ಯವಾಗಲಿಲ್ಲ! ಇತ್ತೀಚೆಗೆ ಬೆಂಗಳೂರಿನ ಥಿಯಾಲಾಜಿಕಲ್ ಕಾಲೇಜಿನಲ್ಲಿ, ಈ ಮೊದಲು ಕನ್ಹಯ್ಯ ಕುಮಾರ್‌ಗೆ ಸಂಬಂಧಿಸಿದ ಘಟನೆಗಳಲ್ಲಿ ಒಂದು ಸಾಮಾನ್ಯವಾದ ವಿದ್ಯಮಾನವನ್ನು ಕಾಣಬಹುದು.



ಮಹಾಶ್ವೇತಾದೇವಿ

ಅದೇನೆಂದರೆ ರಾಷ್ಟ್ರವೆಂದರೆ ಸೇನೆ, ಸೇನೆಯೆಂದರೆ ರಾಷ್ಟ್ರ ಮತ್ತು ಸೇನೆಯ ಬಗ್ಗೆ ಟೀಕೆ ಮಾಡಿದರೆ ಅದು ರಾಷ್ಟ್ರಕ್ಕೆ ಮಾಡಿದ ಅಪಮಾನ ಹಾಗೂ ರಾಷ್ಟ್ರದ್ರೋಹವೆಂದು ವಾದಿಸಲಾಗುತ್ತದೆ. ಹಲವಾರು ಟೀ.ವಿ. ವಾಹಿನಿಗಳಲ್ಲಿ ನಿವೃತ್ತ ಸೇನಾಧಿಕಾರಿಗಳನ್ನು ರಾಷ್ಟ್ರದ ವಕ್ತಾರರನ್ನಾಗಿ ಚರ್ಚೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಬಲಪಂಥೀಯ ರಾಷ್ಟ್ರಪ್ರೇಮದ ಸ್ವರೂಪವೇ ಇದಕ್ಕೆ ಕಾರಣ. ಈ ಪರಿಕಲ್ಪನೆಯ ಪ್ರಕಾರ ಸಾಲಮಾಡಿ ಸೋತು ಅತ್ಮಹತ್ಯೆಗೆ ಶರಣಾದ ರೈತರು ರಾಷ್ಟ್ರಪ್ರೇಮಿಗಳಲ್ಲ,



ದ್ರೌಪತಿ ನಾಟಕ

ತಮ್ಮ ಹಕ್ಕಿಗಾಗಿ ಹೋರಾಟಮಾಡಿ ಪೋಲೀಸರಿಂದ ಬರ್ಬರವಾಗಿ ಹೊಡೆಸಿಕೊಂಡ ಗಾರ್ಮೆಂಟ್ ಫ್ಯಾಕ್ಟರಿಯ ಮಹಿಳಾ ಕಾರ್ಮಿಕರು ರಾಷ್ಟ್ರಪ್ರೇಮಿಗಳಲ್ಲ. ಕಳಸಾ ಬಂಡೂರಿ ರೈತ ಚಳುವಳಿಯಲ್ಲಿ ಇತ್ತೀಚೆಗೆ ಮೈತುಂಬಾ ಬಾಸುಂಡೆ ತಿಂದು ಆ ಗಾಯಗಳನ್ನು ಧೈರ್ಯವಾಗಿ ಟೀ.ವಿ. ಕ್ಯಾಮರಾಗಳಿಗೆ ತೋರಿಸಿದ ರೈತ ಮಹಿಳೆಯರು ರಾಷ್ಟ್ರಪ್ರೇಮಿಗಳಲ್ಲ. ಶಸ್ತ್ರಾಸ್ತ್ರಗಳನ್ನು, ಯುದ್ಧ ಹಾಗೂ ಸೇನೆಗಳನ್ನು ರಾಷ್ಟ್ರದ ಲಾಂಛನಗಳನ್ನಾಗಿಸಿ ಪೂಜಿಸುವ ರಾಷ್ಟ್ರಪ್ರೇಮದ ಉಗ್ರ ಜಾಹೀರಾತಿನ ರಾಜಕೀಯದ ಭರಾಟೆಯಲ್ಲಿ ಇಂದು ನಾವಿದ್ದೇವೆ.

ಭಾರತೀಯ ಸೈನಿಕರು ನಾವೆಲ್ಲಾ ಹೆಮ್ಮೆ ಪಡುವ ವೀರರು. ದೇಶದಲ್ಲಿ ಯಾವ ದುರಂತವೇ ನಡೆದರೂ ನಮ್ಮ ಸೈನಿಕರೇ ನಮ್ಮ ರಕ್ಷಣೆಗೆ ಬರುತ್ತಾರೆ. ನೆರೆ ಹಾವಳಿಯೇ ಇರಲಿ ಉಗ್ರರ ದಾಳಿಯೇ ಇರಲಿ ಸೈನಿಕರೇ ನಮ್ಮ ಆಪತ್ಬಾಂಧವರು. ಹೀಗಾಗಿಯೇ ನಮ್ಮ ಅಪಾರ ಪ್ರೀತಿಗೆ ಅವರು ಕಾರಣರಾಗಿದ್ದಾರೆ. ಸಾವನ್ನಪ್ಪಿದ ಸೈನಿಕನೊಬ್ಬನ ದೇಹ ಅವನು ಹುಟ್ಟಿದ ಹಳ್ಳಿಗೆ ಬಂದಾಗ ಇಡೀ ರಾಜ್ಯವೇ ಶೋಕದಲ್ಲಿ ಮುಳುಗುತ್ತದೆ. ಹೀಗಾಗಿ ಯಾವ ಭಾರತೀಯನೂ ಸೇನೆಗೆ ಅವಮಾನ ಮಾಡುವುದು ಸಾಧ್ಯವೇ ಇಲ್ಲ. ಪ್ರಶ್ನೆ ಏನೆಂದರೆ ನಮ್ಮ ಸರಕಾರಗಳು ಸೇನೆ ಹಾಗೂ ಪೋಲೀಸರನ್ನು ಜನರ ವಿರುದ್ಧ, ಅವರ ಪ್ರತಿಭಟನೆಗಳನ್ನು ಹತ್ತಿಕ್ಕಲು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಹಾಗಾದಾಗ ಆಗಬಾರದ್ದೆಲ್ಲ ನಡೆಯುತ್ತದೆ. ಅಂಥ ಸಂದರ್ಭದಲ್ಲಿ ಜನರು ಪ್ರಶ್ನೆ ಮಾಡುವುದು ಸೇನೆಯನ್ನಲ್ಲ, ಸೇನೆಯನ್ನು ಪ್ರಜಾಪ್ರಭುತ್ವದ ವಿರುದ್ಧ ಬಳಸಿಕೊಳ್ಳುವ ಸರಕಾರಗಳನ್ನು. ಹೀಗಾಗಿ ಈ ಪ್ರಶ್ನೆಗಳನ್ನು ಟೀಕೆಗಳನ್ನು ಮಾಡುವವರನ್ನು ಸೇನೆಯ ಅವಮಾನ ಮಾಡುವ ದೇಶದ್ರೋಹಿಗಳೆಂದು ಬಿಂಬಿಸುವವರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರದ ಸರಕಾರಗಳ ಬೆಂಬಲಿಗರಾಗಿರುತ್ತಾರೆ. ಅವರಿಗೆ ಮಹಾಶ್ವೇತಾದೇವಿಯಂಥ ಬರಹಗಾರರು ಅಪಾಯಕಾರಿಯಾಗಿ ಕಾಣುತ್ತಾರೆ.

ಕಳಸಾ-ಬಂಡೂರಿ ಹೋರಾಟಗಳಲ್ಲಿ ನೀರಿಗಾಗಿ ಹೋರಾಟ ಮಾಡಿದ ಅನೇಕ ಹಳ್ಳಿಗಳಿಂದ ಭಾರತೀಯ ಸೇನೆಗೆ ಅನೇಕ ಯುವಕರು ಸೇರಿದ್ದಾರೆ. ಒಂದೇ ಕುಟುಂಬದ ಹಲವಾರು ಯುವಕರು ಸೇನೆಗೆ ಸೇರಿದ್ದಾರೆ. ಹಲವಾರು ಸೈನಿಕರು ದೇಶದ ರಕ್ಷಣೆಗಾಗಿ ಪ್ರಾಣವನ್ನೂ ತೆತ್ತಿದ್ದಾರೆ. ಈ ರೈತ ಹೋರಾಟಗಳ ಸಮಯದಲ್ಲಿ ಅವರು ಈ ಹಳ್ಳಿಗಳಲ್ಲಿ ಇದ್ದರೆ ನಮ್ಮ ರೈತ ಮಹಿಳೆಯರ ಮೈಮೇಲೆ ಬಾಸುಂಡೆಗಳು ಏಳುತ್ತಿರಲಿಲ್ಲ. ಏಕೆಂದರೆ ನಮ್ಮ ಸೈನಿಕರಲ್ಲಿ ಬಹುಪಾಲು ರೈತರ ಮಕ್ಕಳೆ. ಸರಕಾರಗಳು ರೈತರ ಮಕ್ಕಳಾದ ನಮ್ಮ ಹೆಮ್ಮೆಯ ಸೈನಿಕರನ್ನು ತನ್ನ ಸ್ವಾರ್ಥ ರಾಜಕೀಯಕ್ಕಾಗಿ ಬಳಸಿಕೊಂಡಾಗ ಜನರು ದನಿಯೆತ್ತದಿದ್ದರೆ ಕೊನೆಗೆ ಬಲಿಪಶುಗಳಾಗುವುದು ನಮ್ಮ ಸೈನಿಕರೇ ಅಲ್ಲವೆ? ○

ನಮ್ಮ ಚುರು-ಟ್ವೀಟ್

@sanjayuvacha

ಒಂದು ಹಸುವನ್ನು ಕೊಂದ ಆಪಾದನೆ ಹಾಕಿ ನೀವು ಒಬ್ಬ ಮನುಷ್ಯನನ್ನು ಕೊಂದರೆ, ನಿಮಗೆ ರಾಷ್ಟ್ರೀಯ ಧ್ವಜ ಹೊದೆದ ಅಂತ್ಯಸಂಸ್ಕಾರ ಸಿಗುತ್ತದೆ. ಇದು 2016ರ ಇಂಡಿಯಾ

–ಸಂಜಯ ಹೆಗಡೆ, ಸುಪ್ರೀಂ ಕೋರ್ಟ್ ವಕೀಲರು

* ದಾದ್ರಿ ಪ್ರಕರಣ ಕೊಲೆಗಾರ ಜೈಲಿನಲ್ಲಿ ಸತ್ತು ಆತನ ಶವವನ್ನು ರಾಷ್ಟ್ರೀಯ ಧ್ವಜದಲ್ಲಿ ಹೊದಿಸಿ ಸಾರ್ವಜನಿಕರಿಗೆ ನೋಡಲು ಇಡಲಾಯಿತು ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತಾ

ಮತ್ತೆ ಅದೇ ‘ರಾಷ್ಟ್ರ-ವಿರೋಧಿ’ ಚರ್ವಿತ ಚರ್ವಣ

ಹರಿಯಾಣ ಕೇಂದ್ರೀಯ ವಿವಿಯಲ್ಲಿ ಎಬಿವಿಪಿ ದಾಳಿಗೆ ಪ್ರತಿಷ್ಠಿತ ಕಲಾವಿದರು ಬುದ್ಧಿಜೀವಿಗಳ ಖಂಡನೆ


ಹರಿಯಾಣ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಖ್ಯಾತ ಲೇಖಕಿ ಮಹಾಶ್ವೇತಾದೇವಿಯವರ ‘ದ್ರೌಪದಿ’ ನಾಟಕ ಪ್ರದರ್ಶನ ಏರ್ಪಡಿಸಿದ ಇಂಗ್ಲಿಷ್ ಪ್ರಾಧ್ಯಾಪಕರಿಗೆ ಎಬಿವಿಪಿ ಕುಮ್ಮಕ್ಕಿನಿಂದ ವಿವಿ ಅಧಿಕಾರಿಗಳು ಕಿರುಕುಳ ಕೊಡುತ್ತಿರುವುದರ ಬಗ್ಗೆ 55 ಪ್ರಖ್ಯಾತ ಕಲಾವಿದರು, ಕಲಾವಿಮರ್ಶಕರು ಮತ್ತು ಇತರ ಬುದ್ಧಿಜೀವಿಗಳು ಆಘಾತ ವ್ಯಕ್ತಪಡಿಸಿದ್ದಾರೆ. ಇದು ಅತ್ಯಂತ ಖಂಡನೀಯ ಎಂದಿದ್ದಾರೆ.

ಒಂದೆಡೆ ವಿವಿ ಆಡಳಿತ ಎಬಿವಿಪಿ ಕಾರ್ಯಕರ್ತರಲ್ಲಿ ‘ಕ್ಷಮೆ’ ಕೇಳಿದರೆ, ಇನ್ನೊಂದೆಡೆಯಲ್ಲಿ ಈ ನಾಟಕದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಬೆನ್ನಟ್ಟುತ್ತಿದೆ! ಈ ನಾಟಕದ ಒಂದು ದೃಶ್ಯ ‘ರಾಷ್ಟ್ರ-ವಿರೋಧಿ’ ಎನ್ನುವುದು ಅತ್ಯಂತ ಹಾಸ್ಯಾಸ್ಪದ, ಸ್ವತಂತ್ರವಾದ ಅಥವ ಬಿಜೆಪಿ-ಆರೆಸ್ಸೆಸ್ ವಿಚಾರಗಳಿಗಿಂತ ತುಸು ಭಿನ್ನವಾಗಿರುವ ವಿಚಾರಗಳೆಲ್ಲವನ್ನೂ ರಾಷ್ಟ್ರ-ವಿರೋಧಿಯೆನ್ನುವ ಕೆಟ್ಟ ಚಾಳಿ ಹರಡುತ್ತಿದೆ. ಸ್ವತಃ ಬಿಜೆಪಿ ಅ ಧ್ಯಕ್ಷರೂ ತಮ್ಮ ಮನ ತಟ್ಟಿದೆ ಎಂದಿರುವ ‘ರುದಾಲಿ’, ‘ಹಜಾರ್ ಚೌರಾಸಿರ್ ಮಾ’ ಮುಂತಾದ ಕೃತಿಗಳನ್ನು ನೀಡಿರುವ ಮಹಾಶ್ವೇತಾದೇವಿಯವರನ್ನು ಕೂಡ ಬೆನ್ನಟ್ಟುತ್ತಿರುವ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಈ ಪ್ರತಿಷ್ಠಿತರು ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮತ್ತೊಂದು ಎಬಿವಿಪಿ ದಾಳಿ ಎಂದಿದ್ದಾರೆ, ಅವರ ದಾಳಿಗೆ ಗುರಿಯಾಗಿರುವ ಪ್ರಾಧ್ಯಾಪಕರಿಗೆ ಸೌಹಾರ್ದ ವ್ಯಕ್ತಪಡಿಸಿದ್ದಾರೆ.

ವಿವಾನ್ ಸುಂದರಂ, ಸೈಯದ್ ಮಿರ್ಜಾ, ಬದ್ರಿ ರೈನಾ, ಪ್ರೊ. ಪ್ರಭಾತ್ ಪಟ್ನಾಯಕ್, ಎಂ.ಕೆ. ರೈನಾ ಮದನ್‌ಗೋಪಾಲ್ ಸಿಂಗ್ ಮುಂತಾದವರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಮಂಡಳಿ ಕೂಡ ಇದು ಆರೆಸ್ಸೆಸ್-ಬಿಜೆಪಿ-ಎಬಿವಿಪಿ ಕೂಟದ ಮತ್ತೊಂದು ಹೊಲಸು ದಾಳಿ ಎನ್ನುತ್ತ ದೇಶಾದ್ಯಂತ ವಿಶ್ವವಿದ್ಯಾಲಯಗಳಲ್ಲಿ ಅಕೆಡೆಮಿಕ್ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುವ ಇಂತಹ ಪ್ರಯತ್ನಗಳ ವಿರುದ್ಧ ಅಖಿಲಭಾರತ ಸಹಿಸಂಗ್ರಹ ಆಂದೋಲನ ನಡೆಸಬೇಕು, ಇದಕ್ಕಾಗಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಬುದ್ಧಿಜೀವಿಗಳನ್ನು ಅಣಿನೆರೆಸಬೇಕು ಎಂದು ಕರೆ ನೀಡಿದೆ. ■

ದೇಶಭಕ್ತಿಯ ಅಬ್ಬರ ಸಾಕು! ಯುದ್ಧೋನ್ಮಾದ ನಿಲ್ಲಿಸಿ... !



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಸ್ವಲ್ಪವಾದರೂ ರಾಷ್ಟ್ರಹಿತದ ಕಾಳಜಿ ಇದ್ದರೆ ಪಾಕಿಸ್ತಾನಕ್ಕೆ ಎದುರಾಗಿ ಅಬ್ಬರದ ಮಾತುಗಳ ಚಕಮಕಿ ನಿಲ್ಲಬೇಕು, ಗಡಿಯಾಚೆಯಿಂದ ನಡೆಯುವ ಭಯೋತ್ಪಾದನೆ ಕೃತ್ಯಗಳನ್ನು ಎದುರಿಸುವ ಗಡಿ ಭದ್ರತೆ ವ್ಯವಸ್ಥೆಯನ್ನು ಬಲಪಡಿಸಲು ಶಕ್ತಿ-ಸಾಮರ್ಥ್ಯಗಳನ್ನು ಕ್ರೋಢೀಕರಿಸಬೇಕು



*** ಪ್ರಕಾಶ್ ಕಾರಟ್**

ಗಡಿ ನಿಯಂತ್ರಣ ರೇಖೆಗುಂಟ (ಎಲ್‌ಓಸಿ) ಸೀಮಿತ ಪ್ರಹಾರ(ಸರ್ಜಿಕಲ್ ಸ್ಟ್ರೈಕ್) ನಡೆಸಿದ ಬಗ್ಗೆ ಅಧಿಕೃತ ಘೋಷಣೆ ಹೊರಬಿದ್ದ ಒಂದು ವಾರದ ನಂತರ, ಈ ಕಾರ್ಯಾಚರಣೆ ಮತ್ತು ಅದು ಸಾಧಿಸಿದ್ದೇನು ಎಂಬ ಬಗ್ಗೆ ಅಸ್ಪಷ್ಟವಾಗಿರುವವುದು ಬಹಳಷ್ಟಿದೆ. ಮಾಧ್ಯಮಗಳಿಗೆ ತಿಳಿಸಿರುವ ಪ್ರಕಾರ, ಭಯೋತ್ಪಾದಕರ ಏಳು ಕಾರ್ಯನೆಲೆಗಳ ಮೇಲೆ ವಿಶೇಷ ಪಡೆಗಳ ಎರಡು ಗುಂಪುಗಳು ಗುರಿಯಿಟ್ಟಿದ್ದವು. 38 ಭಯೋತ್ಪಾದಕರು ಮತ್ತು ಅವರ ಸಹಚರರು ಈ ದಾಳಿಗಳಲ್ಲಿ ಹತರಾಗಿದ್ದಾರೆ ಎಂದೂ ತಿಳಿಸಲಾಗಿದೆ.

ಕಾರ್ಪೊರೇಟ್ ಮಾಧ್ಯಮದ ಕೆಲವು ವಿಭಾಗಗಳು, ಅದರಲ್ಲೂ ಮುಖ್ಯವಾಗಿ ಟಿವಿ ಚಾನೆಲ್‌ಗಳು, ರಾಷ್ಟ್ರಭಕ್ತಿಯ ಉನ್ಮಾದಕ್ಕೊಳಗಾದವು. ಆದರೆ ಘಟನೆ ನಡೆದು ಇಷ್ಟು ದಿನಗಳಾದರೂ ಆ ದಿನ ರಾತ್ರಿ ನಿಜವಾಗಿಯೂ ಮಾಡಿದ್ದೇನು ಎನ್ನುವ ವಿಷಯದಲ್ಲಿ ಅಪಾರದರ್ಶಕ ತೆರೆ ಇನ್ನೂ ಇದೆ. ಒಂದು ಮಿಲಿಟರಿ ಕಾರ್ಯಾಚರಣೆಯಾಗಿ ಮಾಡಿದ್ದನ್ನು ಈಗ ಆರ್‌ಎಸ್‌ಎಸ್-ಬಿಜೆಪಿಯ ಅಭಿಮಾನಿಗಳನ್ನು, ಅನುಯಾಯಿಗಳನ್ನು ಸಂತುಷ್ಟ ಗೊಳಿಸಲು ಹಾಗೂ ಪ್ರಧಾನ ಮಂತ್ರಿಯ ಸುತ್ತ ಒಂದು ಪ್ರಭಾವಳಿಯನ್ನು ಸೃಷ್ಟಿಸಲು, ಅವರು ಪಾಕಿಸ್ತಾನದಿಂದ ಯಾವುದೇ ಚೇಷ್ಟೆಯನ್ನು ಸಹಿಸಿಕೊಳ್ಳುವವರಲ್ಲ ಎಂದು ಬಿಂಬಿಸಲು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ.

ಸಂಪುಟದ ಹಿರಿಯ ಸಚಿವರ ರಾಷ್ಟ್ರೋನ್ಮಾದದ ಹೇಳಿಕೆಗಳು ಅವರ ಬಾಲಿಶ ವಿಜಯೋನ್ಮಾದದ ನಡೆಯನ್ನು ಪ್ರದರ್ಶಿಸುತ್ತಿವೆ. ಶಸ್ತ್ರಚಿಕಿತ್ಸೆಯಂತಹ ದಾಳಿಯ ವೇಳೆ ನೀಡಲಾದ ಅರಿವಳಿಕೆ '(ಅನೆಸ್ತೇಸಿಯಾ)ಯಿಂದ ಪಾಕಿಸ್ತಾನ ಇನ್ನೂ ಎಚ್ಚರಗೊಂಡಿಲ್ಲ ಎಂದು ರಕ್ಷಣಾ ಸಚಿವ ಮನೋಹರ್ ಪರ್ರಿಕರ್ ಹೇಳಿದ್ದಾರೆ. ಚೇಳು ಕಚ್ಚಿದರೂ ಕೂಗಿಕೊಳ್ಳಲಾರದ ಕಳ್ಳನ ಸ್ಥಿತಿ ಪಾಕಿಸ್ತಾನದ್ದಾಗಿದೆ ಎನ್ನುವುದು ವೆಂಕಯ್ಯ ನಾಯ್ಡು ಅವರ ವರ್ಣನೆ. ಪಾಕಿಸ್ತಾನವನ್ನು ಪ್ರತಿದಾಳಿಗೆ ಪ್ರಚೋದಿಸಿ ಆನಂತರ ಅದನ್ನು ಮಿಲಿಟರಿ ಸನ್ನಿವೇಶವನ್ನು ಉಲ್ಬಣಗೊಳಿಸಲು ಬಳಸಬಹುದು ಎನ್ನುವುದೇ ಈ ಹೇಳಿಕೆಗಳ ಉದ್ದೇಶವಾಗಿರುವಂತೆ ಕಾಣುತ್ತದೆ.

ಪಾಕಿಸ್ತಾನ ತನ್ನ ಮೇಲೆ ಯಾವುದೇ ಸೀಮಿತ ಪ್ರಹಾರ ನಡೆದಿಲ್ಲ ಎಂಬ ತನ್ನ ನಿಲುವನ್ನು ದೃಢಪಡಿಸಲಿಕ್ಕಾಗಿ ಎಲ್‌ಓಸಿಯ ತನ್ನ ಭಾಗದಲ್ಲಿ ಅಂತಾರಾಷ್ಟ್ರೀಯ ಮಾಧ್ಯಮ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗಿ ತೋರಿಸಿದೆ. ಸೇನಾ ಕಾರ್ಯಾಚರಣೆಗಳು ನಡೆಯಿತೆನ್ನಲಾದ ಪ್ರದೇಶಗಳಲ್ಲಿ ಶಾಂತಿ ಹಾಗೂ ಸಹಜ ವಾತಾವರಣವಿದೆಯೆನ್ನುವಂತೆ ಕಾಣಿಸುತ್ತಿದೆ ಎಂಬಂತಹ ವರದಿಗಳನ್ನು ಸಿಎನ್‌ಎನ್, ಬಿಬಿಸಿ ಮತ್ತಿತರ ಪಾಶ್ಚಿಮಾತ್ಯ ಮಾಧ್ಯಮಗಳು ಪ್ರಸಾರ ಮಾಡಿವೆ.

ಮೋದಿ ಸರಕಾರ ನಡೆಸಿದ ಪ್ರಹಾರಗಳು ಮತ್ತು ಅವುಗಳ ಪರಿಣಾಮಗಳ ಬಗ್ಗೆ ಯಾವುದೇ ವಿಡಿಯೋ ತುಣುಕುಗಳನ್ನು ಅಥವ ಸಾಕ್ಷ್ಯವನ್ನು ಬಿಡುಗಡೆ ಮಾಡಿಲ್ಲ. ಭಾರತ ಮತ್ತು ಪಾಕಿಸ್ತಾನಿ ಮಾಧ್ಯಮಗಳ ನಡುವೆ ಪದಗಳ ಸಮರ ನಡೆಯುತ್ತಿರುವಾಗ, ನಡೆದಂಥ ಸೇನಾ ಕಾರ್ಯಾಚರಣೆಯ ಸ್ವರೂಪದ ಬಗ್ಗೆ ಜನತೆಗೆ ವರದಿ ಮಾಡುವುದು ಸರಕಾರದ ಜವಾಬ್ದಾರಿಯಾಗಿದೆ. ಹಾಗೆ ಮಾಡದಿರುವುದರಿಂದ, ಸರಕಾರ ಮತ್ತು ಆಡಳಿತ ಪಕ್ಷ ಭಯೋತ್ಪಾದನೆಯನ್ನು ತಡೆಯುವ ಮುನ್ನೆಚ್ಚರಿಕೆಯಿಂದ ಮಾಡಿರುವ ಪ್ರಹಾರ ಎಂಬುದನ್ನು ತಮ್ಮ ರಾಜಕೀಯ ಪ್ರದರ್ಶನವಾಗಿ ಮತ್ತು ಸಂಕುಚಿತ ರಾಷ್ಟ್ರಭಕ್ತಿಯ ಉನ್ಮಾದವನ್ನು ಬಡಿದೆಬ್ಬಿಸಲು ಬಳಸಿಕೊಳ್ಳುತ್ತಿದೆ ಎಂಬ ಅನುಮಾನ ಬೆಳೆಯತೊಡಗಿದೆ.

ಯಾವುದೇ ತುರ್ತು ಸ್ಥಿತಿಯನ್ನು ಎದುರಿಸಲೆಂದು ಗಡಿಯ ಎರಡೂ ಕಡೆಗಳಲ್ಲಿ ಹೆಚ್ಚುವರಿ ಸಶಸ್ತ್ರ ತುಕಡಿಗಳನ್ನು ನಿಯೋಜಿಸಲಾಗಿದೆ. ಸೇನಾ ಕಾರ್ಯಾಚರಣೆಯ ನಂತರ, ಎಲ್‌ಓಸಿ ಮತ್ತು ಅಂತಾರಾಷ್ಟ್ರೀಯ ಗಡಿಗುಂಟ ಇರುವ ಗ್ರಾಮಗಳ ಜನರನ್ನು ತೆರವುಗೊಳಿಸಿ ಸ್ಥಳಾಂತರಿಸಲಾಗಿದೆ. ಪಂಜಾಬ್ ರಾಜ್ಯವೊಂದರಲ್ಲೇ ಸುಮಾರು ಒಂದು ಸಾವಿರ ಗ್ರಾಮಗಳ ಜನರಿಗೆ ಹೊರ ಹೋಗಲು ಆದೇಶಿಸಲಾಗಿದೆ. ಇದರಿಂದ ಸ್ಥಳೀಯ ಜನರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಏಕೆಂದರೆ ಸ್ಥಳಾಂತರದಿಂದ ಅವರ ಜೀವನೋಪಾಯ ಅಸ್ತವ್ಯಸ್ತಗೊಳ್ಳುತ್ತದೆ.

ಸೀಮಿತ ಪ್ರಹಾರಗಳು ನಡೆದ ಬಗ್ಗೆ ಪ್ರಕಟಿಸಿದ ಕೆಲವು ದಿನಗಳ ನಂತರ ಬಾರಾಮುಲ್ಲಾದ ಸೇನೆ-ಬಿಎಸ್‌ಎಫ್ ಶಿಬಿರದ ಮೇಲೆ ದಾಳಿ ನಡೆದು ಒಬ್ಬ ಬಿಎಸ್‌ಎಫ್ ಸೈನಿಕ ಮೃತಪಟ್ಟಿದ್ದಾನೆ. ಇದು ಪಾಕಿಸ್ತಾನದಿಂದ ಬರಬಹುದಾದ ಪ್ರತಿಕ್ರಿಯೆಯ ಸ್ವರೂಪದ ಸೂಚಕವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ದಾಳಿಗಳು ಹೆಚ್ಚಬಹುದು. ಭದ್ರತಾ ಪಡೆಗಳು ಈ ಬೆದರಿಕೆಯನ್ನು ಇನ್ನೂ ಹೆಚ್ಚಿನ ಕಷ್ಟಕರ ಹಾಗೂ ವಿಷಮ ಸನ್ನಿವೇಶದಲ್ಲಿ ನಿಭಾಯಿಸಬೇಕಾಗಿ ಬರಬಹುದು. ಯಾಕೆಂದರೆ ಕಣಿವೆಯಲ್ಲಿನ ಜನರು ಇನ್ನೂ ಭಾರತೀಯ ಪ್ರಭುತ್ವದ ವಿರುದ್ಧ ಸಾಮೂಹಿಕ ಚಳವಳಿಗಳನ್ನು ನಡೆಸುವ ಮನೋಸ್ಥಿತಿಯಲ್ಲಿಯೇ ಇದ್ದಾರೆ.

'ಉರಿ ನಂತರ ಮುಂದೇನು' ಎಂಬ ನಮ್ಮ ಹಿಂದಿನ ಲೇಖನವೊಂದರಲ್ಲಿ ಉರಿ ದಾಳಿಗೆ ಸೇನಾ ಪ್ರತಿಕ್ರಿಯೆ ವ್ಯರ್ಥ ಎಂದು ನಾವು ಹೇಳಿದ್ದೆವು. ಉಭಯ ದೇಶಗಳ ನಡುವಿನ ಮೂಲ ಸಮಸ್ಯೆಗೆ ಅದು ಉತ್ತರವಾಗದು ಎಂದು ವಾದಿಸಿದ್ದೆವು. ಅದಕ್ಕೆ ಬೇಕಾಗಿರುವುದು ದೀರ್ಘ ರಾಜಕೀಯ ಮತ್ತು ರಾಜತಾಂತ್ರಿಕ ಪ್ರಯತ್ನಗಳು ಎಂದಿದ್ದೆವು.

ಈ ಪ್ರದೇಶದಲ್ಲಿನ ಭೌಗೋಳಿಕ-ರಾಜಕೀಯ ವಾಸ್ತವಗಳನ್ನು ಮೋದಿ ಸರಕಾರ ನಿರ್ಲಕ್ಷಿಸುವಂತಿಲ್ಲ. ಉರಿ ಘಟನೆಯ ಮೂರು ದಿನಗಳ ನಂತರ, ಅಮೆರಿಕ-ಪಾಕಿಸ್ತಾನ ರಕ್ಷಣಾ ಸಮಾಲೋಚನಾ ಗುಂಪು ಇಸ್ಲಾಮಾಬಾದ್‌ನಲ್ಲಿ ಸಭೆ ನಡೆಸಿತು. ಇದು ಭಾರತ-ಅಮೆರಿಕ ರಕ್ಷಣಾ ನೀತಿ ಗುಂಪಿಗೆ ಸಮನಾದುದು. ಉರಿ ಪ್ರಕರಣ ನಡೆದಿದ್ದಾಗ್ಯೂ, ಅವರ ಜಂಟಿ ಹೇಳಿಕೆ ಉಭಯರಿಗೂ ಸಾಮಾನ್ಯವಾದ ಸಮರ ವ್ಯೂಹದ ಉದ್ದೇಶಗಳನ್ನು ಸಾಧಿಸಲು, ಅದರಲ್ಲೂ ಮುಖ್ಯವಾಗಿ ಭಯೋತ್ಪಾದನೆಗೆ ಪ್ರತಿಯಾದ, ಪ್ರಾದೇಶಿಕ ಸ್ಥಿರತೆ ಮತ್ತು ಭದ್ರತಾ ಸಹಕಾರದ ಇತರ ವಿಷಯಗಳಲ್ಲಿನ ಉದ್ದೇಶ ಸಾಧನೆಗೆ ಬಲವಾದ ರಕ್ಷಣಾ ಸಂಬಂಧಗಳನ್ನು ಹೊಂದಲು ಉಭಯ ದೇಶಗಳು ಬದ್ಧವಾಗಿವೆ ಎಂದಿದೆ. ಅಫಘಾನಿಸ್ತಾನದ ಅಶ್ರಫ್ ಘನಿ ನೇತೃತ್ವದ ರಾಷ್ಟ್ರೀಯ ಐಕ್ಯತೆಯ ಸರಕಾರವು ಇಕ್ಕಟ್ಟಿಗೆ ಸಿಲುಕಿದೆ ಮತ್ತು ಅಲ್ಲಿ ತಾಲಿಬಾನ್ ಪಡೆಗಳು ಮುನ್ನಡೆ ಸಾಧಿಸುತ್ತಿವೆ. ಇಂಥ ಪರಿಸ್ಥಿತಿಯಲ್ಲಿ, ಅಪಘಾನಿಸ್ತಾನದಲ್ಲಿ ಪಾಕಿಸ್ತಾನದ ಪಾತ್ರ ಪ್ರಧಾನವಾದುದು ಎಂದು ಅಮೆರಿಕ ಒಪ್ಪಿಕೊಳ್ಳುತ್ತದೆ.

ಉರಿ ಘಟನೆಯ ಕೆಲವು ದಿನಗಳ ನಂತರ, ಪಾಕಿಸ್ತಾನ ನೆಲದಲ್ಲಿ ರಷ್ಯನ್ ಮತ್ತು ಪಾಕಿಸ್ತಾನಿ ಸಶಸ್ತ್ರ ಪಡೆಗಳ ಪ್ರಪ್ರಥಮ ಜಂಟಿ ಕವಾಯತು ನಡೆಯಿತು. ಭಾರತ ಮತ್ತು ಅಮೆರಿಕ ನಡುವೆ ಹೆಚ್ಚುತ್ತಿರುವ ಮಿಲಿಟರಿ ಮೈತ್ರಿಯ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗಿದೆ.


ಅಮೆರಿಕ, ರಷ್ಯಾ, ಚೀನಾ ಮತ್ತು ವಿಶ್ವಸಂಸ್ಥೆ, ಹೀಗೆ ಎಲ್ಲಾ ಪ್ರಮುಖ ಶಕ್ತಿಗಳು ಸಂಯಮದಿಂದಿರಿ, ಪರಿಸ್ಥಿತಿ ನಿಯಂತ್ರಣ ಮೀರಿ ಹೋಗುವಂತೆ ಬಿಡಬೇಡಿ ಎಂದು ಮೋದಿ ಸರಕಾರಕ್ಕೆ ಹೇಳಿವೆ. ಪಾಕಿಸ್ತಾನ ಸರಕಾರಕ್ಕೆ ಕೂಡ ಅದೇ ಸಂದೇಶ ನೀಡಿವೆ. ಭಾರತದ ಪ್ರಧಾನಿಯವರ ರಾಷ್ಟ್ರೀಯ ಭದ್ರತಾ ಸಲಹೆಗಾರರು ಪಾಕಿಸ್ತಾನದ ಭದ್ರತಾ ಸಲಹೆಗಾರರನ್ನು ಸೆಪ್ಟೆಂಬರ್ 30ರಂದು ಸಂಪರ್ಕಿಸಿದರು ಎಂಬ ಸಂಗತಿ ಮೋದಿ ಸರಕಾರ ಜಾಗತಿಕ ಅಭಿಪ್ರಾಯದಿಂದ ಹೊರತಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಪಂಜಾಬ್ ಮತ್ತು ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆಗಳು ನಡೆಯಲಿರುವ ಸಂದರ್ಭ ತಂದಿರುವ ಸಂಕುಚಿತ ಒತ್ತಡಗಳು ಇವರನ್ನು ಕರ್ಕಶ ಕಿರುಚಾಟಕ್ಕೆ ಇಳಿಯುವಂತೆ ಮಾಡಿವೆ. ಇದು ಬಿಗುವನ್ನು ತಿಳಿಗೊಳಿಸಲು ತೆಗೆದುಕೊಳ್ಳಬೇಕಾದ ಯಾವುದೇ ಕ್ರಮಗಳನ್ನು ಬುಡಮೇಲು ಮಾಡುತ್ತದೆ.

ಮೋದಿ ಸರಕಾರದ ಮನಸ್ಸಿನಲ್ಲಿ ಸ್ವಲ್ಪವಾದರೂ ರಾಷ್ಟ್ರಹಿತದ ಕಾಳಜಿ ಇದ್ದರೆ ಅದು ಪಾಕಿಸ್ತಾನಕ್ಕೆ ಎದುರಾಗಿ ಅಬ್ಬರದ ಮಾತುಗಳ ಚಕಮಕಿ ನಡೆಸುವುದನ್ನು ನಿಲ್ಲಿಸಿ ಗಡಿಯಾಚೆಯಿಂದ ನಡೆಯುವ ಭಯೋತ್ಪಾದನೆ ಕೃತ್ಯಗಳನ್ನು ಎದುರಿಸುವ ಗಡಿ ಭದ್ರತೆ ವ್ಯವಸ್ಥೆಯನ್ನು ಬಲಪಡಿಸಲು ತನ್ನ ಶಕ್ತಿ-ಸಾಮರ್ಥ್ಯಗಳನ್ನು ಕ್ರೋಢೀಕರಿಸಲಿ. ಯಾವುದೇ ಉಗ್ರಗಾಮಿ ಗುಂಪು ಗಡಿ ದಾಟಿ ಬರುವುದು ಕಷ್ಟಸಾಧ್ಯವಾಗದಂತೆ ಮಾಡಬೇಕು. ಅದೇ ಹೊತ್ತಿಗೆ, ಕಾಶ್ಮೀರ ಪರಿಸ್ಥಿತಿಗೆ ತುರ್ತು ರಾಜಕೀಯ ಗಮನ ಅಗತ್ಯವಾಗಿದೆ. ಸರಕಾರಿ ದಮನವನ್ನು ಅಂತ್ಯಗೊಳಿಸುವುದು ಮತ್ತು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ರಾಜಕೀಯ ಸಂವಾದ ಆರಂಭಿಸುವುದು ಅನಿವಾರ್ಯ ಅಗತ್ಯವಾಗಿದೆ. ಇದರೊಂದಿಗೆ ಪಾಕಿಸ್ತಾನದ ಜೊತೆ ಫಲಪ್ರದ ರೀತಿಯಲ್ಲಿ ರಾಜಕೀಯ ಮತ್ತು ರಾಜತಾಂತ್ರಿಕವಾಗಿ ತೊಡಗಿಸಿಕೊಳ್ಳುವಂತಹ ಪ್ರಕ್ರಿಯೆಯನ್ನು ಭಾರತ ಕ್ರಮವನ್ನು ಆರಂಭಿಸಬೇಕು. **ಅನು - ವಿಶ್ವ**



ಹೌದು, ಈ ದಿನಗಳಲ್ಲಿ ನಾವು ಟಿವಿ ನೋಡುತ್ತಿರುವುದು ಹೀಗೆಯೇ

ವ್ಯಂಗ್ಯಚಿತ್ರ: ಮಂಜುಲ್, ಡಿಎನ್ಎ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಈ ಪ್ರದೇಶದಲ್ಲಿನ ಭೌಗೋಳಿಕ-ರಾಜಕೀಯ ವಾಸ್ತವಗಳನ್ನು ಮೋದಿ ಸರಕಾರ ನಿರ್ಲಕ್ಷಿಸುವಂತಿಲ್ಲ.ಉರಿ ಘಟನೆಯ ಮೂರು ದಿನಗಳ ನಂತರ, ಅಮೆರಿಕ-ಪಾಕಿಸ್ತಾನ ರಕ್ಷಣಾ ಸಮಾಲೋಚನಾ ಗುಂಪು ಇಸ್ಲಾಮಾಬಾದ್‌ನಲ್ಲಿ ಸಭೆ ನಡೆಸಿತು. ಪಾಕಿಸ್ತಾನ ನೆಲದಲ್ಲಿ ರಷ್ಯನ್ ಮತ್ತು ಪಾಕಿಸ್ತಾನಿ ಸಶಸ್ತ್ರ ಪಡೆಗಳ ಪ್ರಪ್ರಥಮ ಜಂಟಿ ಕವಾಯತು ನಡೆಯಿತು.ಅಮೆರಿಕ, ರಷ್ಯಾ, ಚೀನಾ ಮತ್ತು ವಿಶ್ವಸಂಸ್ಥೆ, ಹೀಗೆ ಎಲ್ಲಾ ಪ್ರಮುಖ ಶಕ್ತಿಗಳು ಸಂಯಮದಿಂದಿರಿ, ಪರಿಸ್ಥಿತಿ ನಿಯಂತ್ರಣ ಮೀರಿ ಹೋಗುವಂತೆ ಬಿಡಬೇಡಿ ಎಂದು ಮೋದಿ ಸರಕಾರಕ್ಕೆ ಹೇಳಿವೆ. ಪಾಕಿಸ್ತಾನ ಸರಕಾರಕ್ಕೆ ಕೂಡ ಅದೇ ಸಂದೇಶ ನೀಡಿವೆ. ಭಾರತದ ಪ್ರಧಾನಿಯವರ ರಾಷ್ಟ್ರೀಯ ಭದ್ರತಾ ಸಲಹೆಗಾರರು ಪಾಕಿಸ್ತಾನದ ಭದ್ರತಾ ಸಲಹೆಗಾರರನ್ನು ಸೆಪ್ಟೆಂಬರ್ ೩೦ರಂದು ಸಂಪರ್ಕಿಸಿದರು ಎಂಬ ಸಂಗತಿ ಮೋದಿ ಸರಕಾರ ಜಾಗತಿಕ ಅಭಿಪ್ರಾಯದಿಂದ ಹೊರತಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

ಕಾಶ್ಮೀರದಲ್ಲೇಕೆ ಯುವಜನರು ಲ್ಯಾಪ್‌ಟಾಪ್ ಬದಲು ಕಲ್ಲುಗಳನ್ನು ಹಿಡಿದುಕೊಳ್ಳುತ್ತಿದ್ದಾರೆ?



ಕಲಮು 370 ಅಪರಾಧಿಯೇ?

ಹೌದು ಎನ್ನುತ್ತದೆ ಈಗಿನ ಕೇಂದ್ರ ಸರಕಾರ. ಅದು ಅಧಿಕಾರಕ್ಕೆ ಬಂದ ಕೂಡಲೇ ಈ ಕಲಮಿನ 'ಅನಾನುಕೂಲತೆಗಳ' ಬಗ್ಗೆ "ಮನವರಿಕೆ ಆಗಿರದಿದ್ದವರಿಗೆ ಮನವರಿಕೆ ಮಾಡಿಕೊಡುವ" ಪ್ರಕ್ರಿಯೆ ಆರಂಭಿಸಿರುವುದಾಗಿ ಅದರ ಜವಾಬ್ದಾರಿಯುತ ಮಂತ್ರಿಯೊಬ್ಬರು ಹೇಳಿದ್ದಾರೆ. ಈ ರೀತಿ ಮನವರಿಕೆ ಮಾಡಿಸಲು ಸಾಧ್ಯವೇ, ಅದರಿಂದ, ಪ್ರಧಾನ ಮಂತ್ರಿಗಳು ಆಶಿಸುವಂತೆ 'ಕಾಶ್ಮೀರವನ್ನು ಮತ್ತೆ ಭೂಸ್ವರ್ಗ'ವಾಗಿ ಮಾಡಬಹುದೇ? ಈ ಲೇಖನ ಪರಿಶೀಲಿಸುತ್ತದೆ.

"ಪ್ರತಿಯೊಬ್ಬ ಭಾರತೀಯ ಸುಂದರ ಕಾಶ್ಮೀರ ಕಣಿವೆಯನ್ನು ನೋಡುವ ಕನಸು ಕಾಣುತ್ತಾನೆ, ಪ್ರತಿಯೊಬ್ಬ ಭಾರತೀಯ ಕಾಶ್ಮೀರವನ್ನು ಪ್ರೀತಿಸುತ್ತಾನೆ..." ಇದು ಆಗಸ್ಟ್ 9ರಂದು ಮಧ್ಯಪ್ರದೇಶದ ಭಾವರಾ ಎಂಬಲ್ಲಿ ಪ್ರಧಾನ ಮಂತ್ರಿಗಳು ಹೇಳಿದ ಮಾತುಗಳು. ಇದಕ್ಕೆ ಒಂದು ತಿಂಗಳು ಮೊದಲು ಪ್ರತ್ಯೇಕತಾವಾದಿ ಮುಖಂಡ ಬುರ್ಹಾನ್ ವಾನಿಯ ಸಾವಿನ ಹಿನ್ನೆಲೆಯಲ್ಲಿ ಕಾಶ್ಮೀರ ಕಣಿವೆಯ ಹತ್ತೂ ಜಿಲ್ಲೆಗಳಲ್ಲಿ ಆರಂಭವಾದ ಪ್ರತಿಭಟನೆಗಳ ಬಗ್ಗೆ, ಅದರಿಂದಾಗಿ ಆದ ಸಾವು-ನೋವುಗಳ ಬಗ್ಗೆ ತಮ್ಮ ತಿಂಗಳ ಮೌನವನ್ನು ಮುರಿದಾಗ ಅವರು ಹೇಳಿದ ಮಾತುಗಳು.

ಈ ವೇಳೆಗಾಗಲೇ 70 ಕಾಶ್ಮೀರಿ ಯುವಜನರು ಭದ್ರತಾ ಪಡೆಗಳು ಗಲಭೆ ಎದುರಿಸಲು ಬಳಸುವ ಪೆಲೆಟ್‌ಗಳಿಗೆ ಬಲಿಯಾಗಿದ್ದರು. ಈ ಸಂಖ್ಯೆ ಅಕ್ಟೋಬರ್ 1 ರಂದು 83 ತಲುಪಿದೆ. ಭದ್ರತಾ ಪಡೆಗಳವರೂ ಕೆಲವರು ಪ್ರಾಣ ಕಳಕೊಂಡಿದ್ದಾರೆ. ಇವರೂ ಹೆಚ್ಚಿನವರು ಯುವಕರೇ.

ಪ್ರಧಾನಿಗಳು ಮುಂದುವರೆದು ಈ ರಾಜ್ಯ ಭೂಮಿಯ ಮೇಲಿನ ಸ್ವರ್ಗವಾಗಿಯೇ ಉಳಿಯುವಂತೆ ಮಾಡಿ ಎಂದು ಜಮ್ಮು-ಕಾಶ್ಮೀರದ ಯುವಜನರಿಗೆ ಮನವಿ ಮಾಡಿದರು. ಲ್ಯಾಪ್‌ಟಾಪ್‌ಗಳೋ, ವಾಲಿಬಾಲ್‌ಗಳೋ ಅಥವ ಕ್ರಿಕೆಟ್ ಬ್ಯಾಟ್‌ಗಳೋ ಇರಬೇಕಾದ ಕೈಗಳಲ್ಲಿ ಕಲ್ಲುಗಳು ಇರುವುದು ತನಗೆ ನೋವುಂಟು ಮಾಡಿದೆ ಎಂದು ಅವರು ಈ ಭಾಷಣದಲ್ಲಿ ಹೇಳಿದರು..

ಅತ್ತ ಭಾರತದ ಇತರ ಭಾಗಗಳಲ್ಲಿ ಕಾಶ್ಮೀರ ಕಣಿವೆಯ ವಿದ್ಯಾರ್ಥಿಗಳಿಗೆ ಕಿರುಕುಳದ ಸುದ್ದಿಗಳು ಬರುತ್ತಲೇ ಇವೆ. ಇತ್ತೀಚಿನದ್ದೆಂದರೆ ಪಂಜಾಬಿನ ಫತೇಹ್‌ಗಡ್‌ನಲ್ಲಿರುವ ದೇಶಭಗತ್‌ವಿಶ್ವವಿದ್ಯಾಲಯದಲ್ಲಿ, ಲುಧಿಯಾನಾದಲ್ಲಿ, ಮತ್ತು ಇದೇ ರಾಜ್ಯದ ಜಮ್ಮುವಿನಿಂದಲೂ ಬಂದಿರುವ ಸುದ್ದಿಗಳು.

ಏಕೆ ಸ್ವಾತಂತ್ರ್ಯದ ಏಳು ದಶಕಗಳು ಕಳೆಯುತ್ತಿದ್ದರೂ ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಕೂಗು ಈ ಭೂಮಿಯ ಮೇಲಿನ ಸ್ವರ್ಗದ ನಿವಾಸಿಗಳ ಬದುಕನ್ನು ನರಕ ಮಾಡುತ್ತಿದೆ, ದೇಶದ ಭದ್ರತೆಗೇ ಆತಂಕ ತರುತ್ತಿದೆ? ಇದು ಸಹಜವಾಗಿ ಏಳುವ ಪ್ರಶ್ನೆ.

ಇದಕ್ಕೆ ನಮ್ಮ ದೇಶವನ್ನು ಈಗ ಆಳುತ್ತಿರುವವರ ಉತ್ತರ ನೇರ ಮತ್ತು ಸ್ಪಷ್ಟ- ಸಂವಿಧಾನದ 370ನೇ ವಿಧಿ. ಸಹಜವಾಗಿಯೇ ಅವರ ಪರಿಹಾರವೂ ಸರಳ- ಈ ಕಲಮನ್ನು ರದ್ದು ಮಾಡಬೇಕು. ವಾಸ್ತವವಾಗಿ ಇದು ಈಗ ಕೇಂದ್ರದಲ್ಲಿ ಆಳುತ್ತಿರುವ ಬಿಜೆಪಿಯ, ಕರಾರುವಾಕ್ಕಾಗಿ ಹೇಳಬೇಕೆಂದರೆ ಅದರ ತಾತ್ವಿಕ ಸಂಘಟನೆಯಾದ ಆರೆಸ್ಸೆಸ್‌ನ ಮುಲಭೂತ ನಿಲುವುಗಳಲ್ಲಿ ಒಂದು.'

2014ರ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ನರೇಂದ್ರ ಮೋದಿಯವರು ಜಮ್ಮುನಲ್ಲಿ ನಡೆದ ಸಭೆಗಳಲ್ಲಿ ಕಲಮು 370ರ ಬಗ್ಗೆ 'ಮರುನೋಟ' ಬೀರುವ ಅಗತ್ಯ ಇದೆ ಎಂದಿದ್ದರು. ಅವರು ಪ್ರಧಾನ ಮಂತ್ರಿಗಳಾದ ಕೂಡಲೇ ಪ್ರಧಾನ ಮಂತ್ರಿ ಕಚೇರಿಯ ರಾಜ್ಯ ಮಂತ್ರಿಗಳಾದ ಜಿತೆಂದರ್ ಸಿಂಗ್ ಸರಕಾರ ಕಲಮು 370ನ್ನು ರದ್ದು ಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದರು. ಇದಕ್ಕೆ ಎಲ್ಲೆಡೆಗಳಿಂದ ಪ್ರತಿಭಟನೆಗಳು ಬಂದಾಗ ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡು ಸರಕಾರ "ಕಲಮು 370ರ ಅನಾನುಕೂಲತೆಗಳ ಬಗ್ಗೆ ಮನವರಿಕೆ ಆಗಿರದಿದ್ದವರಿಗೆ ಮನವರಿಕೆ ಮಾಡಿಕೊಡುತ್ತದೆ" ಎಂದರು.

ಪ್ರಧಾನ ಮಂತ್ರಿಗಳಾಗುವ ಮೊದಲು ಮೋದಿಯವರು ಹೇಳಿದಂತೆ 'ಮರುನೋಟ' ಬೀರಿದಾಗ ಅವರ ರಾಜ್ಯ ಮಂತ್ರಿಗಳು ಹೇಳಿದಂತೆ ಅದನ್ನು ರದ್ದು ಮಾಡಬೇಕಾದ ಬಗ್ಗೆ 'ಮನವರಿಕೆ' ಮಾಡಿಕೊಡಲು ಈ ಸರಕಾರಕ್ಕೆ ಸಾಧ್ಯವಾಗುತ್ತದೆಯೇ? ಇದೀಗ ವಿಶ್ಲೇಷಿಸಬೇಕಾದ ಸಂಗತಿ. ಇದಕ್ಕಾಗಿ ಇದರ ಇತಿಹಾಸದತ್ತ 'ಮರುನೋಟ' ಬೀರಬೇಕಾದ ಅಗತ್ಯವಿದೆ.

ಏನಿದು ಕಲಮು 370?

ಇದು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಕೊಡಮಾಡಿರುವ ಭಾರತದ ಸಂವಿಧಾನದ ಒಂದು ಕಲಮು ಅಥವ ವಿಧಿ. ಇದು ಸಂವಿಧಾನದ ಭಾಗ 21ರಲ್ಲಿ "ತಾತ್ಕಾಲಿಕ, ಸಂಕ್ರಮಣ ಕಾಲೀನ ಮತ್ತು ವಿಶೇಷ ವಿಧಿಗಳು" ಎಂಬ ಶಿರೋನಾಮೆಯ ಅಡಿಯಲ್ಲಿ ಬರುತ್ತದೆ. ಈ ಭಾಗದಲ್ಲಿ ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನದ ವಿಧಿ ಮಾತ್ರವಲ್ಲ, ಗುಜರಾತ, ನಾಗಾಲ್ಯಾಂಡ್, ಅಸ್ಸಾಂ, ಮಣಿಪುರ, ಆಂಧ್ರಪ್ರದೇಶ, ಸಿಕ್ಕಿಂ, ಮಿಝೋರಾಂ, ಅರುಣಾಚಲ ಪ್ರದೇಶ, ಗೋವಾ ಹಾಗೂ ಹೈದರಾಬಾದ್ ಕರ್ನಾಟಕಕ್ಕೆ ಮಾತ್ರ ಅನ್ವಯವಾಗುವ ಕಲಮು 371 ಎ, ಬಿ,ಸಿ,ಡಿ, ಇ, ಎಫ್, ಜಿ, ಹೆಚ್, ಐ ಮತ್ತು 371ಜೆ ಕಲಮುಗಳೂ ಇವೆ. ಬಿಜೆಪಿಗೆ, ಇಡೀ ಸಂಘ ಪರಿವಾರಕ್ಕೆ ಈ ಯಾವ ವಿಶೇಷ ವಿಧಿಗಳ ಬಗ್ಗೆಯೂ ತಕರಾರಿಲ್ಲ, ಕೇವಲ 370 ರ ಬಗ್ಗೆ ಮಾತ್ರ ತಕರಾರು ಎಂಬುದನ್ನು ಗಮನಿಸಬೇಕು.

ಸಂವಿಧಾನದಲ್ಲಿ ಕಲಮು 370 ಏಕೆ ಬಂತು?

ಈ ಪ್ರಶ್ನೆಯ ಉತ್ತರದಲ್ಲಿ ಇದರೊಂದಿಗೇ ಈ ರಾಜ್ಯದಲ್ಲಿ ಮಾತ್ರ 'ಮತ್ತು' ಎಂಬುದು ಏಕೆ ಸೇರಿ-ಕೊಂಡಿದೆ ಎಂಬುದಕ್ಕೆ ಉತ್ತರವೂ ಅಡಕವಾಗಿದೆ. ಭಾರತದ ಆಧುನಿಕ ಇತಿಹಾಸ ತಿಳಿದಿರುವವರಿಗೆ, 1857ರ ಪ್ರಥಮ ಸ್ವಾತಂತ್ರ್ಯ ಯುದ್ಧವನ್ನು ಅಡಗಿಸಿ ಬ್ರಿಟಿಶ್ ರಾಣಿಯ ಆಳ್ವಿಕೆಯನ್ನು ಹೇರಿದಾಗ ಇಲ್ಲಿ ಹಲವಾರು ರಾಜರುಗಳಿದ್ದರು, ಅವರ ಸಂಸ್ಥಾನಗಳು ನೇರವಾಗಿ ಬ್ರಿಟಿಶ್ ಆಳ್ವಿಕೆಗೆ ಒಳಪಡಲಿಲ್ಲ, ಅದರ ಪಾರಮ್ಯಕ್ಕೆ ಮಾತ್ರ ಒಳಪಟ್ಟಿದ್ದವು, ಅಂದರೆ ಅವರಿಗೆ ಆಂತರಿಕ ಸಾರ್ವಭೌಮತೆ ಇತ್ತು ಎಂಬ ಸಂಗತಿ ತಿಳಿದೇ ಇದೆ. 1947ರ ವೇಳೆಗೆ ಇದ್ದ ಇಂತಹ 565 ಸಂಸ್ಥಾನಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಒಂದು.

ಬ್ರಿಟಿಶರು ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ಕೊನೆಗೊಳಿಸಬೇಕಾಗಿ ಬಂದಾಗ ತಮ್ಮ ನೇರ ಆಳ್ವಿಕೆಯಲ್ಲಿದ್ದ ಪ್ರದೇಶಗಳನ್ನು ಭಾರತ ಮತ್ತು ಪಾಕಿಸ್ತಾನ ಎಂದು ವಿಭಜಿಸುವ ಜೊತೆಗೆ ಈ ಸಂಸ್ಥಾನಗಳಿಗೆ ಈ ಎರಡು ದೇಶಗಳಲ್ಲಿ ಒಂದನ್ನು ಸೇರುವ ಅಥವ ಸ್ವತಂತ್ರವಾಗಿ ಉಳಿಯುವ ಆಯ್ಕೆಯನ್ನು ಕೊಟ್ಟರು.

ಜಮ್ಮು ಮತ್ತು ಕಾಶ್ಮೀರ ಡೋಗ್ರಾ ವಂಶದ ರಾಜರ ಆಳ್ವಿಕೆಯಲ್ಲಿತ್ತು. ಈ ಸಂಸ್ಥಾನದ ವಿಶೇಷವೆಂದರೆ ಇದು ಮತೀಯ ದೃಷ್ಟಿಯಿಂದಲೂ ವಿಭಿನ್ನವಾದ ಮೂರು ಭೌಗೋಳಿಕ ವಿಭಾಗಗಳನ್ನು ಹೊಂದಿದೆ. ಮುಸ್ಲಿಮರು ಬಹಸಂಖ್ಯಾತರಾಗಿರುವ ಕಾಶ್ಮೀರ ಕಣಿವೆ, ಹಿಂದೂಗಳು ಬಹುಸಂಖ್ಯೆಯಲ್ಲಿರುವ ಜಮ್ಮು ಮತ್ತು ಬೌದ್ಧರೇ ಹೆಚ್ಚಾಗಿರುವ ಲಡಾಖ್ ಪ್ರದೇಶ. ಆದರೆ ಒಟ್ಟಾರೆಯಾಗಿ ಇದು ಮುಸ್ಲಿಮರು ಬಹುಸಂಖ್ಯಾತರಾಗಿದ್ದ ಹಿಂದೂ ರಾಜನ ಆಳ್ವಿಕೆ ಹೊಂದಿದ್ದ ಪ್ರದೇಶ.

ಮತೀಯವಾಗಿ, ಮತ್ತು ಭೌಗೋಳಿಕ ನಿಕಟತೆ-ಯ ದೃಷ್ಟಿಯಿಂದ ಮತೀಯ ಹಿನ್ನೆಲೆಯಲ್ಲಿ ಆಗಷ್ಟೇ ರಚನೆಗೊಂಡಿದ್ದ ಪಾಕಿಸ್ತಾನ ಈ 'ಭೂಸ್ವರ್ಗ'ದ ಮೇಲೆ ಕಣ್ಣು ಹಾಕಿತ್ತು. ಆದರೆ ಪಾಳೇಗಾರೀ ರಾಜಪ್ರಭುತ್ವದ ವಿರುದ್ಧ 1932ರಿಂದಲೇ ಹೋರಾಟ ನಡೆಸಿಕೊಂಡು ಬಂದಿದ್ದ ಕಾಶ್ಮೀರದ ಪ್ರಜಾಪ್ರಭುತ್ವ ಆಂದೋಲನ ಪಾಕಿಸ್ತಾನದ ಮತೀಯ ಪ್ರಭುತ್ವದ ಭಾಗವಾಗಲು ಸಿದ್ಧವಿರಲಿಲ್ಲ. ಹಿಂದೂ ರಾಜನಿಗಂತೂ ಸಹಜವಾಗಿಯೇ ಇದು ಒಪ್ಪಿಗೆಯಿರಲಿಲ್ಲ. ಆದರೆ ಭಾರತ ಸೇರಲೂ ಆತ ಸಿದ್ಧನಿರಲಿಲ್ಲ. ತನ್ನದೇ ಸ್ವತಂತ್ರ ಸಂಸ್ಥಾನವನ್ನು ಆಳ ಬಯಸಿದ್ದ. ಇದಕ್ಕೆ ಬ್ರಿಟಿಶರ ಚಿತಾವಣೆ ಮಾತ್ರವಲ್ಲ, ಮತ್ತು ಪ್ರಜಾಪರಿಷದ್ ಎಂಬ ಆರೆಸ್ಸೆಸ್ ಮಾದರಿಯ ಹಿಂದೂ ಸಂಘಟನೆಯ ಬೆಂಬಲವೂ ಇತ್ತು ಎಂಬುದು ಗಮನಾರ್ಹ.

ಈ ನಡುವೆ ಅಕ್ಟೋಬರ್ 1947ರಲ್ಲಿ ಪಾಕಿಸ್ತಾನದ ವಾಯುವ್ಯ ಗಡಿಪ್ರಾಂತದಿಂದ ದಾಳಿಕೋರರು ಪಾಕಿಸ್ತಾನದ ಆಳರಸರ ಮತ್ತು ಬ್ರಿಟಿಶ್ ಅಧಿಕಾರಿಗಳ ಬೆಂಬಲದೊಂದಿಗೆ ಕಾಶ್ಮೀರದೊಳಕ್ಕೆ ನುಗ್ಗಿ ಬಂದರು. ಭಯಭೀತನಾದ ರಾಜ ಶ್ರೀನಗರದಿಂದ ಜಮ್ಮುಗೆ ಪಲಾಯನ ಮಾಡಿದ. ಆಗ ಶ್ರೀನರವನ್ನು ದಾಳಿಕೋರರಿಂದ ರಕ್ಷಿಸಿಕೊಂಡದ್ದು ಒಂದೂವರೆ ದಶಕದಿಂದ ಪ್ರಜಾಪ್ರಭುತ್ವ ಚಳುವಳಿ ನಡೆಸುತ್ತಿದ್ದ ಶೇಖ್ ಅಬ್ದುಲ್ಲ ನೇತೃತ್ವದ ನ್ಯಾಶನಲ್ ಕಾನ್ಫರೆನ್ಸ್. ಶೇಖ್ ಅಬ್ದುಲ್ಲ ಶ್ರೀನಗರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದು ದಾಳಿಕೋರರನ್ನು ಪ್ರತಿರೋಧಿಸಿ, ಹಿಮ್ಮೆಟ್ಟಿಸುವ ಕರೆ ನೀಡಿದರು. ಭಾರತವನ್ನು ಸೇರುವಂತೆ ರಾಜನ ಮೇಲೆ ಒತ್ತಡ ಹಾಕಿದರು. ಕೊನೆಗೂ ಸ್ವತಂತ್ರವಾಗಿ ರಾಜ್ಯಭಾರ ನಡೆಸುವ('ಆಝಾದಿ'?) ಯೋಚನೆ ಬಿಟ್ಟ ರಾಜ ಹರಿಸಿಂಗ್ ಭಾರತವನ್ನು ಸೇರುವ ಯೋಚನೆ ಮಾಡಿದರು, ಈ ಸೇರ್ಪಡೆಯನ್ನು ಮುಂದೆ ಕಾಶ್ಮೀರದ ಜನತೆ ಅನುಮೋದಿಸಬೇಕು ಮತ್ತು ಅವರ ಅನನ್ಯತೆಯನ್ನು ಇದು ರಕ್ಷಿಸಬೇಕು ಎಂದು ನ್ಯಾಶನಲ್ ಕಾನ್ಫರೆನ್ಸ್ ಹೇಳಿತು.

ಭಾರತದ ಸಂವಿಧಾನದಲ್ಲಿ ಇಂತಹ ವಿಶೇಷ ವಿಧಿಯನ್ನು ಸೇರಿಸಬೇಕಾಗಿ ಬಂದ ಹಿನ್ನೆಲೆ ಇದು.

ಪುಟ 10 ನೋಡಿ

ಶೇಖ್ ಅಬ್ದುಲ್ಲಾರೊಂದಿಗೆ ಜವಹರಲಾಲ್ ನೆಹರು ಮತ್ತು ಸರ್ದಾರ್ ವಲಭಭಾಯಿ ಪಟೇಲ್





ದೇಶ ವಿಭಜನೆಯಾದಾಗ ಇತರಡೆಗಳಲ್ಲಿ ಲಕ್ಷಾಂತರ ಮಂದಿ ಪ್ರಾಣ ಕಳಕೊಂಡರು, ಇನ್ನೂ ಲಕ್ಷಾಂತರ ಮಂದಿ ಮನೆಮಾರು ಕಳಕೊಂಡು ವಲಸೆ ಹೋದರು, ಆದರೆ ಕಾಶ್ಮೀರ ಕಣಿವೆಯಲ್ಲಿ ಒಂದೇ ಒಂದು ಕೋಮು ಗಲಭೆ ನಡೆಯಲಿಲ್ಲ. ಇಂತಹ ವಿವೇಕಯುತ ಸ್ವರ್ಗ ಪ್ರತಿದಿನ ಕಾಶ್ಮೀರಿ ಮತ್ತು ಭದ್ರತಾ ಪಡೆಗಳ ಪ್ರತಿಭಾವಂತ ಯುವಜನರ ಪ್ರಾಣ ಹೀರುವ ನರಕವಾಗಲು ಕಾರಣರಾರು?

ಇಂದು ಕಾಶ್ಮೀರದ ಜನತೆ ಕೇಳುತ್ತಿದ್ದಾರೆ, ನಾವು ಎರಡು ರಾಷ್ಟ್ರಗಳ ಸಿದ್ಧಾಂತವನ್ನು ತಿರಸ್ಕರಿಸಿದೆವು, ಎರಡು ರಾಷ್ಟ್ರೀಯತೆಗಳ ನಡುವಿನ ಸಂಬಂಧಕ್ಕೆ ಧರ್ಮವನ್ನು ಆಧಾರವಾಗಿಸಲು ನಿರಾಕರಿಸಿದೆವು, ಆದರೆ ಇಂದು ನಮ್ಮ ಸೇರ್ಪಡೆಯ ಬುನಾದಿಯನ್ನೇಕೆ ವ್ಯವಸ್ಥಿತವಾಗಿ ಹಾಳುಗೆಡವುತ್ತಿದ್ದೀರಿ ಎಂದು.

ಈ ಕಣಿವೆಯಲ್ಲಿ ವಯಸ್ಸಾದ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಹೊತ್ತು ಮಸಣದತ್ತ ಸಾಗುತ್ತಿದ್ದರೆ, ದೇಶದ ಇತರೆಡೆಗಳಲ್ಲಿ ಯುವ ಸೈನಿಕರ, ಅಧಿಕಾರಿಗಳ ಹೆಣಪಟ್ಟಿಗೆಗಳನ್ನು ಅವರ ತಂದೆ-ತಾಯಂದಿರು ಬರಮಾಡಿಕೊಳ್ಳಬೇಕಾಗುತ್ತಿದೆ. ಖಂಡಿತ, ಈ ಯುವಜನ ಇಂತಹ ಸಾವು ಕಾಣಲು ಹುಟ್ಟಿದವರಲ್ಲ! ಭೂಮಿಯ ಮೇಲಿನ ಸ್ವರ್ಗ ಎಂದೆನಸಿಕೊಂಡಿರುವಲ್ಲಿನ ಇಂತಹ ಉನ್ಮಾದ ನಿಲ್ಲಬೇಕು.

ಕಾಶ್ಮೀರಿಗಳನ್ನು ದಾರಿ ತಪ್ಪಿಸುವ ಮಂದಿಗಳಿಗೇನೂ ಕೊರತೆಯಿಲ್ಲ. ಅದೇ ರೀತಿ, ಅವರೊಂದಿಗೆ ಗೆಳೆತನವನ್ನು ಬಲಪಡಿಸ ಬಯಸುವವರಿಗೂ ಕೊರತೆಯಿಲ್ಲ. ಸಂಬಂಧಗಳನ್ನು ಬಲಪಡಿಸುವ ಹೋರಾಟವನ್ನು ಗೆಲ್ಲಲು ಈಗಲೂ ಸಾಧ್ಯವಿದೆ.

-ಮಹಮ್ಮದ್ ಯೂಸುಫ್ ತರಿಗಾಮಿ, ಕಾಶ್ಮೀರದ ಕುಲ್ಗಾಮ್‌ನಿಂದ ಸತತ ನಾಲ್ಕನೇ ಬಾರಿ ಆರಿಸಿ ಬಂದಿರುವ ಶಾಸಕ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು, ಹರಿಯಾಣದಲ್ಲಿ ಸಭೆಯೊಂದರಲ್ಲಿ ಮಾತಾಡುತ್ತ

ವಸಂತರಾಜ ಎನ್.ಕೆ.

ಶ್ರಮಿಕನ ಅನುಭವದ ಕಲಾವಿದ ಯೂಸುಫ್

ನಾನು ಯೂಸುಫ್ ಅರಕ್ಕಲ್ ಅವರನ್ನು ಮೊದಲ ಬಾರಿಗೆ ಭೇಟಿ ಮಾಡಿದ್ದು 1970ರ ದಶಕದ ಆದಿಭಾಗದಲ್ಲಿ. ಐ.ಐ.ಎಸ್.ಸಿ. ಯಲ್ಲಿ ವಿದ್ಯಾರ್ಥಿಯಾಗಿದ್ದಾಗ. ಆಗ ಅವರು ಎಚ್.ಎ.ಎಲ್.ನಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಎಚ್.ಎ.ಎಲ್.ನಲ್ಲಿ ರಾತ್ರಿ ಪಾಳಿಯಲ್ಲಿ ದುಡಿದು ಚಿತ್ರ ಕಲಾ ಪರಿಷತ್ತಿನಲ್ಲಿ ಹಗಲಲ್ಲಿ ಕಲೆಯ ಡಿಪ್ಲೊಮಾ ಮುಗಿಸಿ, ಸಿಕ್ಕ ಸಮಯದಲ್ಲೆಲ್ಲಾ ಕಲಾಕೃತಿ ರಚನೆಯಲ್ಲಿ ತೊಡಗಿರುತ್ತಿದ್ದರು. ಕಲೆಯನ್ನು ಪೂರ್ಣ ವೃತ್ತಿಯಾಗಿಸುವ ಹಾದಿಯಲ್ಲಿದ್ದರು. ನನಗೆ ಅವರ ಪರಿಚಯವಾದದ್ದು ಸಾರ್ವಜನಿಕ ಕ್ಷೇತ್ರದ ಫ್ಯಾಕ್ಟರಿ (ಐ.ಟಿ.ಐ., ಎಚ್.ಎ.ಎಲ್.) ಗಳಲ್ಲಿ ದುಡಿಯುತ್ತಿದ್ದ ನಮ್ಮ ಪಕ್ಷದ ಸಕ್ರಿಯ ಸಂಗಾತಿಗಳ ಮೂಲಕ. ಕಲೆಯ ಅಭ್ಯಾಸ ಅಲ್ಲದೆ ಕಲೆಯ ಬಗೆಗಿನ ಓದಿನ ಬಗ್ಗೆ ಅಪಾರ ಹಸಿವು ಹೊಂದಿದ್ದ ಯೂಸುಫ್‌ಗೆ ಐ.ಐ.ಎಸ್.ಸಿ. ಲೈಬ್ರರಿಯಲ್ಲಿ ಕಲೆಯ ಬಗ್ಗೆ ಇದ್ದ ಎಲ್ಲಾ ಪುಸ್ತಕಗಳನ್ನು ಓದುವ ಹಂಬಲ. ಚಿತ್ರಕಲೆಯ ಬಗ್ಗೆ ಸ್ವಲ್ಪ ಆಸಕ್ತಿ ಇದ್ದ ನನ್ನ ಭೇಟಿ ಆದ ಮೇಲೆ ನನ್ನ ಬೆನ್ನು ಬಿದ್ದು, ಲೈಬ್ರರಿಯಲ್ಲಿ ಇರುವ ಎಲ್ಲಾ ಕಲಾ ಪುಸ್ತಕಗಳ ಬಗ್ಗೆ ತಿಳಿದುಕೊಂಡು ನನ್ನ ಮೂಲಕ ಪಡೆದುಕೊಂಡು, ಅವನ್ನೆಲ್ಲಾ ಓದಿ ಹಾಕಿ ಬಿಡುತ್ತಿದ್ದರು.

16ನೇ ವರ್ಷದಲ್ಲೇ ಕಲಾವಿದನಾಗುವ ಹಂಬಲದಿಂದ ಕೇರಳದ ಕಣ್ಣೂರಿನಿಂದ ಓಡಿ ಬಂದು ಹಸಿವು ಬಡತನಗಳನ್ನು ಎದುರಿಸಿ, ಸಿಕ್ಕ ಕೆಲಸ ಮಾಡುತ್ತಾ ಬೀದಿಯಲ್ಲಿ ಬದುಕಿದ್ದ ಅಪಾರ ಅನುಭವವಿತ್ತು ಅವರಿಗೆ. ಮಾತ್ರವಲ್ಲ, ಸ್ವತಃ ಕಾರ್ಮಿಕನಾಗಿ ದುಡಿದ, ದುಡಿಯುವ ಜನರ ಪಕ್ಷದ ಚಳುವಳಿಯ ಜತೆ ಸಂಪರ್ಕ ಹೊಂದಿ ಅವರ ಸಾಮಾಜಿಕ ಸಂವೇದನೆ ಮಾಗಿತ್ತು. ಅದು ಅವರ ಕಲಾಕೃತಿಗಳಲ್ಲಿ ಕಂಡು ಬರುತ್ತಿತ್ತು. ಅಪ್ರತಿಮ ಕಲಾ ಸಂವೇದನೆ ಕೌಶಲ್ಯ ಹೊಂದಿದ್ದ, ಕಠಿಣ ಶ್ರಮಜೀವಿಯಾಗಿದ್ದ ಯೂಸುಫ್ ಅವರಿಗೆ ಉದಯೋನ್ಮುಖ ಕಲಾವಿದನಿಂದ ಪ್ರಬುದ್ಧ ಕಲಾವಿದನಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. 1979 ಮತ್ತು 1981ರಲ್ಲಿ ಅವರ ಕೃತಿಗಳಿಗೆ ಎರಡು ಬಾರಿ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಬಂತು. 1983ರಲ್ಲಿ ಭಾರತ ಸರಕಾರದ ಶಿರೋಮಣಿ ಕಲಾ ಪುರಸ್ಕಾರ ಎಂಬ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿತು. ಕರ್ನಾಟಕದಲ್ಲಿ (ಅದರಲ್ಲೂ ಚಿತ್ರಕಲಾ



ಪರಿಷತ್ – ಆಗ ಅಂತಹ ಪ್ರಸಿದ್ಧ ಕಲಾ ಕಾಲೇಜು ಆಗಿರಲಿಲ್ಲ) ಕಲೆ ಕಲಿತು ಇಲ್ಲೇ ಕೆಲಸ ಮಾಡುತ್ತಾ ರಾಷ್ಟ್ರೀಯ ಖ್ಯಾತಿಗೆ ಏರಿದ ಅಪರೂಪದ ಕಲಾವಿದ ಯೂಸುಫ್. ರಾಷ್ಟ್ರೀಯ ಖ್ಯಾತಿ ಗಳಿಸಿದ ಹೆಚ್ಚಿನ ಇತರ ಕರ್ನಾಟಕದ ಕಲಾವಿದರು ಮುಂಬಯಿ, ಬರೋಡಾ, ಶಾಂತಿನಿಕೇತನ ಅಥವಾ ಇತರ ಕಡೆ ಓದಿದವರು ಅಥವಾ ಪ್ರಧಾನವಾಗಿ ಕೆಲಸ ಮಾಡಿದವರು.

ಒಂದೇ ಪ್ರಕಾರ, ಪರಿಕರ/ಸಾಮಗ್ರಿಗೆ ಅಂಟಿಕೊಳ್ಳದೆ, ಹಲವು – ಚಿತ್ರ, ಭಿತ್ತಿಚಿತ್ರ, ಶಿಲ್ಪ, ಗ್ರಾಫಿಕ್ ಪ್ರಿಂಟ್, ಇನ್ಸ್ಟಲೇಶನ್ – ದೃಶ್ಯ ಕಲಾ ಪ್ರಕಾರಗಳಲ್ಲಿ ಪ್ರಯೋಗಗಳನ್ನು ಮಾಡಿ ಪ್ರಬುದ್ಧತೆ ಸಾಧಿಸಿದ ವೈಶಿಷ್ಟ್ಯ ಅವರದು. ಸದಾ ಪ್ರಯೋಗಶೀಲರಾಗಿದ್ದ ಅವರು ವಸ್ತು, ತಂತ್ರ, ಅಭಿವ್ಯಕ್ತಿಗಳಲ್ಲಿ ಆಶ್ಚರ್ಯಜನಕ ವೈವಿಧ್ಯತೆ ಸಾಧಿಸಿದವರು. ಅವರು ಹಲವು ವಿಷಯಗಳ ಮೇಲೆ ಸರಣಿ ಕಲಾಕೃತಿಗಳಿಗೆ ಹೆಸರಾದವರು. ಗಾಳಿಪಟ, ಕಾಗೆ, ವಾರಣಾಸಿಯ ಮಹಿಳೆಯರು ಬಿಳಿಬಣ್ಣದಲ್ಲಿ, ಕಿಡಕಿಯ ಬಳಿ ನಿಂತ ಮುದುಕ – ಅವರ ಕೆಲವು ಸರಣಿ ಚಿತ್ರಗಳು. ಯುರೋಪಿನ ಹಲವು ಪ್ರಸಿದ್ಧ ಕಲಾವಿದರ ಪ್ರಮುಖ ಕಲಾಕೃತಿಗಳನ್ನೂ ನಮ್ಮ ದೇಶ–ಕಾಲದಲ್ಲಿ ಮರುಸಸೃಷ್ಟಿ ಮಾಡಿ 2002ರಲ್ಲಿ ರಚಿಸಿದ ಅವರ ಸರಣಿ ಕಲಾಕೃತಿಗಳು ವಿಶಿಷ್ಟವಾದವು. ಸ್ಪಾನಿಶ್ ಪಟ್ಟಣದ ಮೇಲೆ ಫ್ಯಾಸಿಸ್ಟ್ ದಾಳಿಯ ಬಗೆಗಿನ ಪಿಕಾಸೊ ಅವರ 'ಗೆರ್ನಿಕಾ' ಚಿತ್ರದ ಮರುಸೃಷ್ಟಿಯಾಗಿ 'ಯುದ್ಧ, ಗೆರ್ನಿಕಾ ಮರುಕಳಿಸಿವೆ' ಎಂಬ ಕಲಾಕೃತಿ ಈ ಸರಣಿಯಲ್ಲಿ ಸೇರಿವೆ. ಇತ್ತೀಚೆಗೆ 135 ಹಿಂದಿನ ಮತ್ತು ಇಂದಿನ ಕಲಾವಿದರ ಚಿತ್ರಗಳ ಸರಣಿ ಸಹ ವಿಶಿಷ್ಟ. 2003ರಲ್ಲಿ ಇಟಲಿಯ ಫ್ಲೋರೆನ್ಸ್ ನಲ್ಲಿ ನಡೆದ 'ಸಮಕಾಲೀನ ಅಂತರ್ರಾಷ್ಟ್ರೀಯ ದ್ವೈವಾರ್ಷಿಕ ಕಲಾಮೇಳ' ಅವರಿಗೆ ಲೊರೆನ್ಜೊ ಪ್ರಶಸ್ತಿ ದೊರಕಿದ್ದು ಅವರಿಗೆ ಸಿಕ್ಕಿದ ಪ್ರಮುಖ ಅಂತರ್ರಾಷ್ಟ್ರೀಯ ಮನ್ನಣೆ.

ಗುಜರಾತ್ 2002 ದಂಗೆಗಳಿಗೆ ಗಂಭೀರವಾಗಿ ಪ್ರತಿಸ್ಪಂದಿಸಿ ಒಂದು ಪೂರ್ಣ ಪ್ರಮಾಣದ ಕಲಾಕೃತಿ ರಚಿಸಿದ್ದು ಬಹುಶಃ ಯೂಸುಫ್ ಮಾತ್ರ. ಈ ಕಲಾಕೃತಿಯನ್ನು ಅವರು 'ಗುಜರ್ನಿಕಾ' ಎಂದು ಕರೆದರು, ಪಿಕಾಸೊ ಅವರ 'ಗೆರ್ನಿಕಾ' ಹಿಂದೆ ಇದ್ದ ಫ್ಯಾಸಿಸ್ಟ್ ಕ್ರೌರ್ಯಕ್ಕೂ ಗುಜರಾತ್ ದಂಗೆಗಳಿಗೂ ಇದ್ದ ಸಾಮ್ಯ ನೆನಪಿಸುವಂತೆ. ಮೂರು ಸ್ವತಂತ್ರ (ಆದರೂ ಸಂಬಂಧಿತ) ಚಿತ್ರಗಳ ಕೂಡುವಿಕೆಯಂತೆ ಕಾಣುವ 15ಅಡಿ ಉದ್ದ 6 ಅಡಿ ಅಗಲ ಇರುವ ಈ ಬೃಹತ್ ಚಿತ್ರದಲ್ಲಿ 'ಗೆರ್ನಿಕಾ' ಮತ್ತು ಹಲವು ಇಂತಹ ಕ್ರೌರ್ಯಗಳ ಬಿಂಬಗಳನ್ನು ಸೃಜನಶೀಲವಾಗಿ ಬಳಸಲಾಗಿದೆ. ಯೂಸುಫ್ ಅವರ ನಿಧನದ ನಂತರ ಹಲವು ಲೇಖನ/ಸ್ಮರಣೆಗಳಲ್ಲಿ ಅವರ ಈ ಪ್ರಮುಖ ಕಲಾಕೃತಿ ಬಗ್ಗೆ ಏನೂ ಹೇಳದೆ ಹೋಗಿದ್ದು ಬಹಳ ಆಶ್ಚರ್ಯಕರ ಅಥವಾ ಇಂದಿನ ದಿನಮಾನಗಳಲ್ಲಿ ಅಷ್ಟೇನೂ ಆಶ್ಚರ್ಯಕರ ಅಲ್ಲ ಅಂದಿರಾ?

ಯೂಸುಫ್ ಅವರ ಹಲವು ಕಲಾಕೃತಿಗಳಲ್ಲಿ ಕಂಡು ಬರುವ ಸಾಮಾನ್ಯ ಜನರ ಅದರಲ್ಲೂ ನಗರಗಳ ದಮನಿತ ವಂಚಿತ ಜನರ ಬಗೆಗಿನ ಸಂವೇದನೆ ಅಪೂರ್ವವಾದುದು. ನಗರ ಜೀವನದ ಹೊಡೆತಕ್ಕೆ ಜರ್ಝರಿತವಾದ ಒಂಟಿಯಾಗಿರುವ ಗಾಢಾಂಧಕಾರದಲ್ಲಿರುವ ಸಾಮಾನ್ಯ ಜನರ ಬಿಂಬಗಳು ಮರೆಯಲಾರದ್ದು, ಗಾಢ ಪರಿಣಾಮ ಉಂಟು ಮಾಡುವಂಥದ್ದು



ಅಪ್ಲೈಡ್ ಡಿ.ಎನ್.ಎ


ಯೂಸುಫ್ ಬಹುಶಃ ಬೆಂಗಳೂರಿನ ಸಾರ್ವಜನಿಕ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ವಿಶಿಷ್ಟ ಕಲಾವಿದ ಕೂಡಾ. ಅವರ ಹಲವು ಭಿತ್ತಿಚಿತ್ರಗಳು, ಶಿಲ್ಪಗಳು, ಇನ್ಸ್ಟಲೇಶನುಗಳು ಬೆಂಗಳೂರು ನಗರದ ಭಾಗವಾಗಿ ಬಿಟ್ಟಿವೆ. ಎಂ.ಜಿ. ರಸ್ತೆಯಲ್ಲಿರುವ 'ಅಪ್ಲೈಡ್ ಡಿ.ಎನ್.ಎ.' ಶಿಲ್ಪ, ವಿಮಾನ ನಿಲ್ದಾಣದಲ್ಲಿರುವ 'ಹಾರಾಟ'ದ ಬಗೆಗಿರುವ ಮ್ಯೂರಲ್ ಇದಕ್ಕೆ ಎರಡು ಉದಾಹರಣೆಗಳು.


ಕಲಾವಿದನಾಗಿ ತಮ್ಮ ಹೋರಾಟದ ದಿನಗಳನ್ನು ಮರೆಯದ ಯೂಸುಫ್ ಯುವ ಉದಯೋನ್ಮುಖ ಕಲಾವಿದರಿಗೆ ಹಣಕಾಸು ಸೇರಿದಂತೆ ಹಲವು ರೀತಿಯಲ್ಲಿ ಬೆಂಬಲ ಕೊಡುತ್ತಿದ್ದರು. ಉದಯೋನ್ಮುಖ ಕಲಾವಿದರ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲು 'ಸಾರಾ ಅರಕ್ಕಲ್ ಗಾಲರಿ' ಎಂಬ ಸಂಘಟನೆಯನ್ನೆ ಆರಂಭಿಸಿದರು. ಪ್ರತಿ ವರ್ಷ 50 ರಷ್ಟು ಹೊಸ ಕಲಾವಿದರ ಪ್ರದರ್ಶನಗಳನ್ನು ಏರ್ಪಡಿಸುವ ಸಂಘಟಿತ ಪ್ರಯತ್ನ ಇದಾಗಿತ್ತು.

ಯೂಸುಫ್ ನಿಧನದೊಂದಿಗೆ ನಾವು ಒಬ್ಬ ವಿಶಿಷ್ಟ ಕಲಾವಿದನನ್ನು ಕಳೆದುಕೊಂಡಿದ್ದೇವೆ. ●



ಗುಜರ್ನಿಕಾ





ಕಾಶ್ಮೀರದಲ್ಲೇಕೆ ಯುವಜನರು ಲ್ಯಾಪ್‌ಟಾಪ್ ಬದಲು ಕಲ್ಲುಗಳನ್ನು ಹಿಡಿದುಕೊಳ್ಳುತ್ತಿದ್ದಾರೆ? ಕಲಮು 370 ಅಪರಾಧಿಯೇ?....

ಪುಟ 8 ರಿಂದ

ಕಾಶ್ಮೀರದ ಅನನ್ಯತೆಯನ್ನು ಮತ್ತು ಸ್ವಾಯತ್ತತೆಯನ್ನು ಖಚಿತ ಪಡಿಸುವುದು ಹೇಗೆ ಎಂಬ ಚರ್ಚೆಯಲ್ಲಿ ಪ್ರಧಾನ ಮಂತ್ರಿ ನೆಹರೂ ಮತ್ತು ಗೃಹಮಂತ್ರಿ ವಲ್ಲಭಭಾಯಿ ಪಟೇಲ್ ಭಾಗವಹಿಸಿದ್ದರು. ಈ ಸೇರ್ಪಡೆ ರಾಜ್ಯದ ಜನತೆಯ ಇಚ್ಛೆಯನ್ನು ತಿಳಿಯುವ ವರೆಗಿನ ತಾತ್ಕಾಲಿಕ ಸಂಗತಿ ಎಂದು ಆಗ ಪಟೇಲರು ಸ್ಪಷ್ಟಪಡಿಸಿದ್ದರು. ಅಂತಿಮವಾಗಿ ಇದನ್ನು ಬಿಂಬಿಸುವ ಒಂದು ವಿಶೇಷ ಕಲಮನ್ನು ಆಗ ಸಿದ್ಧಗೊಳಿಸುತ್ತಿದ್ದ ಸಂವಿಧಾನದಲ್ಲಿ ಸೇರಿಸಲು ನಿರ್ಧರಿಸಲಾಯಿತು. ಅದೇ ಮುಂದೆ ಭಾರತದ ಸಂವಿಧಾನ ಅಂಗೀಕಾರವಾದಾಗ ಕಲಮು 370ಎಂದು ಹೆಸರು ಪಡೆಯಿತು.

ಇದರ ಪ್ರಕಾರ ಜಮ್ಮು ಮತ್ತು ಕಾಶ್ಮೀರ ಸಂವಿಧಾನ ಸಭೆಯನ್ನು ರಚಿಸಲಾಯಿತು. ಅದು 1957ರಲ್ಲಿ ಜಮ್ಮು ಮತ್ತು ಕಾಶ್ಮೀರದ ಸಂವಿಧಾನವನ್ನು ಅಂಗೀಕರಿಸಿತು. ಕಲಮು 370(3)ರ ಪ್ರಕಾರ ಭಾರತದ ರಾಷ್ಟ್ರಪತಿಗಳು ಈ ಕಲಮನ್ನು ರದ್ದು ಮಾಡಬಹುದು, ಆದರೆ ಅದು ಜಮ್ಮು–ಕಾಶ್ಮೀರದ ಸಂವಿಧಾನ ಸಭೆಯ ಒಪ್ಪಿಗೆಯಿಂದ ಮಾತ್ರವೇ ಆಗಬೇಕು. ಜಮ್ಮು–ಕಾಶ್ಮೀರ ಸಂವಿಧಾನ ಸಭೆ 1957ರಲ್ಲಿ ವಿಸರ್ಜನೆಗೊಂಡಿರುವುದರಿಂದ ಈಗ 370ನೇ ಕಲಮನ್ನು ರದ್ದು ಮಾಡುವುದು ಕಾನೂನು ಪ್ರಕಾರ ಕಷ್ಟಸಾಧ್ಯ.

ಇಲ್ಲಿ ಕಾನೂನಿನ ಪ್ರಶ್ನೆಯಷ್ಟೇ ಅಲ್ಲ, ಕಾಶ್ಮೀರದ ಪ್ರಜಾಪ್ರಭುತ್ವ ಆಂದೋಲನಕ್ಕೆ ನೀಡಿದ ಗಂಭೀರ ವಚನವನ್ನು ಪಾಲಿಸುವ ಪ್ರಶ್ನೆಯೂ ಅಡಕವಾಗಿದೆ.

ಕಲಮು 370 ನೀಡಿದ್ದ ಭರವಸೆಗಳು ಈಡೇರಿವೆಯೇ?

1947 ಅಕ್ಟೋಬರ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ಭಾರತವನ್ನು ಸೇರುವ ಒಡಂಬಡಿಕೆಗೆ ಸಹಿ ಹಾಕಿದ ನಂತರ ಭಾರತೀಯ ಸೇನೆ ದಾಳಿಕೋರರ ವಿರುದ್ಧ ಕಾರ್ಯಾಚರಣೆಗಿಳಿಯಿತು. ವಿವಾದ ವಿಶ್ವಸಂಸ್ಥೆಗೆ ಹೋಯಿತು. ಅದು ಕದನವನ್ನು ನಿಲ್ಲಿಸಿ ಪಾಕಿಸ್ತಾನ ತನ್ನ ಪಡೆಗಳನ್ನು ಹಿಂದಕ್ಕೆ ಪಡೆಯಬೇಕು, ಭಾರತ ತನ್ನ ಸೇನಾ ಪಡೆಗಳ ಪ್ರಮಾಣವನ್ನು ತಗ್ಗಿಸಬೇಕು, ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಜನಮತಗಣನೆ ನಡೆಸಬೇಕೆಂದು ನಿರ್ಣಯ ಅಂಗೀಕರಿಸಿತು. ಆದರೆ ಇದು ಜಾರಿಗೆ ಬರಲೇ ಇಲ್ಲ.

ಇತ್ತ ಭಾರತದೊಡನೆ ಸೇರ್ಪಡೆಯ ಒಡಂಬಡಿಕೆಯಂತೆ 1951ರಲ್ಲಿ ಜಮ್ಮು–ಕಾಶ್ಮೀರ ಸಂವಿಧಾನ ಸಭೆಗೆ ಚುನಾವಣೆ ನಡೆಯಿತು. ಎಲ್ಲ 75 ಸೀಟುಗಳನ್ನು ನ್ಯಾಶನಲ್ ಕಾನ್ಫರೆನ್ಸ್ ಗೆದ್ದುಕೊಂಡಿತು. 1952ರಲ್ಲಿ ಈ ಸಂವಿಧಾನ ಸಭೆಯ ಮುಖ್ಯ ನಿರ್ಣಯಗಳನ್ನು ಅನುಮೋದಿಸಿ ಭಾರತ ಸರಕಾರದ ಪ್ರತಿನಿಧಿಗಳು ಮತ್ತು ಕಾಶ್ಮೀರ ಸರಕಾರದ ಪ್ರತಿನಿಧಿಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದನ್ನು ದಿಲ್ಲಿ ಒಪ್ಪಂದ ಎನ್ನಲಾಗುತ್ತದೆ. 1956ರಲ್ಲಿ ಈ ಸಂವಿಧಾನ ಸಭೆ ಜಮ್ಮು ಮತ್ತು ಕಾಶ್ಮೀರದ ಸಂವಿಧಾನವನ್ನು ಅಂಗೀಕರಿಸಿತು. ಜಮ್ಮು ಮತ್ತು ಕಾಶ್ಮೀರ ಭಾರತದ ಭಾಗ ಎಂದು ಅದು ನಿರೂಪಿಸಿತು. ಮೇಲೆ ಹೇಳಿದಂತೆ 1957ರಲ್ಲಿ ಈ ಸಂವಿಧಾನ ಸಭೆ ವಿಸರ್ಜನೆಗೊಂಡಿತು.

ಈ ನಡುವೆ ಶೇಖ್ ಅಬ್ದುಲ್ಲ ನೇತೃತ್ವದಲ್ಲಿ ರಾಜ್ಯದಲ್ಲಿ ವ್ಯಾಪಕ ಭೂಸುಧಾರಣೆಗಳನ್ನು ತರಲಾಯಿತು. ರಾಜಪ್ರಭುತ್ವವನ್ನು ಕೊನೆಗೊಳಿಸಲಾಯಿತು. ಇದರ ವಿರುದ್ಧ ಮತ್ತು ಕಲಮು 370ನ್ನು ರದ್ದುಗೊಳಿಸಬೇಕೆಂದು ಪ್ರಜಾಪರಿಷದ್ ನೇತೃತ್ವದಲ್ಲಿ ಜಮ್ಮು ವಿಭಾಗದಲ್ಲಿ ಚಳುವಳಿ ಆರಂಭವಾಯಿತು. ಇದಕ್ಕೆ ನೇತೃತ್ವ ನೀಡಿದವರು ನಂತರ ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಭಾರತೀಯ ಜನಸಂಘವನ್ನು ಸ್ಥಾಪಿಸಿದ ಶ್ಯಾಮಪ್ರಸಾದ್ ಮುಖರ್ಜಿಯವರು.. ಭಾರತದೊಡನೆ ಸೇರ್ಪಡೆ (ವಿಲೀನ ಅಲ್ಲ)ಯ ಒಪ್ಪಂದವಾದಾಗ ಇವರು ಆ ಒಪ್ಪಂದವನ್ನು ಮಾಡಿಕೊಂಡ ಸರಕಾರದ (ನೆಹರೂ ಸಂಪುಟದಲ್ಲಿ ಮಂತ್ರಿಯಾಗಿ)ಭಾಗವಾಗಿದ್ದರು ಎಂಬುದು ಇಲ್ಲಿ ಗಮನಾರ್ಹ.

ಇತ್ತ ನೆಹರೂ ಸರಕಾರಕ್ಕೂ ಕಾಶ್ಮೀರದಲ್ಲಿ ವ್ಯಾಪಕ ಜನಪ್ರಿಯತೆ ಗಳಿಸಿದ್ದ, ಅದು ಭಾರತಕ್ಕೆ ಸೇರ್ಪಡೆಯಾಗಲು ಕಾರಣೀ ಭೂತರಾಗಿದ್ದ ಶೇಖ್ ಅಬ್ದುಲ್ಲಾ ಪಿತೂರಿ ಮಾಡುತ್ತಿದ್ದಾರೆ ಎಂದನಿಸಿತು. ಭಾರತ ಸರಕಾರವೂ ಒಪ್ಪಿದ್ದ ಜಮ್ಮು ಮತ್ತು ಕಾಶ್ಮೀರದ ಸಂವಿಧಾನದ ಪ್ರಕಾರ ಜಮ್ಮು ಮತ್ತು ಕಾಶ್ಮೀರದ 'ಸದರ್–ಎ–ರಿಯಾಸತ್'(ಪ್ರಧಾನ ಮಂತ್ರಿ) ಯಾಗಿದ್ದ ಅವರನ್ನು 1953ರಲ್ಲಿ ವಜಾ ಮಾಡಿ ಬಂಧಿಸಲಾಯಿತು. 1952ರ ದಿಲ್ಲಿ ಒಪ್ಪಂದದಲ್ಲಿ ರಾಜ್ಯ ಸರಕಾರವನ್ನು ವಜಾಮಾಡುವ ಕಲಮು 356 ಮತ್ತು ಹಣಕಾಸು ತುರ್ತು ಪರಿಸ್ಥಿತಿ ಹೇರುವ ಕಲಮು 360ನ್ನು ಈ ರಾಜ್ಯದಲ್ಲಿ ಅನ್ವಯ ಮಾಡುವ ಅಗತ್ಯವಿಲ್ಲ ಎಂದು ಒಪ್ಪಿಕೊಂಡಿದ್ದರೂ ಈ ಕ್ರಮ ಕೈಗೊಳ್ಳಲಾಯಿತು. 1954ರಲ್ಲಿ ರಾಜ್ಯಸರಕಾರದ "ಒಪ್ಪಿಗೆ"ಯೊಂದಿಗೆ ಕಲಮು 370ರ ಅಡಿಯಲ್ಲಿ ಕೇಂದ್ರ ಸರಕಾರ ಆದೇಶಗಳನ್ನು ಹೊರಡಿಸಬಹುದು ಎಂಬ ಹೊಸದೊಂದು ರಾಷ್ಟ್ರಪತಿ ಆದೇಶವನ್ನು ಹೊರಡಿಸಲಾಯಿತು. ಅಲ್ಲಿಂದಲೇ ಕಲಮು 370ರ ಅಡಿಯಲ್ಲಿ ಭಾರತದ ಗಣರಾಜ್ಯ ಕಾಶ್ಮೀರಿ ಜನತೆಗೆ ನೀಡಿದ್ದ ಗಂಬೀರ ವಚನಗಳನ್ನು ಉಪೇಕ್ಷಿಸುವ ಪ್ರಕ್ರಿಯೆ ಆರಂಭವಾಯಿತು, ಕಲಮು 370ನ್ನೇ ಬಳಸಿ ಅದನ್ನೇ ನಿಷ್ಕ್ರಿಯಗೊಳಿಸುವ ಕೆಲಸ ಆರಂಭವಾಯಿತು ಎಂದು ಸಂವಿಧಾನ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಶೇಖ್ ಅಬ್ದುಲ್ಲಾ ವಜಾ ನಂತರ ಕೇಂದ್ರ ಸರಕಾರ ಶ್ರೀನಗರದಲ್ಲಿ ತನ್ನ ಕೈಗೊಂಬೆ ಸರಕಾರಗಳನ್ನು ಪ್ರತಿಷ್ಠಾಪಿಸಲಾರಂಭಿಸಿತು.. ನ್ಯಾಶನಲ್ ಕಾನ್ಫರೆನ್ಸ್ ಪಕ್ಷವನ್ನು ನಿರ್ನಾಮ ಮಾಡುವ ಪ್ರಯತ್ನ ನಡೆಸಿತು. ಒಟ್ಟು ಪರಿಣಾಮವೆಂದರೆ ಜಮ್ಮು ಮತ್ತು ಕಾಶ್ಮೀರದ ಜನತೆಗೆ ಕಲಮು 370ರ ಅಡಿಯಲ್ಲಿ ನೀಡಲಾಗಿದ್ದ ಸ್ವಾಯತ್ತತೆ ಕ್ರಮೇಣ ನಾಮಮಾತ್ರಕ್ಕೆ ಇಳಿಯಿತು.

ಈಗ ಜಮ್ಮು ಮತ್ತು ಕಾಶ್ಮೀರದ ಕಾನೂನಾತ್ಮಕ ಸ್ಥಾನಮಾನ ದೇಶದ ಇತರ ರಾಜ್ಯಗಳಿಗಿಂತ ಕೇವಲ ಮೂರು ರಂಗಗಳಲ್ಲಿ ಭಿನ್ನವಾಗಿದೆ. ಒಂದು, 'ಶಾಶ್ವತ ನಿವಾಸಿ'ಗಳ ಹಕ್ಕುಗಳಿಗೆ ಸಂಬಂಧಪಟ್ಟ ಅಂಶಗಳು. ಉದಾಹರಣೆಗೆ, ಬೇರೆ ರಾಜ್ಯಗಳ ಮಂದಿ ಇಲ್ಲಿ ಆಸ್ತಿ ಹೊಂದುವಂತಿಲ್ಲ. ಎರಡು, "ಆಂತರಿಕ ಗಲಭೆ"ಗಳಿಂದಾಗಿ ತುರ್ತು ಪರಿಸ್ಥಿತಿಯನ್ನು ರಾಜ್ಯ ಸರಕಾರದ ಒಪ್ಪಿಗೆಯಿಲ್ಲದೆ ಘೋಷಿಸುವಂತಿಲ್ಲ. ಮತ್ತು ಮೂರು, ಈ ರಾಜ್ಯದ ಹೆಸರು ಮತ್ತು ಗಡಿಗಳನ್ನು ರಾಜ್ಯ ಶಾಸಕಾಂಗದ ಒಪ್ಪಿಗೆಯಿಲ್ಲದೆ ಬದಲಿಸುವಂತಿಲ್ಲ.

ಕಲಮು 370ನ್ನು ವಿರೋಧಿಸುವವರು ಮುಖ್ಯವಾಗಿ ಇವುಗಳಲ್ಲಿ ಮೊದಲನೆಯ ಕಾರಣವನ್ನೇ ಮುಂದು ಮಾಡುತ್ತಿದ್ದಾರೆ. ಕಾಶ್ಮೀರದಲ್ಲಿ ದೇಶದ ಬೇರೆ ರಾಜ್ಯಗಳ ನಿವಾಸಿಗಳು ಆಸ್ತಿ ಹೊಂದುವಂತಿಲ್ಲ ಎಂಬುದು ನ್ಯಾಯ ಸಮ್ಮತವಲ್ಲ, ಇದು ಈ ರಾಜ್ಯ ದೇಶದ ಮುಖ್ಯಧಾರೆಯೊಂದಿಗೆ ಸೇರಿಕೊಳ್ಳುವಲ್ಲಿ ಅಡ್ಡಿಯಾಗಿದೆ ಎಂಬುದು ಅವರ ವಾದ. ಆದ–ರೆ ಇಂತಹ ನಿಷೇಧ ಇರುವುದು ಕಾಶ್ಮೀರದಲ್ಲಿ ಮಾತ್ರವೇ ಅಲ್ಲ, ಶಿಮ್ಲಾದಲ್ಲೂ ಈ ನಿಷೇಧ ಇದೆ, ಸಂವಿಧಾನದ ಆರನೇ ಶೆಡ್ಯೂಲ್ ಅಡಿಯಲ್ಲಿ ಈಶಾನ್ಯ ಭಾರತದ ರಾಜ್ಯಗಳ ಬುಡಕಟ್ಟು ಪ್ರದೇಶಗಳಲ್ಲೂ ಈ ನಿಷೇಧ ಇದೆ. ಈ ಪ್ರದೇಶಗಳ ಚಾರಿತ್ರಿಕ ಭಿನ್ನತೆಗಳ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಸಂಗತಿಯಿದು. ಮೇಲೆ ಹೇಳಿದ ಕಲಮು 371ರ ಅಡಿಯಲ್ಲೂ ಸಂಬಂಧಪಟ್ಟ ರಾಜ್ಯಗಳಲ್ಲಿ ಹಲವೆಡೆ ಇಂತಹ ಪ್ರತಿಬಂಧಗಳು ಇವೆ.

(ಕಲಮು 370 ರಿಂದಾಗಿಯೇ ಕಾಶ್ಮೀರ ಕಣಿವೆಯಲ್ಲಿ ಪ್ರತ್ಯೇಕತಾವಾದ, ಭಯೋತ್ಪಾದನೆ ಬೆಳೆಯಿತೇ, ಸಂಘ ಪರಿವಾರ ಕಲಮು 370ನ್ನು ಏಕೆ ವಿರೋಧಿಸುತ್ತಿದೆ, ಈ ಲೇಖನದ ಮುಂದಿನ ಭಾಗದಲ್ಲಿ ನೋಡೋಣ.) ●



ಕಳಪೆ ಬಿತ್ತನೆ ಬೀಜ ಮಾರಾಟ : ಪ್ರತಿಭಟನೆ

ರೈತರಿಗೆ ಕಳಪೆ ಗುಣಮಟ್ಟದ ಸೂರ್ಯ ಕಾಂತಿ ಬೀಜ ಮಾರಾಟ ಮಾಡಿದ ಸಿಂಜೆಂಟಾ ಕಂಪನಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಹಾಗೂ ಪರಿಹಾರ ನೀಡಬೇಕೆಂದು ಒತ್ತಾಯಿಸಿ, ರಾಯಚೂರು ಜಿಲ್ಲೆಯ ಜಾಲಹಳ್ಳಿ ಪಟ್ಟಣದ ಕೃಷಿ ಕೇಂದ್ರದ ಮುಂದೆ ಅಕ್ಟೋಬರ್ 05ರಂದು ಧರಣಿ ನಡೆಸಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘಟನೆ ಹಾಗೂ ವಾಲ್ಮೀಕಿ ಸಂಘದ ನೇತೃತ್ವದಲ್ಲಿ ಧರಣಿ ನಡೆಯಿತು.

ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಮುಖಂಡ ನರಸಣ್ಣ ನಾಯಕ ಮಾತನಾಡಿ "ಕಳೆದ 4 ತಿಂಗಳ ಹಿಂದೆ ಸಿಂಜೆಂಟಾ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಸೇರಿದ ಹೈಬ್ರೀಡ್ ಸೂರ್ಯಕಾಂತಿ ಎಸ್.ಬಿ. 207 ಬೀಜವನ್ನು ರೈತರು ಬಿತ್ತನೆ ಮಾಡಿದ್ದಾರೆ. ಬೆಳೆ ಹೂ ಆಗಿದ್ದು, ಕಾಳು ಕಟ್ಟಿಲ್ಲ. ಸಮಸ್ಯೆ ಬಗ್ಗೆ ನೂರಾರು ರೈತರು ಕೃಷಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ" ಎಂದು ಆರೋಪಿಸಿದರು.

ಸ್ಥಳಕ್ಕೆ ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕ ಕಿರಣ ಕುಮಾರ ಭೇಟಿ ನೀಡಿ, ಕೃಷಿ ಇಲಾಖೆ ವಿಜ್ಞಾನಿಗಳಿಂದ ಪರೀಕ್ಷೆ ನಡೆಸಿ ವರದಿ ನಂತರ ಕಾನೂನು ಕ್ರಮಕೈಗೊಳ್ಳಲಾಗುವುದು. ಬೀಜ ಮಾರಾಟ ಮಾಡಿದ ಖಾಸಗಿ ಕೃಷಿ ಕೇಂದ್ರಗಳಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಲಿಖಿತ ಭರವಸೆ ನೀಡಿದರು.

ತಹಶೀಲ್ದಾರ್ ಶಿವಶರಣಪ್ಪ ಕಟ್ಟೋಳಿ, ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕ ಅಶೋಕ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಮುಜಬುಲ್ ರೈಮಾನ್ ಸಾಬ್ ಸ್ಥಳಕ್ಕೆ ಭೇಟಿ ನೀಡಿದ್ದರು.

ಮುಖಂಡರಾದ ಬಸವರಾಜ ನಾಯಕ ವಂದಲಿ, ಗುರುನಾಯಕ, ಮುದರಂಗಪ್ಪ ಅಂಗಡಿ, ಶಬ್ಬೀರ್ ಅಹ್ಮದ್, ತಿಮ್ಮಣ್ಣ ನಾಯಕ ದಿವಾಣ, ದುರಗಪ್ಪ ರಂಪಾಳ್ಳಿ, ಹನುಮಂತ ಬಡಿಗೇರ್, ರಂಗಣ್ಣ ಕೋಲ್ಕಾರ್, ಭೀಮಣ್ಣ ನಾಯಕ ಗುಮೇದಾರ, ಮೌನೇಶ ದಾಸರ್, ಲಿಂಗಣ್ಣ ಮಕಾಶಿ, ಅಮರೇಶ, ಮಲ್ಲಪ್ಪ ಉಪಸ್ಥಿತರಿದ್ದರು.

ಸಿಂಜೆಂಟಾ ಕಂಪನಿ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ಮರು ದಿನ ಅಕ್ಟೋಬರ್ 06 ರಂದು ಸಹ ಪ್ರತಿಭಟನೆ ನಡೆಸಲಾಗಿದೆ.

ವರ್ತಮಾನದ ಜತೆ ಡಾ. ಅಂಬೇಡ್ಕರ್ ಮರು ಓದು

ಪುಟ 16 ರಿಂದ

ಇದೇ ಕಾರ್ಯಕ್ರಮದ ಭಾಗವಾಗಿ ಸಮುದಾಯ ಕುಂದಾಪುರ ತಂಡವು ವಾಸು ಗಂಗೇರ ನಿರ್ದೇಶನದಲ್ಲಿ ಪ್ರಸ್ತುತ ಪಡಿಸಿದ 'ಮಹಾತ್ಮ' ಮತ್ತು ರಂಗಸುರಭಿ ಬೈಂದೂರು ತಂಡವು ಗಣೇಶ್.ಎಂ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದ ವೇಟಿಂಗ ಫಾರ್ ದ ವೀಸಾ ನಾಟಕಗಳನ್ನು ಪ್ರದರ್ಶಿಸಲಾಯಿತು. ಸಮುದಾಯದ ಕಾರ್ಯದರ್ಶಿ ಸದಾನಂದ ಬೈಂದೂರು ಕಾರ್ಯಕ್ರಮ ನಿರೂಪಿಸಿದರು.

ಮಕ್ಕಳೇ ಅಭಿನಯಿಸಿದ ಮಹಾತ್ಮ ಅತ್ಯಂತ ಕಡಿಮೆ ತಾಲೀಮಿನಲ್ಲಿ ಸಿದ್ಧಪಡಿಸಿದ್ದು, ಮಕ್ಕಳ ಲವಲವಿಕೆ ಪ್ರೇಕ್ಷಕರಿಗೆ ಇಷ್ಟವಾಯ್ತು. ಗಾಂಧೀಜಿಯವರ ಬದುಕಿನ ಕೆಲವು ಪುಟಗಳನ್ನು ನಮ್ಮೆದುರು ಮನೋಜ್ಞವಾಗಿ ತೆರೆದಿಟ್ಟಿತು. ರಂಗಸುರಭಿಯ ಪ್ರಸ್ತುತಿ ಅಚ್ಚುಕಟ್ಟುತನದಿಂದ ಗಮನಸೆಳೆಯಿತು.

ಡಾ.ಶ್ರೀಪಾದ್ ಭಟ್ ಅವರ ವಿನ್ಯಾಸದಲ್ಲಿ ರಂಗಸುರಭಿ ಬೈಂದೂರು ಪ್ರಸ್ತುತಪಡಿಸಿದ "ವೇಟಿಂಗ್ ಪಾರ್ ದ ವೀಸಾ" ನಾಟಕ ಅಂಬೇಡ್ಕರ್ ದಲಿತರಾಗಿದ್ದ ಕಾರಣಕ್ಕಾಗಿ ಅನುಭವಿಸಿದ ಅವಮಾನಕರ ಸಂಗತಿಯೊಂದನ್ನು ಅದ್ಭುತ ಅಭಿನಯದ ಮೂಲಕ ಅನಾವರಣಗೊಳಿಸಿತು.

ಅಕ್ಟೋಬರ್ 04ರಂದು ದಾವಣಗೆರೆಯಲ್ಲಿ ಸಮುದಾಯ ಕರ್ನಾಟಕ ಎ.ವಿ.ಕೆ. ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ ಅಂಬೇಡ್ಕರ್ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಸಮುದಾಯ ರಾಜ್ಯ ಸಹಕಾರ್ಯದರ್ಶಿ ಕೆ.ಎಸ್.ವಿಮಲ ರವರು ನೆರವೇರಿಸಿದರು. "ಪ್ರಸ್ತುತ ಭಾರತದ ಪ್ರಜಾಸತ್ತೆ ಎದುರಿಸುತ್ತಿರುವ ಸವಾಲುಗಳು ಮತ್ತು ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ" ಎಂಬ ವಿಷಯದ ಬಗ್ಗೆ ಕುವೆಂಪು ವಿಶ್ವವಿದ್ಯಾಲಯದ ಆಂಗ್ಲ ಪ್ರಾಧ್ಯಾಪಕರಾದ ಡಾ.ರಾಜೇಂದ್ರ ಚೆನ್ನಿರವರು ಉಪನ್ಯಾಸ ನೀಡಿದರು. "ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಮಾನತೆ ಅಡಿಯಲ್ಲಿ ಡಾ. ಅಂಬೇಡ್ಕರ್ ಪ್ರಜಾಪ್ರಭುತ್ವದ ಪರಿಕಲ್ಪನೆ ಕಟ್ಟಿಕೊಟ್ಟರು. ಆದರೆ ಇಂದಿಗೂ ಬಹತೇಕರು ಆರ್ಥಿಕ ಸಾಮಾಜಿಕ ಸಮಾನತೆಯಿಂದ ವಂಚಿತರಾಗಿದ್ದಾರೆ. ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಧಾರ್ಮಿಕತೆ ಹಾಗೂ ಒಕ್ಕೂಟ ವ್ಯವಸ್ಥೆ ಸೇರಿದಂತೆ ಅಂತರರಾಜ್ಯ ನೀರಿನ ವಿವಾದಗಳಂತಹ ನೂರಾರು ವಿಷಯಗಳನ್ನು ಒಳಗೊಂಡ 15 ಸಾವಿರ ಪುಟಗಳಷ್ಟು ಅವರು ಬರೆದಿದ್ದಾರೆ.." ಎಂದು ಡಾ. ಚೆನ್ನಿ ಅವರು ಹೇಳಿದರು.

ವಿದ್ಯಾರ್ಥಿಗಳ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪಿ.ಎಸ್.ಶಿವಪ್ರಕಾಶ್ ವಹಿಸಿದ್ದರು. ಆಂಗ್ಲ ವಿಭಾಗದ ಮುಖ್ಯಸ್ಥರಾದ ಡಾ॥ಅನುರಾಧ ಪಿ.ಎಂ.ರವರು ಉಪಸ್ಥಿತರಿದ್ದರು. ●

"ದಲಿತರಿಗೆ ಭೂಮಿ ನೀಡಬೇಕು, ಪ್ರತಿಯೊಬ್ಬರ ಆಹಾರ ಹಕ್ಕನ್ನು ರಕ್ಷಿಸಬೇಕು" ಎಂದು ಆಗ್ರಹಿಸಿ ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ ನೇತೃತ್ವದಲ್ಲಿ ಅಕ್ಟೋಬರ್ 04 ರಿಂದ 09ರವರೆಗೆ ಬೆಂಗಳೂರಿನಿಂದ ಉಡುಪಿವರೆಗೆ 'ಚಲೋ ಉಡುಪಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಕ್ಟೋಬರ್ 4ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬಿಬಿಎಂಪಿಯ ಗುತ್ತಿಗೆ ಪೌರ ಕಾರ್ಮಿಕರಾದ ಅಂಜನಮ್ಮನವರು ಪಂಜು ಬೆಳಗಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.


ತಮಟೆ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಮಾತನಾಡಿ "ಕೇಂದ್ರದಲ್ಲಿ ಕೇಸರಿ ಪಕ್ಷ ಆಡಳಿತದ ಚುಕ್ಕಾಣಿ ಹಿಡಿದ ಬಳಿಕ ದಲಿತರ ಹಾಗೂ ಆದಿವಾಸಿಗಳ ಮೇಲಿನ ದೌರ್ಜನ್ಯ ದುಪ್ಪಟ್ಟಾಗಿದೆ. ಹಲ್ಲೆಕೋರರನ್ನು ಕಾನೂನು ಪ್ರಕಾರ ಶಿಕ್ಷೆಗೆ ಒಳಪಡಿಸುವುದು ಕಡಿಮೆ ಆಗಿದೆ. ಈ ಪಕ್ಷದ ಆಡಳಿತ ಇರುವ ರಾಜ್ಯಗಳಲ್ಲಿ, ದಲಿತರ ಮೇಲೆ ಹಲ್ಲೆ ನಡೆಸಿದವರ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲಾಗಿದೆ. ರಾಜಸ್ಥಾನದಲ್ಲಿ ಕೇವಲ ಶೇ. 6ರಷ್ಟು ಇರುವ ದಲಿತರ ಮೇಲೆ ಶೇ. 18ರಷ್ಟು ದೌರ್ಜನ್ಯಗಳು ನಡೆಯುತ್ತಿವೆ. ಇದಕ್ಕೆ ಕಾರಣ ಅಲ್ಲಿರುವ ಕೇಸರಿ ಸರ್ಕಾರ ಎಂದು ಹೇಳಿದರು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಾಹಿತಿ ದೇವನೂರು ಮಹದೇವರವರು "ಇವತ್ತು ಸ್ವಾತಂತ್ರ್ಯ ಕಸಿಯುತ್ತಿದೆ. ಬಡವರು ಬಲ್ಲಿದರು ನಡುವಿನ ಅಸಮಾನತೆ ಹೆಚ್ಚುತ್ತಿದೆ. ಸಂವಿಧಾನದ ಆಶಯಗಳು ಸ್ವಾತಂತ್ರ್ಯ, ಸಮಾತೆ, ಸೋದರತೆ ಮತ್ತು ನ್ಯಾಯ ಇಲ್ಲವಾಗಿದೆ. ದೇಶದ ಮೂಲ ನಿವಾಸಿಗಳ ತಾಳ್ಮೆಯನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಜಾತಿಪದ್ಧತಿ, ಇದರೊಳಗೆ ಅಸಹಿಷ್ಣುತೆ ಎಂಬುದು ಅಡಕವಾಗಿದೆ. ಇದು ಭಯೋತ್ಪಾದನೆ ಉಂಟು ಮಾಡುತ್ತಿದೆ. 1857ರಲ್ಲಿ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ ಜ್ಯೋತಿಬಾ ಫುಲೆರವರಿಗೆ ಆತಂಕ ಉಂಟಾಗಿತ್ತು. ಎಲ್ಲಿ ಬ್ರಿಟೀಷರು ಸೋತು ಪೇಶ್ವೆಗಳು ಗೆದ್ದರೆ ಮತ್ತೆ ಅದೇ ಗುಲಾಮಗಿರಿ ಅಸಮಾನತೆಯ ಸಮಾಜ ಪುನರ್ ಸ್ಥಾಪಿತವಾಗುತ್ತದೆ ಎಂಭ ಭಯ ಕಾಡುತ್ತಿತ್ತು. ಹೌದು. ಈ ದೇಶ ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಟಬೇಕಿದೆ ಎಂದರು.

ಮುಂದುವರೆದು ಮಾತನಾಡಿದ ಅವರು ಇವತ್ತು ಈ ಪರಿಸ್ಥಿತಿ ಇರುವುದರಿಂದಲೇ ನಾವು ಆಹಾರ ನಮ್ಮ ಹಕ್ಕು ಅಂತ ಕೇಳಬೇಕಾದ ಪರಿಸ್ಥಿತಿಯನ್ನು ಹುಟ್ಟು ಹಾಕಿದ್ದಾರೆ. ಗೋರಕ್ಷಣೆ ಮಾಡುವವರು ಭಯೋತ್ಪಾದನೆ ಮಾಡುತ್ತಿದ್ದಾರೆ. ಆ ಮೂಲಕ ಗೋ ಭಯೋತ್ಪಾದನೆ ಎಂಬುದು ಪ್ರಪಂಚಕ್ಕೆ ಭಾರತದ ಕೊಡುಗೆಯಾಗಿರುವುದು ದುರಂತ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಎ.ಕೆ.ಸುಬ್ಬಯ್ಯ, ಬೈಲೂರು ಮಠದ ನಿಜಗುಣಾನಂದ ಸ್ವಾಮೀಜಿ ಸೇರಿದಂತೆ ಇನ್ನಿತರ ಮುಖಂಡರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಜಿ.ರಾಮಕೃಷ್ಣ,



ಎಸ್.ಜಿ.ಸಿದ್ಧರಾಮಯ್ಯ, ರಹಮತ್ ತರೀಕೆರೆ, ಮುಖಂಡರಾದ ಜಿ.ಎನ್. ನಾಗರಾಜ್, ಮಾವಳ್ಳಿ ಶಂಕರ್, ಲಕ್ಷ್ಮೀನಾರಾಯಣ ನಾಗವಾರ, ಇಂದೂಧರ ಹೊನ್ನಾಪುರ, ಸರ್ದಾರ್ ಅಹ್ಮದ್ ಖುರೇಷಿ, ಗೌರು ಲಂಕೇಶ್, ಬಿ.ಗೋಪಾಲ್, ಸಿ.ಎಸ್.ದ್ವಾರಕನಾಥ್, ಸಿದ್ಧನಗೌಡ ಪಾಟೀಲ್, ಪಿ.ವಿ.ಲೋಕೇಶ್, ದಿನೇಶ್ ಅಮೀನ್ ಮಟ್ಟು, ನೂರ್ ಶ್ರೀಧರ್, ಬಾಬು ಮ್ಯಾಥ್ಯೂ, ಅಂಬ್ರೋಸ್ ಪಿಂಟೋ, ಅಗ್ನಿ ಶ್ರೀಧರ್, ಅನಂತ ನಾಯಕ್, ಗೌರಮ್ಮ, ರಾಜಶೇಖರ ಮೂರ್ತಿ ಮತ್ತಿತರ ಸಂಘಸಂಸ್ಥೆಗಳು, ಪ್ರಗತಿಪರರು ಅಪಾರ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇಂದಿರಾ ಕೃಷ್ಣಪ್ಪರವರು ವಹಿಸಿದ್ದರು.

ಬೆಂಗಳೂರು ಸಮುದಾಯ ತಂಡ 'ಫ್ರಿಡ್ಜ್ ನಲ್ಲಿ ಏನೀದೆ?' ಎಂಬ ಬೀದಿ ನಾಟಕ ಪ್ರದರ್ಶನ ನೀಡಿತು.

ದಲಿತರ ಮೇಲಿನ ದೌರ್ಜನ್ಯ ಗೋಸಂರಕ್ಷಣೆ ಹೆಸರಿನಲ್ಲಿ ನಡೆಯುತ್ತಿರುವ ಕ್ರೌರ್ಯ ಹಾಗೂ ಆಹಾರದ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನಗಳ ಕರಾಳ ಮುಖಗಳನ್ನು ಅನಾವರಣಗೊಳಿಸುವ ಚಿತ್ರಕಲೆ, ಬೀದಿ ನಾಟಕ, ಜಂಬೆ ವಾದನ, ನಗಾರಿ ಬಡಿತ, ಹಾಡು, ಕುಣಿತಗಳ ಮೂಲಕ ಉತ್ಸಾಹ ತುಂಬಿಕೊಂಡ ಹೋರಾಟಗಾರರು ಉಡುಪಿಯತ್ತ ಪ್ರಯಾಣ ಬೆಳೆಸಿದರು.

ಅಕ್ಟೋಬರ್ 4ರಂದು ಸಂಜೆ ಜಾಥಾ ನೆಲಮಂಗಲ ಮುಟ್ಟಿತು. ಅಕ್ಟೋಬರ್ 5ರಂದು ತುಮಕೂರು ಜಿಲ್ಲೆ ಕುಣಿಗಲ್‌ನಲ್ಲಿ ನೀಲಿ–ಕೆಂಪು ಬಾವುಟಗಳು ಜಾಥಾವನ್ನು ನಗರದ ಪ್ರವಾಸಿ ಮಂದಿರದ ಬಳಿ ಸ್ವಾಗತಿಸಿದರು. ಸ್ಥಳೀಯ ಕಲಾತಂಡಗಳ ಜೊತೆ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಕುಣಿಗಲ್‌ನ ಬಿ.ಎಂ.ರಸ್ತೆಯಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಿದ್ಧಗಂಗಾ ಕಬೀರನಂದ ಸ್ವಾಮೀಜಿ, ಡಾ.ಕೆ.ಷರೀಫ, ಕೆ.ದೊರೈರಾಜ್, ಸೈಯದ್ ಮುಜೀಬ್, ಮತ್ತಿತರರು ಭಾಗವಹಿಸಿದ್ದರು.

ನಂತರ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದತ್ತ ಜಾಥಾ ಪ್ರಯಾಣ ಬೆಳೆಸಿತು. ಅಲ್ಲಿ ಅದ್ದೂರಿಯಾಗಿ ಸ್ವಾಗತ ನೀಡಿದರು. ಮುಖಂಡರಾದ ಬಿ.ಆರ್.ಭಾಸ್ಕರ್ ಪ್ರಸಾದ್, ಆರ್.ಪಿ.ಐ. ಸತೀಶ್, ಎನ್.ವೆಂಕಟೇಶ್ ಮತ್ತಿತರರು ಮಾತನಾಡಿದರು.

ಹೊಳೆನರಸೀಪುರಕ್ಕೆ ಜಾಥಾ ಆಗಮಿಸಿದಾಗ ಅಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು

ಅಕ್ಟೋಬರ್ 6ರಂದು ಹಾಸನ ನಗರಕ್ಕೆ ಆಗಮಿಸಿದ ಜಾಥಾಕ್ಕೆ ದಲಿತ ಹಕ್ಕುಗಳ ಸಮಿತಿ, ಎಸ್.ಎಫ್.ಐ., ಡಿವೈಎಫ್ಐ, ಸಿಐಟಿಯು ಮತ್ತು ಇನ್ನಿತರೆ ಸಂಘಟನೆಗಳಿಂದ ಸ್ವಾಗತ ನೀಡಲಾಯಿತು. ನಂತರ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಸಾಹಿತಿಗಳಾದ ಬಾನು ಮುಸ್ತಾಕ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಬಸವ ನಾಗಿದೇವ ಸ್ವಾಮಿ, ಭಾಸ್ಕರ್ ಪ್ರಸಾದ್, ಮಲ್ಲಪ್ಪ, ಸಂದೇಶ್ ಪೃಥ್ವಿ ಮಾತನಾಡಿದರು.

ದಾವಣಗೆರೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಮುಖಂಡರಾದ ಕೆ.ಎಲ್.ಭಟ್ ಮಾತನಾಡಿದರು.

















ಕಪ್ಪುಹಣ ಘೋಷಣೆ: ಪ್ರತಿಯೊಬ್ಬ ಭಾರತೀಯನ ಖಾತೆಗೆ 15ಲಕ್ಷ ರೂ. ಬದಲು ಸದ್ಯಕ್ಕೆ 60ಸಾವಿರ ರೂ. ಮಾತ್ರ!

ಮೋದಿ ಸರಕಾರ ಕಪ್ಪು ಹಣವನ್ನು ಹೊರತೆಗೆಯುವ ತನ್ನ ಚುನಾವಣಾ ಭರವಸೆಯನ್ನು ಜಾರಿಗೆ ತರುವ ಹೆಸರಲ್ಲಿ ತಂದ ಆದಾಯ ಘೋಷಣೆಯ 'ಕ್ಷಮಾದಾನ' ಸ್ಕೀಮ್ ಸಪ್ಟಂಬರ್ 30 ರಂದು ಕೊನೆಗೊಂಡಿದ್ದು ಇದರಲ್ಲಿ 64275 ಮಂದಿ ಘೋಷಿಸಿರುವ ಕಪ್ಪು ಹಣದ ಪ್ರಮಾಣ ರೂ.65250 ಕೋಟಿ ರೂ. ಎಂದು ಹಣಕಾಸು ಮಂತ್ರಿಗಳು ಪ್ರಕಟಿಸಿದ್ದಾರೆ. ಇದೊಂದು ದೊಡ್ಡ ಯಶಸ್ಸು ಎಂದಿದ್ದಾರೆ. ಈ ಸ್ಕೀಮಿನಲ್ಲಿ ಕಪ್ಪು ಹಣ ಘೋಷಿಸಿದವರ ಮೇಲೆ ಕಾನೂನು ಕ್ರಮ ಇರುವುದಿಲ್ಲ, ಅವರು ಘೋಷಿಸಿದ ಹಣದಲ್ಲಿ 45ಶೇ. ತೆರಿಗೆ ಎರಡು ಕಂತುಗಳಲ್ಲಿ ಕೊಟ್ಟರೆ ಸಾಕು, ಉಳಿದದ್ದನ್ನು ಅವರೇ ಈಗ ರಾಜಾರೋಷವಾಗಿ ಅನುಭವಿಸಬಹುದು. ಇದರಿಂದ ಸರಕಾರಕ್ಕೆ ತೆರಿಗೆ ರೂಪದಲ್ಲಿ 29,000 ಕೋಟಿ ರೂ. ಸಿಗುತ್ತದೆ ಎಂದು ಹಣಕಾಸು ಮಂತ್ರಿಗಳು ಸಂತೋಷದಿಂದ ಹೇಳಿದ್ದಾರೆ.

ಹಣಕಾಸು ಮಂತ್ರಿಗಳಿಗೇನೋ ಸಂತೋಷವಾಗಿದೆ, ಆದರೆ ಈ 'ಒಳ್ಳೆಯ ದಿನ'ಗಳಲ್ಲಿ ಪ್ರತಿಯೊಬ್ಬ ಭಾರತೀಯನ ಖಾತೆಯಲ್ಲಿ 15ಲಕ್ಷ ರೂ. ಸೇರುತ್ತದೆ ಎಂಬ ನಿರೀಕ್ಷೆ ಹಾಗೆಯೇ ಉಳಿದಿದೆ! ಏಕೆಂದರೆ ಒಟ್ಟು ಕಪ್ಪು ಹಣದ ಮೊತ್ತ 16.75ಲಕ್ಷ ಕೋಟಿ ರೂ. ಎಂಬ ಆಳುವ ಪಕ್ಷದ ಅಂದಾಜಿನ ಆಧಾರದಲ್ಲಿ. ಈಗ ಹಣಕಾಸು ಮಂತ್ರಿಗಳು ದೊಡ್ಡ ಯಶಸ್ಸು ಎಂದು ಹೇಳಿರುವ ಸ್ಕೀಮ್ ಹೊರತೆಗೆದದ್ದು ಕೇವಲ 4% ಕಪ್ಪು ಹಣವನ್ನು. ಅಂದರೆ 'ಒಳ್ಳೆಯ ದಿನ'ಗಳ ಭರವಸೆಯ ಪ್ರಕಾರ ಸದ್ಯಕ್ಕೆ ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಗೆ 60 ಸಾವಿ ರೂ. ಜಮಾ ಆಗಬಹುದಷ್ಟೇ. ಆದರೆ ಈ ತೆರಿಗೆ ಹಣವನ್ನು ಗ್ರಾಮೀಣ ಪ್ರದೇಶಗಳ ಮತ್ತು ಮೂಲರಚನೆಯ ಅಭಿವೃದ್ಧಿಗೆ ಮಾತ್ರ ಬಳಸಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿ ಬಿಟ್ಟಿದ್ದಾರೆ. ಆದ್ದರಿಂದ ಅದರ ನಿರೀಕ್ಷೆಯೂ ಬೇಡ!

ಹಣಕಾಸು ಮಂತ್ರಿಗಳ ಯಶಸ್ಸಿನ ಪ್ರಕಟಣೆಯ ನಂತರ ಮತ್ತೊಂದು ಸುದ್ದಿ ಬಂದಿದೆ. ಇದು ಸ್ವಯಮಿಚ್ಛೆಯಿಂದ ಆದಾಯ ಘೋಷಣೆ ಮಾಡುವ ಸ್ಕೀಮ್ ಎನ್ನಲಾಗಿತ್ತು. ಆದರೆ ಸ್ವಯಮಿಚ್ಛೆಯಿಂದ ಘೋಷಣೆಯಾದದ್ದು ಕೇವಲ 15ಶೇ. ಎಂದು 'ಬಿಸಿನೆಸ್ ಸ್ಟಾಂಡರ್ಡ್'(ಅ.3) ವರದಿ ಮಾಡಿದೆ.

ಆದಾಯ ತೆರಿಗೆ ಇಲಾಖೆ ದೇಶದ 18 ಆದಾಯ ತೆರಿಗೆ ವಲಯಗಳಲ್ಲಿ ನಡೆಸಿದ 200 ಸರ್ವೆ ಮತ್ತು ಇಲಾಖೆಗೆ ಲಭ್ಯವಿರುವ ಇತರ ಮಾಹಿತಿಗಳಿಂದ ಸುಮಾರು 7ಲಕ್ಷ ತೆರಿಗೆಗಳ್ಳರಿಗೆ ಈ ಸ್ಕೀಮನ್ನು ಸದುಪಯೋಗ' ಪಡಿಸಿಕೊಳ್ಳುವಂತೆ ಪತ್ರಗಳು ಹೋಗಿದ್ದವಂತೆ. ಇವರಲ್ಲಿ ಕೆಲವರು ಮಾತ್ರ ಸ್ಪಂದಿಸಿದ್ದಾರೆ. ಆದರೂ ಈಗ ಆದಾಯ ಘೋಷಿಸಿರುವವರಲ್ಲಿ 85% ಮಂದಿ ಇವರೇ ಎಂದು ಅಂದಾಜು ಮಾಡಲಾಗಿದೆ.

ಸಹಜವಾಗಿ ಏಳುವ ಪ್ರಶ್ನೆ ಸರಕಾರಕ್ಕೆ ಈ 85ಶೇ. ಮಂದಿ ತೆರಿಗೆಗಳ್ಳರ ಬಗ್ಗೆ ಗೊತ್ತಿದ್ದರೆ ಅವರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಂಡು ತೆರಿಗೆ ಹಣವನ್ನು ವಸೂಲಿ ಮಾಡುವ ಬದಲು ಈ 'ಕ್ಷಮಾದಾನ' ಯೋಜನೆ ಏಕೆ?

ಆದಾಯ ತೆರಿಗೆ ಇಲಾಖೆ ಹೀಗೆ ಅಂದಾಜು ಮಾಡಿರುವ ತೆರಿಗೆಗಳ್ಳರಲ್ಲಿ 7ರಿಂದ 8ಶೇ. ಮಂದಿ ಮಾತ್ರವೇ ಈ ಸ್ಕೀಮನ್ನು ಬಳಸಿಕೊಂಡಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯ ಮೂಲಗಳು ಹೇಳಿರುವುದಾಗಿ ಈ ಸುದ್ದಿ ತಿಳಿಸುತ್ತದೆ. ಉಳಿದವರ ವಿರುದ್ಧ ಕ್ರಮ ಹೇಗೆ ಎಂದು ಉಳಿದ 'ಒಳ್ಳೆಯ ದಿನ'ಗಳಲ್ಲಿ ತಿಳಿಯಬಹುದೋ ಗೊತ್ತಿಲ್ಲ.

ಕಪ್ಪುಹಣಕ್ಕೆ 'ಕ್ಷಮಾದಾನ'ದ ನಂತರ ಬಾಕಿ ಸಾಲಗಳಿಗೆ ವಸೂಲಿಯ ಬದಲು 'ಕೆಟ್ಟ ಬ್ಯಾಂಕ್'!

ಈ ನಡುವೆ ಸರಕಾರ ಈ ಕ್ಷಮಾದಾನ'ದ ಇನ್ನೊಂದು ಮಾದರಿಯ ಬಗ್ಗೆ ಯೋಚಿಸುತ್ತಿದೆಯಂತೆ. ಕಾರ್ಪೊರೇಟ್ ಸುಸ್ತಿದಾರರ ಸಾಲಗಳನ್ನು ವಸೂಲಿ ಮಾಡುವ ಬದಲು, ಅವನ್ನೆಲ್ಲ ಒಂದು ಹೊಸ 'ಕೆಟ್ಟ ಸಾಲಗಳ ಬ್ಯಾಂಕ್' ರಚಿಸಿ ಅದಕ್ಕೆ ವರ್ಗಾಯಿಸುವುದು. ಕಾರ್ಪೊರೇಟ್ ಕುಳಗಳಿಗೆ ಸಾಲ ಕೊಟ್ಟ ಬ್ಯಾಂಕುಗಳಲ್ಲಿ ಅವರ 'ಕೆಟ್ಟ ಸಾಲ'ಗಳು ಇರುವುದೇ ಇಲ್ಲ! (ಈ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರ ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರವನ್ನು ಈ ಸಂಚಿಕೆಯ ಪುಟ 2–13ರಲ್ಲಿ ನೋಡಿ)



ವೇದರಾಜ ಎನ್.ಕೆ.

'ಒಳ್ಳೆಯ ದಿನಗಳ ತರ್ಕ: 'ಮೇಕ್ ಇನ್ ಇಂಡಿಯಾ'ಕ್ಕಾಗಿ ಸಣ್ಣ ಉದ್ದಿಮೆಗಳ ಕಾರ್ಮಿಕರಿಗೆ ಭವಿಷ್ಯ ನಿಧಿ ಬೇಡ!

ನೌಕರರ ಭವಿಷ್ಯ ನಿಧಿ ಅನ್ವಯಕ್ಕೆ ಒಂದು ಸಂಸ್ಥೆಯಲ್ಲಿ ಕನಿಷ್ಟ 20 ಮಂದಿ ಕೆಲಸಗಾರರು ಇರಬೇಕೆಂದಿದೆ. ಇದನ್ನು 10ಕ್ಕೆ ಇಳಿಸಬೇಕು ಎಂಬ ಬೇಡಿಕೆ 2012ರಿಂದ ಇದೆ. ತ್ರಿಪಕ್ಷೀಯ ಐಎಲ್‌ಸಿಯ 44ನೇ ಸಮ್ಮೇಳನ ಈ ಬಗ್ಗೆ ಶಿಫಾರಸು ಮಾಡಿತ್ತು. ಭವಿಷ್ಯ ನಿಧಿಯ ಕೇಂದ್ರೀಯ ಟ್ರಸ್ಟಿ ಮಂಡಳಿ ಕೂಡ ಈ ಬಗ್ಗೆ ನಿರ್ಣಯ ಕೈಗೊಂಡಿತ್ತು. ಕೊನೆಗೂ ಅದನ್ನು ಈಡೇರಿಸುವುದಾಗಿ ಈ ಸರಕಾರ ಸಂಸತ್ತಿನಲ್ಲಿ ಭರವಸೆ ನೀಡಿತ್ತು. ಇದರಿಂದ 50 ಲಕ್ಷ ಕಾರ್ಮಿಕರು ಭವಿಷ್ಯ ನಿಧಿಯ ವ್ಯಾಪ್ತಿಯೊಳಕ್ಕೆ ಹೊಸದಾಗಿ ಬರುತ್ತಾರೆ ಎಂದು ಹೇಳಿಕೊಂಡಿತ್ತು. ಆದರೆ ಈಗ ಇದರಲ್ಲೂ ತಿಪ್ಪರಲಾಗ ಹಾಕಿದೆ.

ನಿಯಮಗಳ ಪ್ರಕಾರ ಮಾಕರೂ ಕಾರ್ಮಿಕರಷ್ಟೇ ವಂತಿಗೆ ಈ ನಿಧಿಗೆ ಕೊಡಬೇಕಾಗಿರುವುದರಿಂದ ಇದು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಮೇಲೆ ಹಣಕಾಸು ಹೊರೆ ಹಾಕುತ್ತದೆ ಎಂಬ 'ಕಾಳಜಿ'ಯೇ ಈ ತಿಪ್ಪರಲಾಗಕ್ಕೆ ಕಾರಣ ಎನ್ನಲಾಗಿದೆ. ಇದು ಸರಕಾರದ ಮಹತ್ವಾಕಾಂಕ್ಷೆಯ 'ಮೇಕ್ ಇನ್ ಇಂಡಿಯಾ'ದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಂದು ಅದಕ್ಕೆ ಭಯವಂತೆ.

ಹೆಚ್ಚೆಚ್ಚು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ವಿಸ್ತರಿಸುತ್ತಿದ್ದೇನೆ ಎಂದು ಹೇಳಿಕೊಳ್ಳುವ ಸರಕಾರದ ಸಹಜ ಆಯ್ಕೆ ವಾಸ್ತವವಾಗಿ ಮಾಲಕರ ಹಿತಾಸಕ್ತಿಗಳೇ ಹೊರತು ಕಾರ್ಮಿಕರದ್ದಲ್ಲ ಎಂಬುದನ್ನು ಇದು ಮತ್ತೊಮ್ಮೆ ತೋರಿಸುತ್ತದೆ ಎಂದು ಕೇಂದ್ರೀಯ ಕಾರ್ಮಿಕ ಸಂಗಟನೆ ಸಿಐಟಿಯು ಇದನ್ನು ಖಂಡಿಸಿದೆ, ಸರಕಾರ ಈ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ರಕ್ಷಣಾ ಮಂತ್ರಿಗಳ 'ಸನ್ಮಾನ 'ರದ್ದು!

ಗೋವಾದ ಬಿಜೆಪಿ ಘಟಕ ಅಕ್ಟೋಬರ್ 4ರಂದು ರಕ್ಷಣಾ ಮಂತ್ರಿಗಳಿಗೆ ಎಲ್‌ಒಸಿಯಲ್ಲಿ ಭಯೋತ್ಪಾದಕರ ವಿರುದ್ಧ 'ಯಶಸ್ವಿ ಸರ್ಜಿಕಲ್ ಪ್ರಹಾರ' ನಡೆಸಿದ್ದಕ್ಕಾಗಿ ಸನ್ಮಾನ ಮಾಡುವ ಕಾರ್ಯಕ್ರಮವನ್ನು ಯೋಜಿಸಿತ್ತು. ಪಣಜಿಯ ದಬೋಲಿಮ್ ವಿಮಾನ ನಿಲ್ದಾಣದಿಂದ ಅವರನ್ನು ದೊಡ್ಡ ಮೆರವಣಿಗೆಯಲ್ಲಿ ಕರೆ ತರುವ ಭವ್ಯ ಯೋಜನೆ ಹಾಕಲಾಗಿತ್ತು. ಆದರೆ ಅಕ್ಟೋಬರ್ 3ರಂದು ಅದನ್ನು ರದ್ದು ಮಾಡಲಾಗಿದೆ.

ಅಕ್ಟೋಬರ್ 3ರ ರಾತ್ರಿ ಬಾರಾಮುಲ್ಲದಲ್ಲಿ ಸೇನಾ–ಬಿಎಸ್‌ಎಫ್ ಶಿಬಿರದ ಮೇಲೆ ಉಗ್ರಗಾಮಿಗಳ ದಾಳಿ ನಡೆದು ಒಬ್ಬ ಬಿಎಸ್‌ಎಫ್ ಸಿಬ್ಬಂದಿಯ ಸಾವಾಗಿದ್ದು, ಮತ್ತೊಬ್ಬರು ಗಾಯ ಗೊಂಡಿರುವ ಸುದ್ದಿಯ ಹಿನ್ನೆಲೆಯಲ್ಲಿ ಇದನ್ನು ರದ್ದು ಮಾಡಲಾಗಿದೆ ಎಂದು ಹೇಳಲಾಗಿದೆ.


ಈ ಕಾರ್ಯಕ್ರಮವನ್ನು ಗೋವಾದ ಹಲವು ಪಕ್ಷಗಳು ವಿರೋಧಿಸಿದ್ದವು. ಸ್ವತಃ ಬಿಜೆಪಿ ಮಿತ್ರಪಕ್ಷ ಮಹಾರಾಷ್ಟ್ರವಾದಿ ಗೋಮಾಂತಕ ಪಾರ್ಟಿ ಕೂಡ ವಿರೋಧಿಸಿತ್ತು, ಸೈನಿಕರು ಗಡಿಗಳಲ್ಲಿ ಉಗ್ರಗಾಮಿಗಳ ವಿರುದ್ದ ಸೆಣಸುತ್ತಿರುವಾಗ ಇಂತಹ ಸನ್ಮಾನ ಸಲ್ಲದುಎಂದಿತ್ತಂತೆ .ಆದರೂ ಬಿಜೆಪಿ ಈ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿತ್ತು. ಆದರೆ ನಂತರ ಸ್ವತಃ ಪರಿಕ್ಕರ್ ಕೂಡ ಈ ಕಾರ್ಯಕ್ರಮವನ್ನು ರದ್ದು ಮಾಡುವಂತೆ ಕೇಳಿರುವುದಾಗಿ ವರದಿಯಾಗಿದೆ. ಅದು ಬಾರಮುಲ್ಲ ಘಟನೆಯ ಮೊದಲೋ ನಂತರವೋ ಗೊತ್ತಾಗಿಲ್ಲ

ಚಿನ್ನದ ಠೇವಣಿ ಸ್ಕೀಮ್: 20 ಸಾವಿರ ಟನ್ ಬದಲು ಕೇವಲ 2.8 ಟನ್ ಸಂಗ್ರಹ


ಕಳೆದ ವರ್ಷ ಮೋದಿ ಸರಕಾರ ಚಿನ್ನದ ಠೇವಣಿ ಯೋಜನೆ ತಂದಿತ್ತು. ದೇಶದ ಮನೆಗಳಲ್ಲಿ, ಬ್ಯಾಂಕ್ ಲಾಕರ್‌ಗಳಲ್ಲಿ ಮತ್ತು ದೇವಾಲಯಗಳ ಲಾಕರ್‌ಗಳಲ್ಲಿ ಬಿದ್ದಿರುವ ಅಪಾರ ಚಿನ್ನದ ಸಂಗ್ರಹಕ್ಕೆ ಹಣದ ರೂಪ ಕೊಡುವುದು ಇದರ ಉದ್ದೇಶವಾಗಿತ್ತು. 30 ಗ್ರಾಂಗಿಂತ ಹೆಚ್ಚು ಚಿನ್ನ ಹೊಂದಿರುವವರು ಇದನ್ನು ಸರಕಾರದ ಬಳಿ ಠೇವಣಿ ಇಟ್ಟರೆ ಅದಕ್ಕೆ 2–2.5ಶೇ. ಬಡ್ಡಿ ಕೊಡುವ ಸ್ಕೀಮ್ ಇದು. ಇದು ಜನರಿಗೆ ಆಕರ್ಷಕವೆನಿಸಬಹುದು ಎಂಬುದು ಸರಕಾರದ ಲೇಕ್ಕಾಚಾರವಾಗಿತ್ತು. ಆದರೆ ಸುಮಾರು ಏಳು ತಿಂಗಳಲ್ಲಿ ಸಂಗ್ರಹವಾದದ್ದು ಕೇವಲ 2891 ಕೆ.ಜಿ. ಮಾತ್ರ. ಅದರಲ್ಲಿ ಅರ್ಧದಷ್ಟು ತಿರುಪತಿದೇವಸ್ಥಾನದ್ದು.

ಸರಕಾರ 28000 ಟನ್ ಟನ್ ಸಂಗ್ರಹಿಸಬಹುದು ಎಂದು ಲೆಕ್ಕಾಚಾರ ಹಾಕಿತ್ತು. ಆದರೆ ಬಂದಿರುವುದು 2.8 ಟನ್ ಮಾತ್ರ. 2015ರಲ್ಲಿ 928.7 ಟನ್ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿತ್ತು. ಭಾರತದಲ್ಲಿನ ಉಪಯೋಗಕ್ಕೆ ಬಂದಿರದಿರುವ ದಾಸ್ತಾನಿನ ಪ್ರಮಾಣ 20 ಸಾವಿರ ಟನ್ ಎಂದು ಲೆಕ್ಕ ಹಾಕಲಾಗಿದೆ.

ಒಂದು ತಮಾಷೆಯ ಸಂಗತಿ ಎಂದರೆ ಸಂಸತ್ತಿನ ಸದಸ್ಯರು ಸ್ವತಃ ತಿಳಿಸಿರುವ ಸಂಪತ್ತಿನ ಪ್ರಕಾರ ಒಟ್ಟು 710 ಕೇ.ಜಿ. ಚಿನ್ನ ಹೊ<ದಿದ್ದಾರೆ. ಈ ಸ್ಕೀಮ್ ಬಂದಾಗ ಅವರೆಲ್ಲ ಇದನ್ನು ಸ್ವಾಗತಿಸಿದ್ದರು, ಆದರೆ ಬಳಸಿಕೊಂಡವರ ಪ್ರಮಾಣ ಬಹಳ ಕಡಿಮೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.




ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯಾ



ವ್ಯಂಗ್ಯಚಿತ್ರ: ಗೋಕುಲ್, ಡಿಎನ್ಎ

ಅಭಿವೃದ್ಧಿಯ ಪರ್ಯಾಯ ಹಾದಿ: ಕೇರಳದಲ್ಲೊಂದು ವಿನೂತನ ಪ್ರಯೋಗ



ಕೆ.ಎಂ.ನಾಗರಾಜ್

ಖಾಸಗಿ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸದೆ, ಅದಕ್ಕಾಗಿ ಕಾರ್ಮಿಕ ಕಾನೂನುಗಳನ್ನು ಕಿತ್ತೊಗೆಯದೆ ಮತ್ತು ಪರಿಸರ ರಕ್ಷಣೆಯ ಕಾನೂನುಗಳನ್ನು ಸಡಿಲಗೊಳಿಸದೆ, ಉದ್ದಿಮೆದಾರರು ಬಯಸುವ ಪ್ಯೆಪೋಟಿಯ ತೆರಿಗೆ ವಿನಾಯ್ತಿ ಕೊಡದೆ ಒಂದು ಆರ್ಥಿಕ ಅಭಿವೃದ್ಧಿ ಮಾರ್ಗದಲ್ಲಿ ಸಾಗಲು ಸಾಧ್ಯವೇ? ಕೇರಳದ ಎಡ ಪ್ರಜಾಪ್ರಭುತ್ವ ರಂಗ ಸರಕಾರ ಇಂತಹ ಒಂದು ಪ್ರಯೋಗವನ್ನು ಆರಂಭಿಸಿದೆ. ಇದೊಂದು ವಿನೂತನ ಪ್ರಯೋಗ ಎನ್ನುತ್ತಾರೆ ಅಲ್ಲಿಯ ಹಣಕಾಸು ಮಂತ್ರಿ ಪ್ರೊ. ಥಾಮಸ್ ಐಸಾಕ್. ಇದರ ರೂಪುರೇಷೆಯನ್ನು ಕೊಡುವ ಲೇಖನದ ಭಾವಾನುವಾದ ಇದು. ಅನುವಾದ: ಕೆ.ಎಂ.ನಾಗರಾಜ್



ರಾಜ್ಯಗಳ ಒಕ್ಕೂಟದ ಮೂಲಕ ನಿರ್ಮಾಣವಾಗಿರುವ ನಮ್ಮ ದೇಶವು ಬಂಡವಾಳಶಾಹಿ–ಭೂಮಾಲಕರ ಹಿಡಿತದಲ್ಲಿದೆ. ಈ ವ್ಯವಸ್ಥೆಯಲ್ಲಿ, ರಾಜ್ಯ ಮಟ್ಟದಲ್ಲಿ ಭಿನ್ನವಾದ ಒಂದು ಅಭಿವೃದ್ಧಿ ಮಾದರಿಯನ್ನು ಅನುಸರಿಸಲು ಸಾಧ್ಯವೇ ಎಂಬ ಪ್ರಶ್ನೆ ಏಳುತ್ತದೆ. ಅದು ಸಾಧ್ಯವಿದೆ ಮಾತ್ರವಲ್ಲ, ಯಶಸ್ವಿಯಾಗಬಲ್ಲದು ಎಂಬುದನ್ನು ಕೇರಳ ತೋರಿಸಿದೆ. ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಆರೋಗ್ಯ ಪಾಲನೆ, ಏನಿಲ್ಲವೆಂದರೂ ಒಂದು ಗುಡಿಸಲು ಕಟ್ಟಿಕೊಳ್ಳುವಷ್ಟು ಜಾಗ, ವಸತಿ, ಮುಪ್ಪಿನ ಕಾಲದಲ್ಲಿ ಸಾಮಾಜಿಕ ಭದ್ರತೆ ಮುಂತಾದವುಗಳನ್ನು ತನ್ನ ಪ್ರಜೆಗಳಿಗೆ ಕೇರಳ ಒದಗಿಸಿಕೊಟ್ಟಿದೆ. ಪರಿಣಾಮವಾಗಿ, ಜನರ ಬದುಕು ಸುಧಾರಿಸಿದೆ. ಕೇರಳದ ಜನತೆಯ ಬದುಕು/ಜೀವನ ಮಟ್ಟವು ರಾಷ್ಟ್ರೀಯ ಸರಾಸರಿಗಿಂತ ಎತ್ತರದಲ್ಲಿದೆ ಎಂಬುದನ್ನು ಮಾನವ ಅಭಿವೃದ್ಧಿಯ ಅನೇಕ ಸೂಚ್ಯಂಕಗಳು ಧೃಢೀಕರಿಸಿವೆ. ಅಮಾನವೀಯ ಸ್ವರೂಪದ ಜಾತಿ ತಾರತಮ್ಯಗಳನ್ನು ತೊಡೆದು ಹಾಕುವಲ್ಲಿ ಕೇರಳ ಯಶಸ್ವಿಯಾಗಿದೆ. ಉಳುವವನಿಗೆ ಭೂಮಿ ಮತ್ತು ದುಡಿಮೆಗಾರರ ವೇತನವನ್ನು ಸಾಮೂಹಿಕ ಚೌಕಾಸಿಯ ಮೂಲಕ ನಿರ್ಧರಿಸುವ ಹಕ್ಕುಗಳಿಗೆ ಮಾನ್ಯತೆ ದೊರಕಿದೆ. ಈಗಿರುವ ಒಕ್ಕೂಟ ವ್ಯವಸ್ಥೆಯಡಿಯಲ್ಲಿಯೇ ಈ ಎಲ್ಲವನ್ನೂ ಕೇರಳದಲ್ಲಿ ಸಾಧಿಸಲಾಗಿದೆ. ಕೇರಳದಲ್ಲಿ ಸಂಘಟಿತ ಎಡ ಚಳವಳಿ ಹುಟ್ಟುವ ಮೊದಲೇ, ಹತ್ತೊಂಭತ್ತನೇ ಶತಮಾನದ ಕೊನೆಯ ಭಾಗದಲ್ಲಿ ನಡೆದ ಸಮಾಜ ಸುಧಾರಣಾ ಚಳವಳಿಗಳ ಫಲವಾಗಿ ಜಾತಿ ತಾರತಮ್ಯಗಳನ್ನು ತೊಡೆದು ಹಾಕುವ ವಿಶಿಷ್ಟ ಸಾಧನೆಗಳು ಆಗಿದ್ದವು. ಆದಾಗ್ಯೂ, ಜನತೆಯ ಆಶೋತ್ತರಗಳು ಈಡೇರುವಂತಾಗಲು, ಚಳವಳಿಯ ವ್ಯಾಪ್ತಿಯನ್ನು ವಿಸ್ತರಿಸಿ, ಅಭಿವೃದ್ಧಿಯ ಒಂದು ಪರ್ಯಾಯ ಮಾದರಿಯ ಮೂಲಕ ಅದನ್ನು ಮುಂದುವರಿಸಿದ ಕೀರ್ತಿಯು ಶ್ರಮ ಶಕ್ತಿಗೆ ಸಲ್ಲುತ್ತದೆ.

ಹಲವು ವರ್ಷಗಳಿಂದಲೂ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ನವ ಉದಾರ ನೀತಿಗಳು ಒಕ್ಕೂಟ ವ್ಯವಸ್ಥೆಯ ಜೀವಾಳದಂತಿರುವ ಸ್ವಾಯತ್ತತೆಯನ್ನು ಒಳಗೊಳಗೇ ಕೊರೆದು ಹಾಕಿವೆ. ಹಾಗಾಗಿ, ಒಂದು ಪರ್ಯಾಯ ಅಭಿವೃದ್ಧಿ ಮಾದರಿಯನ್ನು ಅನುಸರಿಸಲು ರಾಜ್ಯ ಸರ್ಕಾರಗಳಿಗೆ ಕಷ್ಟದಾಯಕವಾಗುತ್ತಿದೆ. ಆದಾಗ್ಯೂ, ಒಟ್ಟುಗೂಡಿದ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಎಡ ಪಕ್ಷಗಳು ಹೊರ ಹೊಮ್ಮಿರುವ ಕೇರಳದಲ್ಲಿ ಜನತೆಯ ತುರ್ತು ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಅಭಿವೃದ್ಧಿಯಒಂದು ಪರ್ಯಾಯ ಮಾದರಿಯ ಅಳವಡಿಕೆಯ ಮೂಲಕ ಉತ್ಪಾದಕ ಶಕ್ತಿಗಳು ವೇಗವಾಗಿ ಬೆಳೆಯುವಂತೆಯೂ ಮಾಡಿವೆ. ಅಭಿವೃದ್ಧಿ/ಆರ್ಥಿಕ ಬೆಳವಣಿಗೆಯ ಅಜೆಂಡಾವನ್ನೇ ಎಡ ಪಂಥೀಯರು ಹೊಂದಿಲ್ಲ, ಇದ್ದದ್ದನ್ನು ಹಂಚುವುದು ಮಾತ್ರ ಅವರಿಗೆ ಗೊತ್ತಿದೆ ಎಂಬ ಬಲ ಪಂಥೀಯರ ಅಭಿಪ್ರಾಯ ಜನಜನಿತವಾಗಿದೆ. ಉದಾರ ನಿಲುವಿನ ಬುದ್ಧಿಜೀವಿಗಳೂ ಹಾಗೆ ಹೇಳುವುದುಂಟು. ಭಾರತದ ಮೊದಲ ಐದು ಪಂಚವಾರ್ಷಿಕ ಯೋಜನೆಗಳ ಕರಡು ಸಿದ್ಧಪಡಿಸುವುದರಲ್ಲಿ ಪಾತ್ರ ವಹಿಸಿದ್ದ ಖ್ಯಾತ ಆರ್ಥಶಾಸ್ತ್ರಜ್ಞ ಕೆ.ಎನ್‌ರಾಜ್ ಒಮ್ಮೆ ಇ.ಎಂ.ಎಸ್ ನಂಬೂದ್ರಿಪಾಡ್‌ರವರ ಜೊತೆ ಮಾತನಾಡುತ್ತಾ, ತಮಾಷೆಯ ರೂಪದಲ್ಲಿ ಹೀಗೆ ಹೇಳಿದ್ದರಂತೆ: "ನೀವು ಕಮ್ಯೂನಿಸ್ಟ್‌ರು ಊಟಕ್ಕೆ ಬಡಿಸುವುದರಲ್ಲಿ ಎತ್ತಿದ ಕೈ. ಆದರೆ, ನಿಮಗೆ ಅಡಿಗೆ ಮಾಡಲು ಬರುವುದಿಲ್ಲ. ಉತ್ಪಾದನೆ ಹೆಚ್ಚಿಸುವುದೇ ಕೇರಳದ ಇಂದಿನ ಅವಶ್ಯಕತೆ. ನೀವು ಚರಿತ್ರೆಗೆ ದಾರಿ ಮಾಡಿಕೊಡಬೇಕು". ಅವರ ಮಾತನ್ನು ಒಂದು ಸವಾಲಿನಂತೆ ಸ್ವೀಕರಿಸಿದ ಇ.ಎಂ.ಎಸ್ 1994ರಲ್ಲಿ ಕೇರಳದ ಅಧ್ಯಯನ ಕುರಿತು ಒಂದು ಅಂತಾರಾಷ್ಟ್ರೀಯ ಸಮ್ಮೇಳನ(International Congress on Kerala Studies) ಏರ್ಪಡಿಸಿ, ನಂತರ, 'ಜನತಾ ಯೋಜನೆ'(People's Plan) ಅಭಿಯಾನ ಆರಂಭಿಸಿದರು. ಸದಾ ಹೊಸತನ್ನು ಹುಡುಕುವ ಅವರ ಸ್ಫೂರ್ತಿದಾಯಕ ಪ್ರಯತ್ನಗಳು, 2016ರ ಕೇರಳದ ಅಧ್ಯಯನದ ಅಂತಾರಾಷ್ಟ್ರೀಯ ಸಭೆಯ (ಮೂರನೆಯ ಆವೃತ್ತಿ) ಅಭಿಪ್ರಾಯಗಳು 'ಅಭಿವೃದ್ಧಿಯ ಒಂದು ಪರ್ಯಾಯ ಮಾದರಿ'ಯ ರೂಪದಲ್ಲಿ ಮೂಡಿಬಂದಿವೆ. ಈ ಅಭಿಪ್ರಾಯಗಳನ್ನು ಆಧರಿಸಿ ರೂಪಿಸಿದ ಎಡ ಪ್ರಜಾಪ್ರಭುತ್ವವಾದಿ ರಂಗದ ಚುನಾವಣಾ ಪ್ರಣಾಳಿಕೆಯನ್ನು ಕೇರಳದ 2016ರ ಚುನಾವಣೆಯಲ್ಲಿ ಜನರ ಮುಂದಿಡಲಾಗಿತ್ತು. ಜನತೆ ಪರ್ಯಾಯ ಮಾದರಿಯನ್ನು ಬೆಂಬಲಿಸಿದ್ದಾರೆ. ಅದನ್ನು ಕಾರ್ಯಗತಗೊಳಿಸಲು ಕೇರಳದ 2016–17ರ ಮುಂಗಡ ಪತ್ರದಲ್ಲಿ ಅನೇಕ ಹೊಸ ಸ್ಕೀಂಗಳಿಗೆ ಚಾಲನೆ ಸಿಕ್ಕಿದೆ.

ಕೇರಳದಲ್ಲಿ ಈಗ ಅಳವಡಿಸಿಕೊಂಡಿರುವ ಪರ್ಯಾಯ ಮಾದರಿಯ ಹೊಸ ಕಾರ್ಯವಿಧಾನವನ್ನುಎರಡೂ ಕಾಲುಗಳ ಮೇಲಿನ ಒಂದು ಸ್ಥಿರ ನಡಿಗೆ ಎನ್ನಬಹುದು. ಜನತೆಗೆ ಒಂದು ಸಮಗ್ರ ಸಾಮಾಜಿಕ ಭದ್ರತೆ ಒದಗಿಸುವುದು, ಅವರ ಸಾಂಪ್ರದಾಯಿಕ ಜೀನವನ ಶೈಲಿಯನ್ನು ಕಾಪಾಡುವುದು, ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣ, ಅಂಚಿಗೆ ತಳ್ಳಲ್ಪಟ್ಟಿರುವವರಿಗಾಗಿ ವಿಶೇಷ ಕಾರ್ಯಕ್ರಮಗಳು ಮತ್ತು ಲಿಂಗ ಸಂವೇದನೆ ಮುಂತಾದ ಕಾರ್ಯಕ್ರಮಗಳು ಒಂದು ಕಾಲಿನ ಮೇಲೆ ನಿಂತಿವೆ. ಲಿಂಗ ಸಂವೇದನೆಗೆ ಒತ್ತುಕೊಡುವ ಅಂಶವನ್ನು ಹೊರತುಪಡಿಸಿದರೆ, ಉಳಿದ ಎಲ್ಲ ಕಾರ್ಯಕ್ರಮಗಳೂ ಯಾವಾಗಲೂ ಕೇರಳದ ಅಭಿವೃದ್ಧಿಯಲ್ಲಿಒತ್ತು ಪಡೆದ ಸಾಮಾಜಿಕ ಕಳಕಳಿಯ ಅಂಶಗಳಾಗಿಯೇ ಇವೆ. ಸಾಮಾಜಿಕ ವಲಯದಲ್ಲಿ ಕೇರಳ ಅತ್ಯುತ್ತಮ ಸಾಧನೆ ಮಾಡಿದೆ. ಆದರೆ, ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಕೆಲವು ಎರಡನೆಯ ಪೀಳಿಗೆಯ ಹೊಸ ಸಮಸ್ಯೆಗಳು ಎದುರಾಗಿವೆ. ಅವುಗಳನ್ನು ಮತ್ತು ಅಂಚಿನಲ್ಲಿರುವವರ ಕೆಲವು ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕಿದೆ. ಈ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಎಡ ಶಕ್ತಿಗಳಿಗಿರುವ ಹೆಸರಿಗೆ ಮಸಿ ಬಳಿದಂತಾಗುತ್ತದೆ.


ಒಂದೇ ಕಾಲಿನ ಕುಂಟು ನೆಗೆತ ಬಹಳ ಹೊತ್ತು ಸಾಗದು. ಆದ್ದರಿಂದ ಸರಾಗವಾಗಿ ನಡೆಯಲು ಇನ್ನೊಂದು ಕಾಲು ಬಳಸಬೇಕಾಗುತ್ತದೆ. ನಮ್ಮ ವಿದ್ಯಾವಂತ ಯುವಜನರಿಗೆ ಗುಣ ಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವ ಉತ್ಪಾದನಾ ವಲಯಗಳೇ ಎರಡನೆಯ ಕಾಲು. ಈ ವಲಯಗಳು ವೇಗವಾಗಿ ಬೆಳೆಯುವಂತೆ ಮಾಡುವುದು ಬಹಳ ಮುಖ್ಯವಾಗಿದೆ. ಕೇರಳವು ಈ ವರೆಗೆ ಅವಲಂಬಿಸಿದ್ದ ದೈಹಿಕ ಶ್ರಮವೇ ಪ್ರಧಾನ ಅಂಶವಾಗಿ ಉಳ್ಳ ಪಾರಂಪರಿಕ ಕೈಗಾರಿಕೆಗಳು, ಅಥವಾ ಹೆಚ್ಚಿಗೆ ಇಂಧನ ಬೇಡುವ ಕೈಗಾರಿಕೆಗಳು ಮತ್ತು ರಾಸಾಯನಿಕ ಕೈಗಾರಿಕೆಗಳು ಮುಂದಿನ ಹೆಜ್ಜೆಕಾಣದ ಪರಿಸ್ಥಿತಿಯಲ್ಲಿವೆ. ಹಾಗಾಗಿ, ಸೂರ್ಯೋದಯದ ಕೈಗಾರಿಕೆಗಳೆಂದು ಕರೆಯಲಾಗುವ ಜ್ಞಾನಾಧಾರಿತ ಮತ್ತು ಕೌಶಲ್ಯ ಬೇಡುವ ಕೈಗಾರಿಕೆಗಳತ್ತ ಕೇರಳ ತುರ್ತಾಗಿ ಹೊರಳಬೇಕಾಗಿದೆ. ಕೇರಳದಲ್ಲಿ ಅಂತಹ ಸಂಪನ್ಮೂಲಗಳ ಲಭ್ಯತೆ ಇದೆ. ಆದ–ರೆ, ಈ ವಲಯಗಳಲ್ಲಿ ಹೂಡಿಕೆ ಮಾಡುವಂತೆ ಖಾಸಗಿ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸದ ಹೊರತು ಈ ಪರಿವರ್ತನೆ ಸಾಧ್ಯವಿಲ್ಲ. ಈ ಉದ್ದೇಶಕ್ಕಾಗಿ, ಎಡರಂಗ ಸರ್ಕಾರವು ಕಾರ್ಮಿಕ ಕಾನೂನುಗಳನ್ನು ಕಿತ್ತೊಗೆಯಲು ಮತ್ತು ಪರಿಸರ ರಕ್ಷಣೆಯ ಕಾನೂನುಗಳನ್ನು ಸಡಿಲಗೊಳಿಸಲು ತಯಾರಿಲ್ಲ. ಹಣಕಾಸಿನ ತೀವ್ರ ಕೊರತೆಯ ಸನ್ನಿವೇಶದಲ್ಲಿ, ಉದ್ದಿಮೆದಾರರು ಬಯಸುವಂತೆ ಪೈಪೋಟಿಯ ತೆರಿಗೆ ವಿನಾಯ್ತಿ ಕೊಡಲೂ ಎಡರಂಗ ಸರ್ಕಾರಕ್ಕೆ ಆಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ, ಕೇರಳದಲ್ಲಿ ಹೂಡಿಕೆ ಮಾಡಲು ಯಾರಾದರೂ ಮೇಲೆ ಬಿದ್ದು ಬರುತ್ತಾರೆಯೇ? ಈ ಪರಿಸ್ಥಿತಿಯನ್ನು ಮನಗಂಡಿರುವ ಕೇರಳ ಸರ್ಕಾರವು, ಸಂಪರ್ಕ ಮತ್ತು ಔದ್ಯೋಗಿಕವಾಗಿ ಎಲ್ಲರಿಗೂ ಬೇಕಾಗುವ ವಿಶ್ವದರ್ಜೆಯ ಮೂಲ ಸೌಕರ್ಯಗಳನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ. ಮತ್ತು ಅದಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ, ಸಾಮಾಜಿಕ ಮೂಲ ಸೌಕರ್ಯಗಳಾದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಗುಣಮಟ್ಟವನ್ನು ಎತ್ತರಿಸಲು ಸರ್ಕಾರ ಶ್ರಮಿಸುತ್ತಿದೆ.

ಈ ಉದ್ದೇಶ ಈಡೇರುವಂತಾಗಲು 2016–17ರ ಬಜೆಟ್‌ನಲ್ಲಿ 20,000 ಕೋಟಿ ರೂಗಳ ಒಂದು ಪ್ಯಾಕೇಜನ್ನು ಒದಗಿಸಲಾಗಿದೆ. ಮುಂದಿನ ಐದು ವರ್ಷಗಳಲ್ಲಿ, ಎಲ್ಲ ಮೂಲಗಳಿಂದ, ಸುಮಾರು ಒಂದು ಲಕ್ಷ ಕೋಟಿ ರೂಗಳ ಒಟ್ಟು ಹೂಡಿಕೆಯಾಗುವ ನಿರೀಕ್ಷೆಇದೆ.ವಾಣಿಜ್ಯ ಬೆಳೆಗಳ ಬೆಲೆ ಕುಸಿತ ಮತ್ತು ತೈಲ ಬೆಲೆ ಕುಸಿತದ ಪರಿಣಾಮವಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಉಂಟಾಗಿರುವ ಬಿಕ್ಕಟ್ಟು, ಕೇರಳದ ಅರ್ಥವ್ಯವಸ್ಥೆಯಲ್ಲಿ ಒಂದು ರೀತಿಯ ಹಿಂಜರಿಕೆ ಉಂಟುಮಾಡಿವೆ. ಈ ಕಾರಣಗಳಿಂದಾಗಿ, 2016–17ರ ಬಜೆಟ್‌ನಲ್ಲಿ ಒದಗಿಸಿರುವ 20,000 ಕೋಟಿ ರೂಗಳ ಮೊತ್ತವನ್ನು ಹಿಂಜರಿಕೆ 'ತಡೆಯುವ ಪ್ಯಾಕೇಜ್‌ಎಂದು ಕರೆಯಲಾಗಿದೆ.

ಕೇರಳ ರಾಜ್ಯವು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟು ಮತ್ತು ಸಾರ್ವಜನಿಕರಿಂದ ಎತ್ತುವ ಸಾಲಗಳ ಮೇಲೆ ಜಿಡಿಪಿಯ ಶೇ.3ರ ಮಿತಿ ವಿಧಿಸಿರುವ FRBM ಕಾಯ್ದೆಯ ನಿಯಮಗಳ ಹಿನ್ನೆಲೆಯಲ್ಲಿ, ಹೂಡಿಕೆಯಾಗುವ ಬಂಡವಾಳವನ್ನು ಪಡೆಯುವುದಾದರೂ ಎಲ್ಲಿಂದ? ಈ ಪ್ರಶ್ನೆಗೆ ಉತ್ತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಕ್ರಮಗಳಲ್ಲಿ ಅಡಗಿದೆ– ಅವು ಇಂತಹ ಉದ್ದೇಶಗಳಿಗಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸುತ್ತವೆ. ಅದೇ ರೀತಿಯಲ್ಲಿ, ಕೇರಳ ಸರ್ಕಾರವು Kerala Infrastructure Investment Fund Board (KIIFB)ಎಂಬ ಸಂಸ್ಥೆಯನ್ನು ಸ್ಥಾಪಿಸಲಿದೆ. ಈ ಸಂಸ್ಥೆಯು ಹೂಡಿಕೆಗೆ ಬೇಕಾಗುವ ಬಂಡವಾಳವನ್ನು ಮಾರುಕಟ್ಟೆ ಮೂಲಗಳಿಂದ ಹೊಂದಿಸಿಕೊಳ್ಳುತ್ತದೆ. ಈ ಸಂಸ್ಥೆಗೆ, ಬಜೆಟ್ ಮೂಲಕ ಒಂದು ನಿರ್ದಿಷ್ಟ ವರಮಾನ ಹರಿಯುವಂತೆಯೂ ಮತ್ತು ಅದೇ ಹೊತ್ತಿನಲ್ಲಿ ಆ ಸಂಸ್ಥೆಯು ಕ್ರೋಢೀಕರಿಸಿದ ಬಂಡವಾಳವನ್ನು ಯಾವುದೇ ಕಾರಣದ ಮೇಲೆ ಸರ್ಕಾರದ ಕೊರತೆಯನ್ನು ನೀಗಿಸಿಕೊಳ್ಳಲು ಬಳಸದಂತೆ ಶಾಸನ ರೂಪಿಸಲಾಗಿದೆ. ಇದೊಂದು ವಿನೂತನ ಪ್ರಯೋಗವೆಂದೇ ಹೇಳಬೇಕು. ಏಕೆಂದರೆ, ಇದು ಕೇರಳದ ಅರ್ಥವ್ಯವಸ್ಥೆಯ ಸ್ವಭಾವದ ಮೇಲೆ ಗುಣಾತ್ಮಕ ಪರಿಣಾಮಗಳನ್ನು ಬೀರಲಿದೆ. ■

'ಕೆಟ್ಟ ಬ್ಯಾಂಕ್' ನಿರ್ಮಿಸುವ ವಿಚಾರವನ್ನು ತಿರಸ್ಕರಿಸಿ– ಪ್ರಧಾನಿಗಳಿಗೆ ಯೆಚೂರಿ ಪತ್ರ

ಪುಟ 2 ರಿಂದ

ಒಂದು 'ಕೆಟ್ಟ ಬ್ಯಾಂಕ'ನ್ನು ನಿರ್ಮಿಸುವ ಒಂದು ಪ್ರಸ್ತಾವವನ್ನು ಹಿಂದಿನ ರಿಝರ್ವ್ ಬ್ಯಾಂಕ್ ಗವರ್ನರ್ ರಘುರಾಮ ರಾಜನ್ ಸಾರ್ವಜನಿಕವಗಿಯೇ ತಿರಸ್ಕರಿಸಿದ್ದರು. ಅವರು ಸಾಲ ಹಿಂದಿರುಗಿಸುವ ಬಗ್ಗ ಏನೇನೂ ಗೌರವ ಪ್ರದರ್ಶಿಸದ ಅದೇ ದೊಡ್ಡ ಸಾಲಗಾರರಿಗೇ ಸಾಲ ಕೊಡುತ್ತಲೇ ಇರಬೇಕಾದ ಈ ಪ್ರಸ್ತಾವದ 'ನೈತಿಕ ಅಪಾಯ'ದ ಸಮಸ್ಯೆಯನ್ನು ಗುರುತಿಸಿದ್ದರು.

ಬ್ಯಾಂಕುಗಳಿಗೆ ಮರು ಬಂಡವಾಳ ಒದಗಿಸಿ ಕೆಟ್ಟ ಸಾಲಗಳನ್ನು ತೊಳೆದು ಹಾಕುವ ಯಾವುದೇ ಪ್ರಯತ್ನದ ಮೊದಲು 'ವಸೂಲಿ ಮೊದಲು, ಮರುಬಂಡವಾಳ ಆನಂತರ ' ಎಂಬ ನೀತಿಯನ್ನು ಕಾಯಾ, ವಾಚಾ ನಿಮ್ಮ ಸರಕಾರ ಅನುಸರಿಸಬೇಕು. **ಹಾಗೆ ಮಾಡದಿದ್ದರೆ ದೊಡ್ಡ ಸಾಲಗಾರರ ರೂ.1,12,089 ಕೋಟಿ ರೂ.ಗಳನ್ನು ಮನ್ನಾ ಮಾಡಿರುವ ನಿಮ್ಮ ಸರಕಾರ ಚಮಚಾ ಬಂಡವಾಳಶಾಹಿಗೆ ಋಣಿಯಾಗಿದೆಯೇ ಎಂಬ ನಮ್ಮ ಅತ್ಯಂತ ಆಳವಾದ ಸಂದೇಹವನ್ನು ದೃಢಪಡಿಸಿದಂತಾಗುತ್ತದೆ.**

ನಾನು ಹಿಂದಿನ ಪತ್ರದಲ್ಲಿ ಹೇಳಿರುವಂತೆ ನಿಮ್ಮ ಸರಕಾರ ಈಗ ಮಾಡಬೇಕಾದ್ದೆಂದರೆ, ಮೊದಲ 100 ದೊಡ್ಡ ಸಾಲಗಾರರಿಂದ ಬಾಕಿಯಿರುವ ಸಾಲಗಳ ವಸೂಲಿಗೆ ಒಂದು ತುರ್ತು ಕ್ರಿಯಾಯೋಜನೆಯನ್ನು ಆಚರಣೆಗೆ ತರುವುದು. ನೀವು ಅವರ ಹೆಸರುಗಳನ್ನು ಅವರ ಬಾಕಿ ಮೊತ್ತದೊಂದಿಗೆ ಸಾರ್ವಜನಿಕಗೊಳಿಸಿ ಇದನ್ನು ಆರಂಭಿಸಬೇಕು. **ಹೀಗೆ ಮಾಡಲು ವಿಫಲರಾದರೆ, ನಿಮ್ಮ ಸರಕಾರ ನಮ್ಮ ದುಡಿಯುವ ಜನತೆ ಶ್ರೀಮಂತ ಸುಸ್ತಿದಾರರ ಕ್ರಿಮಿನಲ್ ವರ್ತನೆಗೆ ಬೆಲೆ ತೆರುವಂತೆ ಮಾಡುತ್ತದೆ ಎಂದೇ ಅರ್ಥವಾಗುತ್ತದೆ. ಇದು ಸ್ವಾಭಾವಿಕ ನ್ಯಾಯದ ನೀತಿಯನ್ನು ತಲೆಕೆಳಗೆ ಮಾಡಿದಂತಾಗುತ್ತದೆ.**

"ಕೆಟ್ಟ ಬ್ಯಾಂಕ್" ನಿರ್ಮಿಸುವ ಈ ಪ್ರಸ್ತಾವವನ್ನು ನೀವು ತಿರಸ್ಕರಿಸುತ್ತೀರಿ ಮತ್ತು ಕೆಟ್ಟ ಸಾಲಗಳ ವಸೂಲಿಯನ್ನು ಆದ್ಯತೆಯಿಂದ ಆರಂಭಿಸುತ್ತೀರಿ ಎಂದು ನಾವು ನಿರೀಕ್ಷಿಸುತ್ತೇವೆ. ಇಷ್ಟನ್ನೂ ಮಾಡದಿದ್ದರೆ ಅದು ಈ ದೇಶದ ಪ್ರಧಾನ ಮಂತ್ರಿಯಾಗಿ ನಿಮ್ಮ ಸಂವಿಧಾನಿಕ ಕರ್ತವ್ಯದ ಲೋಪವೇ ಆಗುತ್ತದೆ.

ಅಭಿವಂದನೆಗಳೊಂದಿಗೆ

ನಿಮ್ಮ ವಿಶ್ವಾಸಿ
ಸೀತಾರಾಮ್ ಯೆಚೂರಿ

(ಒತ್ತು ನಮ್ಮದು–ಸಂ.)

ಮಹಾರಾಷ್ಟ್ರ: ಬುಡಕಟ್ಟು ವ್ಯವಹಾರಗಳ ಮಂತ್ರಿಯ ಮನೆಯ ಮುಂದೆ ಆದಿವಾಸಿಗಳ ಹಗಲು-ರಾತ್ರಿ ಧರಣಿ: "ಕೆಲಸ ಕೊಡಿ-ಕೂಲಿ ಕೊಡಿ"



ಅಕ್ಟೋಬರ್3-4ರಂದು ವಾಡ ಎಂಬಲ್ಲಿ ಒಂದು ಲಕ್ಷ ಮಂದಿ ಮಹಾರಾಷ್ಟ್ರದ ಬುಡಕಟ್ಟು ವ್ಯವಹಾರಗಳ ಮಂತ್ರಿ ವಿಷ್ಣು ಸವಾರ ಅವರ ಮನೆಯ ಮುಂದೆ ಅಹೋರಾತ್ರಿ ಧರಣಿ ನಡೆಸಿದರು. ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿ, ಕೆಲಸ ಗ್ಯಾರಂಟಿ ಯೋಜನೆಯ ಅಡಿಯಲ್ಲಿ ಕೆಲಸ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಸಮಯಕ್ಕೆ ಸರಿಯಾಗಿ ಸಂಬಳ ಪ್ರತಿಭಟನಾಕಾರರ ಮುಖ್ಯ ಬೇಡಿಕೆಗಳಾಗಿದ್ದವು. ಎಐಕೆಎಸ್, ಎಸ್ಎಫ್ಐ, ಡಿವೈಎಫ್ಐ ಮತ್ತಿತರ ಎಡ ಸಂಘಟನೆಗಳ ಕರೆಗೆ ಓಗೊಟ್ಟು ಇವರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು.

17,000 ಜನರ ಸಾವಿಗೆ ಸಂಬಂಧಪಟ್ಟಂತೆ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ಮುಂಬೈ ಹೈಕೋರ್ಟ್ ರಾಜ್ಯ ಸರಕಾರಕ್ಕೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿತ್ತು.

ಕಳೆದ ಐದು ತಿಂಗಳಲ್ಲಿ ಐದು ವರ್ಷಗಳ ಕೇಳಗಿನ 10,000 ಆದಿವಾಸಿ ಮಕ್ಕಳು ರಾಜ್ಯದಲ್ಲಿ ಸತ್ತಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯದಲ್ಲಿನ ಸರಕಾರಗಳು ಹಿಂದಿನ ಸರಕಾರಗಳಂತೆ ಈ ಬಗ್ಗೆ ಏನೂ ಕ್ರಮ ಕೈಗೊಳ್ಳದೆ ಅದು ಬೃಹದಾಕಾರ ತಳೆಯುವಂತಾಗಿದೆ.

ಅಪೌಷ್ಟಿಕತೆಯ ಕಗ್ಗಂಟನ್ನು ಬಿಡಿಸಲು ಬಹುಮುಖೀ ಪ್ರಯತ್ನ ಬೇಕಾಗಿದೆ. ಆದರೆ ಸರಕಾರ ಈ ಬಗ್ಗೆ ಕುರುಡಾಗಿದೆ, ಹಸಿದ ಬಡವರಿಗೆ ತುಸುವಾದರೂ ಪರಿಹಾರ ಕೊಡಬಹುದಾಗಿದ್ದ ಸ್ಕೀಮುಗಳನ್ನೂ ಅದು ದುರ್ಬಲಗೊಳಿಸಿದೆ. ಬಡತನ ಮತ್ತು ಹಸಿವಿನ ವಿರುದ್ಧ ಸಮರ ನಡೆಸುವಲ್ಲಿ ಉತ್ತಮ ಸಾಧನ ವಾಗಬಹುದಾಗಿರುವ ರೇಗ ಮತ್ತು ಐಸಿಡಿಎಸ್‌ಗೆ ಹಣ ಕಡಿತ ಮಾಡಲಾಗಿದೆ. ಮಹಾರಾಷ್ಟ್ರದಲ್ಲಿ ಸರಕಾರ ರೇಗದ ಅಡಿಯಲ್ಲಿ ಕೆಲಸ ಕೊಡುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರಿಗೆ ನಾಲ್ಕು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಎಸ್‌ಸಿ/ಎಸ್‌ಟಿ ಉಪಯೋಜನೆಯ1 ಲಕ್ಷ ಕೋಟಿ ರೂ.ಗಳನ್ನು ಬೇರೆಡೆಗೆ ತಿರುಗಿಸಲಾಗಿದೆ ಎಂದು ವರದಿಯಾಗಿದೆ.

ಮಹಾರಾಷ್ಟ್ರ ಬಿಜೆಪಿ ಸರಕಾರದ ಈ ಎಲ್ಲ ಉಪೇಕ್ಷೆಗಳಿಂದ ಬೇಸತ್ತ ಒಂದು ಲಕ್ಷಕ್ಕೂ ಹೆಚ್ಚು ರೈತರು, ಆದಿವಾಸಿಗಳು, ಕೃಷಿ ಕೂಲಿಕಾರರು, ಯುವಜನರು, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಬುಡಕಟ್ಟು ವ್ಯವಹಾರಗಳ ಮಂತ್ರಿಗಳ ಮನೆಯ ಮುಂದೆಯೇ ಪ್ರತಿಭಟನೆ ನಡೆಸಲು ಅವರ ಊರು ವಾಡ ಬಂದು ಸೇರಿದರು. ಹಸಿದವರ ಕೂಗುಗಳನ್ನು ಉಪೇಕ್ಷಿಸುತ್ತ ಬಂದಿರುವ ಸರಕಾರ ರ್‍ಯಾಪಿಡ್ ಆಕ್ಷನ್ ಫೋರ್ಸ್‌ನ ಸಿಬ್ಬಂದಿಯನ್ನು, ಪೋಲೀಸರನ್ನು ಆ ಊರಲ್ಲಿ ತಂದು ನಿಲ್ಲಿಸಲು ಮಾತ್ರ ಮರೆಯಲಿಲ್ಲ. ಅವರು ದಾರಿಯುದ್ದಕ್ಕೂ ಸೆಟೆದು ನಿಂತಿದ್ದರೂ ಧೃತಿಗೆಡದ ಪ್ರತಿಭಟನಾಕಾರರು 4 ಕಿ.ಮೀ. ಮೆರವಣಿಗೆ ನಡೆಸಿದರು. ಡೊಳ್ಳು, ನಗಾರಿಗಳ ಸ್ವರದೊಂದಿಗೆ ಕ್ರಾತಿಕಾರಿ ಹಾಡುಗಳು ಮತ್ತು ಘೋಷಣೆಗಳು ಪ್ರತಿಭಟನಾಕಾರರ ಹುಮ್ಮಸ್ಸನ್ನು ಮತ್ತಷ್ಟು ಹೆಚ್ಚಿಸುತ್ತಿದ್ದವು. ಮಧ್ಯಹ್ನದ ವೇಳೆ ಪೋಲಿಸರ ಬಂದೋಬಸ್ತನ್ನು ಮುರಿದು ಮೆರವಣಿಗೆ ಬುಡಕಟ್ಟು ವ್ಯವಹಾರಗಳ ಮಂತ್ರಿಗಳ ಮನೆಯ ಮಂದೆ ನೆರೆಯಿತು. ಆದರೆ ಅವರನ್ನು ಭೇಟಿಯಾಗಲು ಒಪ್ಪಿದ್ದ ಮಂತ್ರಿಗಳು ಪಲಾಯನ ಮಾಡಿದ್ದರು.

ಮಳೆ ಸುರಿಯುತ್ತಿತ್ತು. ಆದರೂ ನಿರ್ದಿಷ್ಟ ಭರವಸೆಗಳನ್ನು ಪಡೆಯದೆ ತಾವು ಕದಲುವುದಿಲ್ಲ ಎಂದು ಜನ ಘೋಷಿಸಿದರು. ವಿವಿಧ ಸಂಘಟನೆಗಳ ಮುಖಂಡರ ಭಾಷಣಗಳು ಮತ್ತು ಹಾಡುಗಳು, ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೊವಂದಿಗೆ ಧರಣಿ ಮುಮದುವರೆಯಿತು.

ಸಿಪಿಐ(ಎಂ) ಕೇಂದ್ರ ಕಾರ್ಯದರ್ಶಿಮಂಡಳಿ ಸದಸ್ಯ ಅಶೋಕ ಧವಳೆ, ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್, ಮಹಾರಾಷ್ಟ್ರ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಅಜಿತ್ ನವಳೆ, ಸಿಪಿಐ(ಎಂ) ಮಹಾರಾಷ್ಟ್ರ ಕಾರ್ಯದರ್ಶಿ ನರಸಯ್ಯ ಆದಂ, ಸಿಪಿಐ(ಎಂ) ಶಾಸಕ ಜೆ.ಪಿ.ಗವಿತ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಂಹೆಚ್. ಶೇಖ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ಮರಿಯಮ್ ಧವಳೆ, ಮತ್ತು ಡಿವೈಎಫ್ಐ ಹಾಗೂ ಎಸ್ಎಫ್ಐನ ರಾಜ್ಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಅಕ್ಟೋಬರ್ 4ರ ಮುಂಜಾನೆ ಸಾರ್ವಜನಿಕ ಸಭೆಯೊಂದಿಗೆ ರಾಸ್ತಾರೋಖೋವನ್ನು ನಿಲ್ಲಿಸಲಾಯಿತು.

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

"ಹರಿತ ಕೇರಳಂ"ಗೆ ಜೇಸುದಾಸ್ ರಾಯಭಾರಿ

ಕೇರಳದ ಎಲ್‌ಡಿಎಫ್ ಸರಕಾರದ "ಹರಿತ ಕೇರಳಂ"(ಹಸಿರು ಕೇರಳ) ಕಾರ್ಯಕ್ರಮಕ್ಕೆ ಪ್ರಖ್ಯಾತ ಹಾಡುಗಾರ ಕೆ.ಜೆ.ಯೇಸುದಾಸ್ ಅವರು ರಾಯಭಾರಿ ಆಗಲು ಒಪ್ಪಿರುವುದಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಕ್ಟೋಬರ್ 3ರಂದು ರಾಜ್ಯ ವಿಧಾನಸಭೆಯಲ್ಲಿ ಪ್ರಕಟಿಸಿದರು.

ಇದು ಕಸಮುಕ್ತ, ಸ್ವಚ್ಛ ರಾಜ್ಯಕ್ಕಾಗಿ ಕೈಗೊಂಡಿರುವ ಒಂದು ಬೃಹತ್ ಕಾರ್ಯಕ್ರಮ. ಇದರ ಅಡಿಯಲ್ಲಿ ರಾಜ್ಯದ ಎಲ್ಲ ನೀರಿನ ಆಗರಗಳನ್ನು ಸ್ವಚ್ಛ ಗೊಳಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಕೆರೆಗಳು ಮತ್ತು ಸಣ್ಣ ಝರಿಗಳನ್ನು ಸ್ವಚ್ಛಗೊಳಿಸಲಾಗುವುದು. ಎರಡನೇ ಹಂತದಲ್ಲಿ ನದಿಗಳು, ಸರೋವರಗಳು ಮತ್ತು ಇತದ ಜಲಾಗಾರಗಳನ್ನು ಸ್ವಚ್ಛಗೊಳಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸಾರ್ವಜನಿಕ ನೀರಿನ ಆಗರಗಳನ್ನು ಶುಚಿಗೊಳಿಸುವುದಲ್ಲದೆ ಇನ್ನೂ ಹಲವು ಅಂಶಗಳ ಮೇಲೆ ಈ ಕಾರ್ಯಕ್ರಮ ಗಮನ ಕೇಂದ್ರೀಕರಿಸುತ್ತದೆ. ಕಸಗಳನ್ನು ಅವುಗಳ ಮೂಲದಲಲೇ ನಿವಾರಿಸುವುದು ಕೂಡ ಇದರಲ್ಲಿ ಸೇರಿದೆ.

ಝಾರ್ಖಂಡ್: ಸೂಕ್ತ ಪರಿಹಾರ ಕೇಳಿದ ಆದಿವಾಸಿಗಳಿಗೆ ಗುಂಡೇಟು ರೈತರ ಮೇಲೆ ಈ ಸರ್ಜಿಕಲ್ ದಾಳಿ ನಿಲ್ಲಿಸಿ-ಬೃಂದಾ ಕಾರಟ್

ಹಜಾರಿಬಾಗ್ ಜಿಲ್ಲೆಯ ಬಡ್ಕಾಗಾಂವ್‌ನಲ್ಲಿ ಎನ್‌ಟಿಪಿಸಿ ಗಣಿಗಾರಿಕೆ ಪ್ರದೇಶದಲ್ಲಿ ಭೂಸ್ವಾಧೀನದಿಂದ ನಿರ್ವಸಿತರಾಗಿರುವ ಜನಗಳಿಗೆ ಸೂಕ್ತ ಪರಿಹಾರ ಮತ್ತು ಉದ್ಯೋಗ ಕೊಡಿ ಎಂದು ಆಗ್ರಹಿಸಿ ಧರಣಿ ಕೂತಿದ್ದ ಗ್ರಾಮಸ್ಥರ ಮೇಲೆ ಝಾರ್ಖಂಡ್‌ನ ಬಿಜೆಪಿ ಸರಕಾರದ ಪೋಲೀಸರು ಗೋಳಿಬಾರ್ ನಡೆಸಿದ್ದರಿಂದ ನಾಲ್ಕು ಮಂದಿ ಅಕ್ಟೋಬರ್1ರಂದು ಸಾವಿಗೀಡಾಗಿದ್ದಾರೆ. ಈ ಸಂಖ್ಯೆ ಈಗ ಆರಕ್ಕೆ ಏರಿದೆ ಎನ್ನಲಾಗಿದೆ.

ರಾಜ್ಯದ ಎಡಪಕ್ಷಗಳು- ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಎಂಸಿಸಿ ಮತ್ತು ಎಸ್‌ಯುಸಿಐ(ಸಿ) ಈ ಗೋಲೀಬಾರನ್ನು ಬಲವಾಗಿ ಖಂಡಿಸಿವೆ. ರಾಜ್ಯದ ವಿವಿಧ ಸ್ಥಳಗಳಲ್ಲಿ ಜಮೀನು ಕಳಕೊಂಡಿರುವ ಜನಗಳ ಮೇಲೆ ಪೋಲಿಸ್ ಗೋಳೀಬಾರಿಗೆ ಇಳಿದಿರುವ ರಘುಬೀರ್‌ದಾಸ್ ಸರಕಾರ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಅವು ಆಗ್ರಹಿಸಿವೆ.

ಅಲ್ಲದೆ ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಈ ಗೋಲೀಬಾರಿನ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು, ಸಾವಿಗೀಡಾದವರ ಕುಟುಂಬಗಳಿಗೆ ಮತ್ತು ಗಾಯಗೊಂಡವರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.

ಮಹಾತ್ಮಾ ಗಾಂಧೀ ಜಯಂತಿಯಂದು ರಾಜ್ಯಾದ್ಯಂತ ಎಡಪಕ್ಷಗಳು ಪ್ರತಿಭಟನೆಗಳು ಸಂಘಟಿಸಿದವು. ರಾಜಧಾನಿ ರಾಂಚಿಯಲ್ಲಿ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ "ಬಿಜೆಪಿ-ಆರೆಸ್ಸೆಸ್ ಸರಕಾರ ಭೂಕಬಳಿಕೆಯನ್ನು ವಿರೋಧಿಸುತ್ತಿರುವ ರೈತರ ಮೇಲೆ ಸರ್ಜಿಕಲ್ ದಾಳಿ ನಡೆಸಿದೆ, ಇದಾವ ರಾಷ್ಟ್ರೀಯವಾದ? ಮೋದಿ-ಭಾಗವತ್ ಉತ್ತರಿಸಲಿ" ಎಂದು ಟೀಕಿಸಿದರು.

ಅಕ್ಟೋಬರ್ 4ರಂದು ಎಡಪಕ್ಷಗಳ ನಿಯೋಗವೊಂದು ಬಡ್ಕಾಗಾಂವ್ ಭೇಟಿ ನೀಡಲು ಬಂದಾಗ ಅವರನ್ನು ತಡೆದು ನಿಲ್ಲಿಸಿದರು. ಎಡಪಕ್ಷಗಳ ಮುಖಂಡರು ಅಲ್ಲಿಯೇ ಧರಣಿ ಕೂತರು. ಎಫ್ಐಆರ್ ನಲ್ಲಿ ಹೆಸರಿಸಿದವರನ್ನು ಹುಡುಕುವ ಹೆಸರಿನಲ್ಲಿ ಪೋಲೀಸರು ಹಳ್ಳಿಗಳಲ್ಲಿ ಮನೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ, ಇದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ನಂತರ ಅಲ್ಲಿಗೆ ಬಂದ ಮಾಜಿ ಮುಖ್ಯಮಂತ್ರಿ ಬಾಬುಲಾಲ್ ಮರಾಂಡಿ ಮತ್ತು ಝಾರ್ಖಂಡ್‌ನ ಆರ್‌ಜೆಡಿ ಅಧ್ಯಕ್ಷರು ಕುಡ ಎಡಪಕ್ಷಗಳ ಮುಖಂಡರೊಂದಿಗೆ ಧರಣಿ ಕೂತರು.

ಅಕ್ಟೋಬರ್ 5ರಂದು ಎಡಪಕ್ಷಗಳು ಮತ್ತು ಇತರ ಪ್ರತಿಪಕ್ಷಗಳ ಮುಖಂಡರ ನೇತೃತ್ವದಲ್ಲಿ ರಾಜಭವನ ತಲುಪಿದ ಮೆರವಣಿಗೆ ರಾಜ್ಯಪಾಲರಿಗೆ ಐದು ಬೇಡಿಕೆಗಳಿರುವ ಮನವಿ ಪತ್ರವನ್ನು ಸಲ್ಲಿಸಿತು; ಬಡ್ಕಾಗಾಂವ್ ಮತ್ತು ಇದರ ಮೊದಲು ಗೋಲದಲ್ಲಿ ಪೋಲೀಸ್ ಗೋಲೀಬಾರಿನ ತನಿಖೆಯನ್ನು ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದ ಸಮಿತಿಯಿಂದ ನಡೆಸಬೇಕು, ಅದಕ್ಕೆ ಮೊದಲು ಸಂಬಂಧಪಟ್ಟ ಪೋಲೀಸ್ ಠಾಣೆಗಳ ಎಲ್ಲ ಸಿಬ್ಬಂದಿಯನ್ನು ಅಮಾನತು ಮಾಡಬೇಕು, ಸಾವಿಗೀಡಾದವರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ತಲಾ 25ಲಕ್ಷ ರೂ. ಪರಿಹಾರ ಕೊಡಬೇಕು, ಗ್ರಾಮಸ್ಥರ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಭೂಸ್ವಾಧೀನ ಕುರಿತಂತೆ ಸರ್ವಪಕ್ಷ ಸಭೆ ಕರೆಯಬೇಕು ಎಂಬುದು ಆ ಐದು ಬೇಡಿಕೆಗಳು.



ಈ ಹೋರಾಟದ ಮುಂದಿನ ಭಾಗವಾಗಿ ಅಕ್ಟೋಬರ್ 17ರಂದು ಬಡ್ಕಾಗಾಂವ್‌ನಲ್ಲಿ ಸಂಕಲ್ಪ ಸಭೆ ನಡೆಸಲು ಮತ್ತು ಅಕ್ಟೋಬರ್ 24ರಂದು ಝಾರ್ಖಂಡ್ ಬಂದ್ ನಡೆಸಲು ಕರೆ ನೀಡಲಾಗಿದೆ.

ದಲಿತರ ರೆಸಿಡೆನ್ಶಿಯಲ್ ಶಾಲೆಗಾಗಿ ಹೋರಾಟ

ಕೆರುಮಂಬಕ್ಕಂನಲ್ಲಿ ದಲಿತರಿಗೆ ಒಂದು ನಿವಾಸಿ ಶಾಲೆ ಕಟ್ಟಲೆಂದು ಸರಕಾರ ವಿಶೇಷ ಭಾಗ ಯೋಜನೆ(ಎಸ್‌ಸಿಪಿ) ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ 27 ಎಕ್ರೆ ಭೂಮಿ ಖಾಲಿ ಬಿದ್ದಿರುವದನ್ನು ಇನ್ನೂ ಬಳಸಿಕೊಂಡಿಲ್ಲ. ಎಸ್‌ಸಿಪಿಯಲ್ಲಿ ಕೊಡಮಾಡಲಾದ ಹಣವನ್ನು ಬೇರೆ ಬಾಬ್ತುಗಳಿಗೆ ಬಳಸುವಂತಿಲ್ಲ. ಸರಕಾರ ಕೂಡಲೇ ಮಂಜೂರಾಗಿರುವ ಹಣವನ್ನು ಬಳಸಿ ನವೋದಯ ಮಾದರಿಯ ನಿವಾಸಿ ಶಾಲೆಯನ್ನು ದಲಿತರಿಗಾಗಿ ಕಟ್ಟಬೇಕೆಂದು ತಮಿಳುನಾಡು ಅಸ್ಪೃಶ್ಯತಾ ನಿವಾರಣ ರಂಗ (ಟಿಎನ್‌ಯುಇಎಫ್) ಆಗ್ರಹ ಪಡಿಸಿತ್ತು.

ಇದನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸಪ್ಟಂಬರ್ 1 ರಂದು ರಂಗದ 40 ಕಾರ್ಯಕರ್ತರು ರಾಜ್ಯ ವಿಧಾನ ಸಭೆಗೆ ಮುತ್ತಿಗೆ ಹಾಕಲು ನಿರ್ಧರಿಸಿದರು. ಟಿಎನ್‌ಯುಇಎಫ್‌ನ ಅಧ್ಯಕ್ಷ ಸಂಪತ್ ಅವರ ನೇತೃತ್ವದಲ್ಲಿ ಕಾಮರಾಜ್ ಸಲೈನಿಂದ ಹೊರಟ ಪ್ರತಿಭಟನಾಕಾರರನ್ನು ಪೋಲೀಸರು ತಡೆದಾಗ ಅಲ್ಲಿಯೇ ಪ್ರತಿಭಟನೆ ಮುಂದುವರೆಯಿತು. ಅವರನ್ನೆಲ್ಲ ಬಂಧಿಸಲಾಯಿತು.



ಶರತ್ ಚಂದ್ರ

ಕಾರ್ಬಿನ್ ಪುನರಾಯ್ಕೆ : ಆಶಾದಾಯಕ ಬೆಳವಣಿಗೆ

ಬ್ರಿಟನಿನ ಲೇಬರ್ ಪಕ್ಷದ ಎಡಪಂಥದ ಹಿರಿಯ ನಾಯಕ ಜೆರೆಮಿ ಕಾರ್ಬಿನ್ ಅವರು ಪಕ್ಷದ ನಾಯಕನಾಗಿ ಲೀವರ್ ಪೂಲ್ ನಲ್ಲಿ ನಡೆದ ಪಕ್ಷದ ವಾರ್ಷಿಕ ಮಹಾಸಭೆಯಲ್ಲಿ ಇನ್ನೂ ಹೆಚ್ಚಿನ ಮತಗಳಿಂದ ಪುನರಾಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಪಕ್ಷದ ಆಂತರಿಕೆ ಚುನಾವಣೆಗಳಲ್ಲಿ ಶೇ. 62 ಮತ ಗಳಿಸಿ ತಮ್ಮ ಪ್ರತಿಸ್ಪರ್ಧಿ ಒವೆನ್ ಸ್ಮಿತ್ ಅವರನ್ನು ಪರಾಭವಗೊಳಿಸಿದ್ದಾರೆ. ಅವರು ಕಳೆದ ವರ್ಷದ ಚುನಾವಣೆಗಳಲ್ಲಿ ಗಳಿಸಿದ ಶೇ. 59.5 ಮತಗಳಿಕೆಗಿಂತಲೂ ಹೆಚ್ಚು ಮತ ಗಳಿಸಿ ಅಚ್ಚರಿ ಮೂಡಿಸಿದ್ದಾರೆ. ಅವರ ನಾಯಕತ್ವ ಲೇಬರ್ ಪಕ್ಷ ಸಾಮಾನ್ಯ ಸದಸ್ಯರಲ್ಲಿ ಉತ್ಸಾಹ ಮೂಡಿಸಿದ್ದು, ದೊಡ್ಡ ಸಂಖ್ಯೆಯಲ್ಲಿ ಸದಸ್ಯರು ಸೇರಿದ್ದರು. ಲೇಬರ್ ಪಕ್ಷದ ಸದಸ್ಯತ್ವ ಕಳೆದ ಸರಿಯ ಮೂರು ಪಟ್ಟು ಆಗಿದ್ದು, ನಾಯಕನ ಆಯ್ಕೆಯ ಚುನಾವಣೆಯಲ್ಲಿ 5 ಲಕ್ಷ ಸದಸ್ಯರು ಭಾಗವಹಿಸಿದ್ದರು. ಇದರೊಂದಿಗೆ ಬ್ರಿಟನಿನ ಲೇಬರ್ ಪಕ್ಷ ಪಶ್ಚಿಮ ಯುರೋಪಿನ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ.

'ಬ್ರೆಕ್ಸಿಟ್' ಜನಮತಸಂಗ್ರಹದಲ್ಲಿ ಲೇಬರ್ ಪಕ್ಷದ ಅಧಿಕೃತ ನಿಲುವಿಗೆ ಸೋಲಾದ ಹಿನ್ನೆಲೆಯಲ್ಲಿ ಪಕ್ಷದ ಒಂದು ವಿಭಾಗ ಜೆರೆಮಿ ಕಾರ್ಬಿನ್ ಅವರು ರಾಜೀನಾಮೆ ನೀಡಬೇಕೆಂದು ಪ್ರಚಾರಾಭಿಯಾನ ನಡೆಸಿತ್ತು. ಅವರ ನಾಯಕತ್ವದ ಛಾಯಾ (ಶ್ಯಾಡೊ) ಮಂತ್ರಿಮಂಡಲದ (ಬ್ರಿಟನಿನಲ್ಲಿ ಪ್ರಮುಖ ವಿರೋಧ ಪಕ್ಷ ಪ್ರತಿ ಸಚಿವಾಲಯದ ಕೆಲಸದ ಬಗ್ಗೆ ವಿಮರ್ಶಿಸುವ ಪಕ್ಷದ ನಿಲುವು ರೂಪಿಸುವ ಸ್ಪಷ್ಟಪಡಿಸುವ 'ಮಂತ್ರಿ' ಒಬ್ಬರನ್ನು ನೇಮಿಸುತ್ತದೆ. ಇದು ಆಳುವ ಪಕ್ಷದ ಮಂತ್ರಿಮಂಡಲದ 'ಪ್ರತಿಬಿಂಬ' ಅಥವಾ 'ಛಾಯೆ' ಆಗಿರುತ್ತದೆ) ಹಲವರು ರಾಜಿನಾಮೆ ನೀಡಿದ್ದರು. ಪಕ್ಷದ ಬಹುಪಾಲು (ಸುಮಾರು 172) ಪಾರ್ಲಿಮೆಂಟ್ ಸದಸ್ಯರು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದರು.

ಕಾರ್ಬಿನ್ ಅವರನ್ನು ಲೇಬರ್ ಪಕ್ಷದ ಎಡಪಂಥೀಯ ನಾಯಕನೆಂದು ಪರಿಗಣಿಸಲಾಗಿದೆ. ಅವರು ಮಿತವ್ಯಯದ ಹೆಸರಲ್ಲಿ ಜನತೆಯ ಕಲ್ಯಾಣ ಯೋಜನೆಗಳಲ್ಲಿ ಕಡಿತಗಳ ನೀತಿಯನ್ನು ಬಲವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಅವರು ಖಾಸಗೀಕರಣದ ನೀತಿ ವಿರುದ್ಧ ಪ್ರಚಾರ ಮಾಡುತ್ತಿದ್ದು, ರೈಲ್ವೇ ಇಂಧನ ಶಕ್ತಿ ಮುಂತಾದ ಪ್ರಮುಖ ಆರ್ಥಿಕ ಕ್ಷೇತ್ರಗಳಲ್ಲಿ ಪುನಃ ರಾಷ್ಟ್ರೀಕರಣದ ನೀತಿಯನ್ನು ಪ್ರತಿಪಾದಿಸುತ್ತಿದ್ದಾರೆ. ಅವರು ಸಿ.ಎನ್.ಡಿ. (ಕಮಿಟಿ ಫಾರ್ ನ್ಯೂಕ್ಲಿಯರ್ ಡಿಸ್ ಆರ್ಮಮೆಂಟ್ – ಅಣು ನಿಶ್ಶಸ್ತ್ರೀಕರಣದ ವಿರುದ್ದ ಸಮಿತಿ) ಯ ಸ್ಥಾಪಕ ಸದಸ್ಯರಾಗಿದ್ದು, ಬ್ರಿಟನ್ ನಾಟೋ ಮಿಲಿಟರಿ ಕೂಟದಿಂದ ಹೊರಬಂದು ಅಣು ನಿಶ್ಶಸ್ತ್ರೀಕರಣದ ಮೂಲಕ ಪಕ್ಷ ಹೊಸ ರಕ್ಷಣಾ–ವಿದೇಶಾಂಗ ನೀತಿ ಅಂಗೀಕರಿಸಬೇಕೆಂದು ವಾದಿಸುತ್ತಿದ್ದಾರೆ. ಅವರ ಈ ನೀತಿಗಳಿಗೆ ಲೇಬರ್ ಪಕ್ಷದ ಸಾಮಾನ್ಯ ಸದಸ್ಯರಿಂದ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

ಆದರೆ ಅದರಿಂದಾಗಿಯೇ ಅವರ ವಿರುದ್ಧ ನಡು ಮತ್ತು ಬಲಪಂಥೀಯ ಬಣಗಳು ಬಂಡೆದ್ದಿವೆ. ಈ ಬಣಗಳು ಪಕ್ಷದ ನಾಯಕತ್ವ, ಅಧಿಕಾರಶಾಹಿ ಮತ್ತು ಚುನಾಯಿತ ಸದಸ್ಯರಲ್ಲಿ ಪ್ರಭಾವಶಾಲಿಯಾಗಿದೆ. ಆದರೆ ಸಾಮಾನ್ಯ ಸದಸ್ಯರಲ್ಲಿ ಅವರಿಗೆ ಬೆಂಬಲವಿಲ್ಲ. ಬ್ರಿಟಿಶ್ ಜನತೆಯ 'ಮುಖ್ಯಧಾರೆ' ನಡು–ಬಲಪಂಥಿಯ ಧೋರಣೆಗಳನ್ನು ಹೊಂದಿದೆ. ಕಾರ್ಬಿನ್ ಅವರ ಈ 'ಉಗ್ರ' ಎಡಪಂಥಿಯ ನೀತಿಗಳೊಂದಿಗೆ ಲೇಬರ್ ಪಕ್ಷ ಚುನಾವಣೆ ಗೆಲ್ಲುವುದು ಸಾಧ್ಯವಿಲ್ಲ ಎಂಬುದು ಅವರ ವಾದ. ಬ್ರಿಟಿಶ್ ಜನತೆಯ ನಡು–ಬಲಪಂಥಿಯ ಧೋರಣೆಗಳನ್ನು ಬದಲಾಯಿಸಲು ಲೇಬರ್ ಪಕ್ಷ ಪ್ರಯತ್ನಿಸಬೇಕು. ಮಾತ್ರವಲ್ಲ, ಬ್ರೆಕ್ಸಿಟ್ ತೀರ್ಪು ಬ್ರಿಟಿಶ್ ಜನತೆಯ ಧೋರಣೆಗಳು ಬದಲಾಗುತ್ತಿರುವುದನ್ನು ಗಮನಿಸಬೇಕು. ಪ್ರಮುಖ ನೀತಿಗಳಲ್ಲಿ ಟೋರಿ ಮತ್ತು ಲಿಬರ್ ಪಕ್ಷಗಳ ಜನ–ವಿರೋಧಿ ನೀತಿಗಳಿಂದ ಪ್ರತ್ಯೇಕಿಸಿಕೊಳ್ಳದೆ ಪಕ್ಷ ಬೆಂಬಲ ಹೆಚ್ಚಿಸಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಎಡಪಂಥೀಯರ ವಾದ.

ಪಕ್ಷದೊಳಗಿನ ನಡು ಮತ್ತು ಬಲಪಂಥೀಯ ಬಣಗಳಲ್ಲದೆ, ಮಾಧ್ಯಮಗಳು ಖುಲ್ಲಂ ಖುಲ್ಲಾ ಕಾರ್ಬಿನ್ ಅವರ ವಿರುದ್ಧ ಪ್ರಚಾರ ನಡೆಸಿದವು. ಸಾಮಾನ್ಯವಾಗಿ ಇಂತಹ ಅಪಪ್ರಚಾರದಲ್ಲಿ ಭಾಗವಹಿಸದ ಸಾರ್ವಜನಿಕ ಒಡೆತನದ ಬಿ.ಬಿ.ಸಿ. ಮತ್ತು ಎಡಪಂಥೀಯ ವಿಚಾರಗಳಿಗೆ ಜಾಗ ಒದಗಿಸುವ 'ದಿ ಗಾರ್ಡಿಯನ್' ಸೇರಿದಂತೆ, ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ಮಾಧ್ಯಮಗಳು ಕಾರ್ಬಿನ್ ಆಯ್ಕೆಯಾದ–



ರೆ ಅನಾಹುತವಾದೀತು ಎಂದು ಬೊಬ್ಬಿಟ್ಟವು. ಬ್ರೆಕ್ಸಿಟ್ ತೀರ್ಪಿನ ಹಿನ್ನೆಲೆಯಲ್ಲಿ ಲೇಬರ್ ಪಕ್ಷದ ಆಂತರಿಕ ಚುನಾವಣೆ ಬಗ್ಗೆ ಮಾಧ್ಯಮಗಳು ಇಷ್ಟು ತಲೆಕೆಡಿಸಿಕೊಂಡಿರುವುದು, ಅವುಗಳ ಅಪಪ್ರಚಾರವನ್ನು ಲೆಕ್ಕಿಸದೆ ಲೇಬರ್ ಪಕ್ಷದ ಸದಸ್ಯರು ಕಾರ್ಬಿನ್ ಅವರನ್ನು ಇನ್ನೂ ಹೆಚ್ಚಿನ ಮತಗಳಿಂದ ಆಯ್ಕೆ ಮಾಡಿರುವುದು – ಇವೆರಡೂ ಬ್ರಿಟನಿನ ಸ್ಥಗಿತ ರಾಜಕೀಯದಲ್ಲಿ ದೊಡ್ಡ ಬದಲಾವಣೆಗಳ ಆಶಾಭಾವನೆ ಮೂಡಿಸಿದೆ. ಕಾರ್ಬಿನ್ ಗೆಲುವು ಲೇಬರ್ ಪಕ್ಷದ ಹೊರಗಿರುವ ಎಡಪಂಥೀಯರನ್ನು, ಹಾಗೂ ಎಡಪಂಥಿಯತೆಯತ್ತ ಹೊರಳುತ್ತಿರುವ ಬ್ರಿಟಿಶ್ ದುಡಿಯುವ ಜನತೆಯ ಉತ್ಸಾಹ, ಆತ್ಮವಿಶ್ವಾಸಗಳನ್ನು ಹೆಚ್ಚಿಸಿದೆ.

ಲೇಬರ್ ಪಕ್ಷ ಯುರೋಪಿನ ಅತ್ಯಂತ ಹಳೆಯ ಪ್ರಮುಖ ಸಮಾಜವಾದಿ ಪಕ್ಷಗಳಲ್ಲಿ ಒಂದು. ಆದರೆ ಕ್ರಮೇಣ ಈ ಪಕ್ಷದ ನಾಯಕತ್ವ 'ಲೇಬರ್ ಅರಿಸ್ಟಾಕ್ರಸಿ' ಎಂದು ಲೆನಿನ್ ಕರೆದ ಪ್ರಕ್ರಿಯೆಯ ಮೂಲಕ ಒಂದು ಅಧಿಕಾರಶಾಹಿಯಾಗಿ ಬಿಟ್ಟಿತ್ತು. ಹಿಂದೆ ಪ್ರತಿ ಪಾರ್ಲಿಮೆಂಟ್ ಅಭ್ಯರ್ಥಿಯನ್ನು ಆ ಕ್ಷೇತ್ರದ ಪಕ್ಷದ ಸದಸ್ಯರು ಚುನಾಯಿಸುವುದು ಹೋಗಿ ನಾಯಕತ್ವದ ಪಾತ್ರ ಹೆಚ್ಚುತ್ತಾ ಹೋಯಿತು. ವಿರೋಧ ಪಕ್ಷದಲ್ಲಿದ್ದಾಗ ಎಡ ಜನ–ಪರ ಘೋಷಣೆಗಳನ್ನು ಹಾಕುತ್ತಾ, ಅಧಿಕಾರಕ್ಕೆ ಬಂದಾಗ ಬಂಡವಾಳಶಾಹಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಲು ಪ್ರಯತ್ನಿಸದೆ ಅಥವಾ ಕನಿಷ್ಟ ಪ್ರಶ್ನಿಸದೆ ಕೆಲವು ಮೇಲುಮೇಲಿನ ಸುಧಾರಣೆಗಳಿಂದ ದುಡಿಯುವ ಜನರನ್ನು ತೃಪ್ತಿ ಪಡಿಸುತ್ತಿತ್ತು. ಟೋನಿ ಬ್ಲೇರ್ ಅವರ 'ಹೊಸ ಲೇಬರ್' ನಾಯಕತ್ವ ವಹಿಸಕೊಂಡ ಮೇಲೆ ಲೇಬರ್ ಪಕ್ಷಕ್ಕೂ ಟೋರಿ–ಲಿಬರಲ್ ಪಕ್ಷಗಳಿಗೂ ಯಾವುದೇ ವ್ಯತ್ಯಾಸ ಕಾಣದ ಪರಿಸ್ಥಿತಿ ಬಂತು. ಈಗಿನ ಲೇಬರ್ ಪಕ್ಷದ ಸ್ಥಿತಿಯಲ್ಲಿ ಇದ–ಕ್ಕೆ ಪಕ್ಷದ ನಡು–ಬಲಪಂಥೀಯ ಅಧಿಕಾರಶಾಹಿ ನಾಯಕತ್ವವನ್ನು ಬದಲಾಯಿಸುವುದೇ ಪರಿಹಾರ ಎಂಬ ಭಾವನೆ ಬಲವಾಗುತ್ತಿದ್ದು, ಕಾರ್ಬಿನ್ ಮರುಆಯ್ಕೆ ಅದನ್ನು ಬಲವಾಗಿ ಸೂಚಿಸುತ್ತಿದೆ.

ಮರುಆಯ್ಕೆಯಾದ ಮೇಲೆ ಕಾರ್ಬಿನ್ ಪಕ್ಷದ ಐಕ್ಯತೆ ಒತ್ತು ಕೊಡುತ್ತಾ ಸೋತವರ ಮೇಲೆ 'ಪ್ರತೀಕಾರ'ದ ಕ್ರಮಗಳು ಇರುವುದಿಲ್ಲ ಎಂದಿದ್ದಾರೆ. ಇದನ್ನು ಲೇಬರ್ ಪಕ್ಷದ ಒಳಗಿರುವ ಮತ್ತು ಹೊರಗಿರುವ ಎಡಪಂಥೀಯರ ಒಂದು ವಿಭಾಗ ವಿರೋಧಿಸಿದೆ. ಕಾರ್ಬಿನ್ ಛಾಯಾ ಮಂತ್ರಿಮಂಡಲಕ್ಕೆ ರಾಜಿನಾಮೆ ಕೊಟ್ಟ ಮತ್ತು ಅವಿಶ್ವಾಸ ಸೂಚನೆ ಮಂಡಿಸಿದ 172 ಪಾರ್ಲಿಮೆಂಟ್ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮುಂದಿನ ಚುನಾವಣೆಗಳಲ್ಲಿ ಸೀಟು ಕೊಡುವಾಗ ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ವಾದಿಸಿದೆ. ಪಕ್ಷದ ನಡು–ಬಲಪಂಥೀಯ ಗುಂಪುಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸದೆ, ಪಕ್ಷದ ನಾಯಕತ್ವದ ಅಧಿಕಾರಶಾಹಿ ವರ್ತನೆಯನ್ನು ಕೊನೆಗಾಣಿಸದೆ ಪಕ್ಷದ ಪುನಶ್ಚೇತನ ಸಾಧ್ಯವಿಲ್ಲ. ಲೇಬರ್ ಪಕ್ಷ (ಎಡ–ನಡು–ಬಲಪಂಥಗಳ ಚೌ ಚೌ ಆಗಿ ಮುಂದುವರೆಯದೆ) ಪುನಃ ಒಂದು ಸಮಾಜವಾದಿ ಪಕ್ಷವಾಗಿ ಹೊಮ್ಮಿದಾಗ ಮಾತ್ರ ಇದು ಸಾಧ್ಯ. ನಡು–ಬಲಪಂಥಿಯರ ವಿರುದ್ಧ ಹೋರಾಟದಲ್ಲಿ ನಿರ್ಣಾಯಕ ಕ್ಷಣಗಳಲ್ಲಿ ಕಾರ್ಬಿನ್ ಹಿಂದೆ ಮಾಡಿದಂತೆ ಹಿಂಜರಿಯಬಾರದು ಎಂದು ಈ ವಿಭಾಗ ವಾದಿಸುತ್ತದೆ.

ಕಾರ್ಬಿನ್ ಮರು ಆಯ್ಕೆಯ ನಂತರ ಲೇಬರ್ ಪಕ್ಷವಾಗಲಿ ಬ್ರಿಟಿಶ್ ರಾಜಕಾರಣವಾಗಲಿ ಜನಪರ ದಿಕ್ಕಿನಲ್ಲಿ ಬದಲಾಗದೆ ಇರದು ಎಂಬ ಆಶಾಭಾವನೆ ಮೂಡಿದೆ. ●



ಸಿಪಿಐ(ಎಂ) ನಿಯೋಗದ ಗ್ರೀಸ್ ಭೇಟಿ

ಗ್ರೀಕ್ ಕಮ್ಯುನಿಸ್ಟ್ ಪಕ್ಷದ ಆಹ್ವಾನದ ಮೇರೆಗೆ ಸಿಪಿಐ(ಎಂ) ನಿಯೋಗ ಸೆಪ್ಟೆಂಬರ್ 21ರಿಂದ 25 ವರೆಗೆ ಗ್ರೀಸ್‌ಗೆ ಭೇಟಿ ನೀಡಿತು. ಸಿಪಿಐ(ಎಂ) ನಿಯೋಗದಲ್ಲಿ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಕೇಂದ್ರ ಸಮಿತಿ ಸದಸ್ಯ ಮೃದುಲ್ ಡೇ ಇದ್ದರು. ನಿಯೋಗಕ್ಕೆ 5 ದಿನಗಳ ಕಾಲ ಬಿಡುವಿಲ್ಲದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಗ್ರೀಕ್ ಕಮ್ಯುನಿಸ್ಟ್ ಪಕ್ಷದ ಪ್ರದಾನ ಕಾರ್ಯದರ್ಶಿಯವರೊಂದಿಗೆ ಸಂವಾದ, ಅಂತರ್ರಾಷ್ಟ್ರೀಯ ಸಂಬಂಧಗಳ ವಿಭಾಗದೊಂದಿಗೆ ವಿಚಾರ ವಿನಿಮಯ, ಪಕ್ಷದ ಸೈದ್ಧಾಂತಿಕ ಮತ್ತು ಟ್ರೇಡ್ ಯೂನಿಯನ್ ವಿಭಾಗದೊಂದಿಗೆ ಮಾತುಕತೆಗಳು, ಪಕ್ಷದ ನಾಯಕತ್ವದ ಟ್ರೇಡ್ ಯೂನಿಯನ್ ಸಂಘಟನೆಯ ನಾಯಕತ್ವದೊಂದಿಗೆ ವಿಚಾರ ವಿನಿಮಯ, ಜಾಗತಿಕ ಟ್ರೇಡ್ ಯೂನಿಯನ್ (ಡಬ್ಲ್ಯೂ.ಎಫ್.ಟಿ.ಯು.) ಪ್ರಧಾನ ಕಾರ್ಯದರ್ಶಿ ಮವ್ರಿಕೋಸ್ ಮತ್ತು ಜಾಗತಿಕ ಶಾಂತಿ ಮಂಡಳಿ ಪ್ರಧಾನ ಕಾರ್ಯದರ್ಶಿ ಪಾಫಿಲಿಸ್ ಅವರೊಂದಿಗೆ ಸಂದರ್ಶನಗಳನ್ನು ಯೋಜಿಸಲಾಗಿತ್ತು. ಗ್ರೀಕ್ ಪಕ್ಷದ ದೈನಿಕ 'ರಿಝೋಸ್ಪಾಸ್ಟಿಸ್' ನ ಸಂಪಾದಕೀಯ ಮಂಡಳಿ, ಹಾಗೂ ಪಕ್ಷದ ಪ್ರಕಟಣಾ ವಿಭಾಗ ಮಯತ್ತು ಪುಸ್ತಕ ಮಳಿಗೆಯ ನಿರ್ವಾಹಕರನ್ನೂ ಸಿಪಿಐ(ಎಂ) ನಿಯೋಗ ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಂಡಿತು. ನಿಯೋಗದ ಭೇಟಿ ಸಂದರ್ಭಧಲ್ಲಿ ಪಕ್ಷದ ಯುವಜನ ಸಂಘಟನೆ ಗ್ರೀಕ್ ಕಮ್ಯುನಿಸ್ಟ್ ಯುವ ಲೀಗ್ 'ಗ್ರೀಕ್ ಪ್ರಜಾಸತ್ತಾತ್ಮಕ ಸೇನೆಯ' ರಚನೆಯ 70ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಯುವಜನೊತ್ಸವ ಹಮ್ಮಿಕೊಂಡಿದ್ದು, ಯೆಚುರಿಯವರನ್ನು ಈ ಸಭೆಯನ್ನು ಉದ್ದೇಶಿಸಿ ಮಾತನಾಡಲು ಕೋರಲಾಯಿತು. ಗ್ರೀಸಿನಲ್ಲಿ ಕಮ್ಯುನಿಸ್ಟ್ ಮೇಯರ್ ಇರುವ ಎರಡು ನಗರಸಭೆಗಳಾದ ಕೈಸಾರಿಯಾನಿ ಮತ್ತು ಪತ್ರಾಸ್ ನಗರಗಳಿಗೆ ನಿಯೋಗ ಭೇಟಿ ನೀಡಿತು. ನಿಯೋಗದ ಭೇಟಿ ಕೊನೆಗೊಂಡಿದ್ದು ಗ್ರೀಕ್ ರಾಜಧಾನಿ ಅಥೆನ್ಸ್ ನಗರದ ಪಕ್ಷದ ಸಮಿತಿ ಏರ್ಪಡಿಸಿದ್ದ ಬಹಿರಂಗ ಸಭೆಯೊಂದಿಗೆ.

ಈ ಹಲವು ಸಂವಾದಗಳಿಂದ ಗ್ರೀಸ್ ನ ಪ್ರಸ್ತುತ ಪರಿಸ್ಥಿತಿ, ನಡೆಯುತ್ತಿರುವ ವರ್ಗ ಹೋರಾಟಗಳ ಸ್ಥಿತಿ, ಗ್ರೀಕ್ ಪಕ್ಷದ ವ್ಯೂಹ ಮತ್ತು ತಂತ್ರಗಳು, ಮಾರ್ಕ್ಸ್‌ವಾದವನ್ನು ಗ್ರೀಸ್/ಭಾರತ ಅಥವಾ ಜಾಗತಿಕ ಸನ್ನಿವೇಶಕ್ಕೆ ಅನ್ವಯ ಮಾಡುವಲ್ಲಿನ ಸವಾಲುಗಳು/ವಿಚಾರಗಳು – ಇನ್ನಷ್ಟು ಸ್ಪಷ್ಟವಾದವು. ಪ್ರಗತಿಪರ ಎಂದು ಮೊದಲು ಭಾವಿಸಲಾಗಿದ್ದ ಸಿರಿಝಾ ಸರಕಾರದ ದ್ರೋಹದ ಬಗೆಗೂ ತಿಳಿದುಕೊಂಡಂತಾಯಿತು. ಗ್ರೀಸಿನಲ್ಲಿ ನಿರುದ್ಯೋಗ ಶೇ. 25 ಇದೆ. ಯುವಜನರ ನಿರುದ್ಯೋಗ ಶೇ 50–60 ಇದೆ. ಐ.ಎಂ.ಎಫ್./ಯುರೋ ಕೂಟಗಳು ನೀಡಿದ ಬೈಲೌಟ್ ಪ್ಯಾಕೇಜಿನ ಶೇ. 90 ಭಾಗ ಹಿಂದಿನ ಸಾಲ ತೀರಿಸಲು ಖರ್ಚಾಗಿದೆ. ಹಣಕಾಸು ಬಂಡವಾಳದ ಲಾಭವಾಗಿ ಹೋಗಿದೆ. ಆರ್ಥಿಕ ಪುನಶ್ಚೇತನಕ್ಕೆ ಸಿಕ್ಕಿದ್ದು ಶೆ. 10 ಮಾತ್ರ. ಇದು ಏನಕ್ಕೂ ಸಾಲದು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಬೈಲೌಟ್ ಪ್ಯಾಕೇಜಿನಿಂದ ಗ್ರೀಸ್ ದೈತ್ಯ ಕಂಪನಿಗಳು 100 ಕೋಟಿ ಯುರೋ ಲಾಭ ಗಳಿಸಿವೆ. ದುಡಿಯುವ ಜನರ ಕೂಲಿ ಶೆ. 40ರಷ್ಟು ಕಡಿತವಾಗಿದೆ.

ಸಿರಿಝಾ ಸರಕಾರ ಅಮೆರಿಕಕ್ಕೆ ಅದರ ಆಯ್ಕೆಯ ಯಾವುದೇ ಗ್ರೀಕ್ ದ್ವೀಪವನ್ನು ಮಿಲಿಟರಿ ನೆಲೆಯಾಗಿ ಕೊಡಲು ಸಿದ್ಧವಾಗಿದೆ. ಆಫ್ರಿಕಾ ಮತ್ತು ಅರಬಿ ನಿರಾಶ್ರಿತರನ್ನು ನಿಯಂತ್ರಿಸಲು ನಾಟೋ ಮಿಲಿಟರಿ ಬೆಂಬಲ ಪಡಯಲು ಮಾತುಕತೆ ನಡೆಸಿದೆ. 60 ಸಾವಿರಕ್ಕೂ ಹೆಚ್ಚು ನಿರಾಶ್ರಿತರನ್ನು ಅಂತರ್ರಾಷ್ಟ್ರೀಯ ಕಾನೂನು ಉಲ್ಲಂಘಿಸಿ ಬಂಧನದಲ್ಲಿ ಇಡಲಾಗಿದೆ. ನಿರಾಶ್ರಿತರ ಸಮಸ್ಯೆ ಸೃಷ್ಟಿಸಿರುವ ಆತಂಕ ಗ್ರೀಸ್ ನಲ್ಲೂ ಅರೆ–ಫ್ಯಾಸಿಸ್ಟ್ ಉಗ್ರ ಬಲಪಂಥೀಯ ಶಕ್ತಿಗಳ ಬೆಳವಣಿಗೆಗೆ ಕಾರಣವಾಗಿದೆ.

ಕೈಸಾರಿಯಾನಿ ನಗರದಲ್ಲಿ 1944ರ ಮೇದಿನದಂದು ಹಿಟ್ಲರನ ಫ್ಯಾಸಿಸ್ಟ್ ಗುಂಡೇಟಿಗೆ ಬಲಿಯಾದ 200 ಕಮ್ಯುನಿಸ್ಟ್ ಹುತಾತ್ಮರ ಸ್ಮಾರಕದ ಭೇಟಿ ನಿಯೋಗದ ಅವಿಸ್ಮರಣೀಯ ಅನುಭವಗಳಲ್ಲಿ ಒಂದಾಗಿತ್ತು. ಈ ಸ್ಮಾರಕದ ಜಾಗವನ್ನು ಪಡೆದುಕೊಳ್ಳಲು ಕೇಂದ್ರ ಸರಕಾರದ ಜತೆಗೆ ನಗರಸಭೆ ಮಾಡಬೇಕಾದ ಹೋರಾಟದ ಕಥೆ ಅಷ್ಟೇ ನೋವಿನದಾಗಿತ್ತು. ಗ್ರೀಕ್ ಸರಕಾರ ಆ ಚಾರಿತ್ರಿಕ ಜಾಗವನ್ನು ಒಂದು ಖಾಸಗಿ ಶೂಟಿಂಗ್ ರೇಂಜಿಗೆ ಕೊಟ್ಟು ಬಿಟ್ಟಿತ್ತು. 200 ಕಮ್ಯುನಿಸ್ಟ್ ಹುತಾತ್ಮರ ಗಾಥೆಯನ್ನು (ಆಗ 6 ವರ್ಷದ ಬಾಲಕನಾಗಿ) ಅದನ್ನು ಕಣ್ಣಾರೆ ಕಂಡಿದ್ದ ಹಿಂದಿನ ಕಮ್ಯುನಿಸ್ಟ್ ಮೇಯರ್ ಬಾಯಿಂದ ಕೇಳುವುದೂ ಸ್ಫೂರ್ತಿದಾಯಕವೂ ನೋವಿನದೂ ಆಗಿತ್ತು. ಗ್ರೀಸ್ ನ ಮೂರನೇ ಅತಿ ದೊಡ್ಡ ಪಟ್ಟಣ ಹಾಗೂ ದ್ರಾಕ್ಷಿ ಕೃಷಿ ಕೇಂದ್ರ ಪತ್ರಾಸ್, ಈಗಿನ ಆರ್ಥಿಕ ಬಿಕ್ಕಟ್ಟಿನಲ್ಲಿ ಅನುಭವಿಸುತ್ತಿರುವ ಸಂಕಷ್ಟವನ್ನು ಅಲ್ಲಿನ ಕಮ್ಯುನಿಸ್ಟ್ ಮೇಯರ್ ಮತ್ತು ಪಾರ್ಲಿಮೆಂಟ್ ಸದಸ್ಯರಿಂದಲೇ ಕೇಳುವ ಅವಕಾಶ ನಿಯೋಗಕ್ಕೆ ಒದಗಿತ್ತು. ಇಟಲಿ ಗಡಿಯಲ್ಲಿರುವ ಪತ್ರಾಸ್ ನಿರಾಶ್ರಿತರ ಬಿಕ್ಕಟ್ಟಿನಿಂದಲೂ ಸಂಕಷ್ಟಕ್ಕೆ ಒಳಗಾಗಿದೆ.

ಒಟ್ಟಾರೆಯಾಗಿ ಸಿಪಿಐ(ಎಂ) ನಿಯೋಗದ ಭೇಟಿ ಎರಡೂ ಪಕ್ಷಗಳ ಸಂಬಂಧ ಗಟ್ಟಿಗೊಳಿಸಲು ಪರಸ್ಪರ ಅರಿವು ಹೆಚ್ಚಿಸಲು ಸಹಕಾರಿಯಾಗಿವೆ. ●

JANASHAKTHI KANNADA VARA PATRIKE OCTO 16, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283



"ವರ್ತಮಾನದ ಜತೆ ಡಾ. ಅಂಬೇಡ್ಕರ್ ಮರು ಓದು" ವಿಶೇಷ ಉಪನ್ಯಾಸ ಮಾಲಿಕೆ



"ವರ್ತಮಾನದ ಜತೆ ಡಾ. ಅಂಬೇಡ್ಕರ್ ಮರು ಓದು" ಎಂಬ ಶೀರ್ಷಿಕೆಯಲ್ಲಿ ಸಮುದಾಯ ಕರ್ನಾಟಕ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಮಾಲೆ ಸೆಪ್ಟೆಂಬರ್ 24 ರಿಂದ ಆರಂಭವಾಗಿದ್ದು ಈಗಾಗಲೇ ನಾಲ್ಕು ಉಪನ್ಯಾಸಗಳು ನಡೆದಿವೆ. ಈ ಬಗ್ಗೆ ಒಂದು ಕಿರುವರದಿ.

'ಸಮಕಾಲೀನ ಚರಿತ್ರೆಯ ರಚನೆಯಲ್ಲಿ ಅಂಬೇಡ್ಕರ್ ಮತ್ತು ದಲಿತ ಐಡೆಂಟಿಟಿಯ ಪ್ರಶ್ನೆಗಳು' ಎಂಬ ವಿಷಯದ ಬಗ್ಗೆ ಹಂಪಿ ವಿ.ವಿ.ಯ ಡಾ. ಚಿನ್ನಸ್ವಾಮಿ ಸೋಸಲೆ ಅವರು ವಿಶೇಷ ಉಪನ್ಯಾಸ ನೀಡುವ ಮೂಲಕ ಸೆಪ್ಟೆಂಬರ್ 24ರಂದು ಸಮುದಾಯ ಕರ್ನಾಟಕ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಮಾಲೆಯ ಉದ್ಘಾಟನೆ ಆಯಿತು. ಕರ್ನಾಟಕ ಕಾಲೇಜಿನಲ್ಲಿ ನಡೆದ ಈ ಸಮಾರಂಭದಲ್ಲಿ ಸಮುದಾಯ ಕರ್ನಾಟಕದ ಅಧ್ಯಕ್ಷ ಪ್ರೊ. ಆರ್. ಕೆ. ಹುಡಗಿ, ಅಧ್ಯಕ್ಷತೆ ವಹಿಸಿದ್ದು, ಕಾರ್ಯದರ್ಶಿ ದೇವೆಂದ್ರಗೌಡ, ನಾರಾಯಣ ಬೆಳಗೂರಕಿ, ಎಂ. ಗೋಪಾಲಕೃಷ್ಣ ಉಪಸ್ಥಿತರಿದ್ದರು.

"ಡಾ. ಅಂಬೇಡ್ಕರ್ ಅವರ ಅಭಿವೃದ್ಧಿ ಚಿಂತನೆಗಳು ಮತ್ತು ಪ್ರಸ್ತುತ ಕರ್ನಾಟಕ" ಎಂಬ ವಿಷಯದ ಬಗ್ಗೆ ಹಂಪಿ ವಿ.ವಿ.ಯ ವಿಶ್ರಾಂತ ಪ್ರಾಧ್ಯಾಪಕ ಡಾ. ಟಿ.ಆರ್.ಚಂದ್ರಶೇಖರ್ ಅವರು ಸೆಪ್ಟೆಂಬರ್ 24ರಂದು ಕುಷ್ಟಗಿಯಲ್ಲಿ ವಿಶೇಷ ಉಪನ್ಯಾಸ ನೀಡಿದರು. "ಅಭಿವೃದ್ಧಿಯ ಮೂಲದ್ರವ್ಯ ಸಮಾನತೆಯೇ ಆಗಿದೆ. ದೇಶದ ಅಭಿವೃದ್ಧಿಗೆ ಸಮಾನತೆಯ ಮೌಲ್ಯದ ಕೊರತೆ ಅಡ್ಡಿಯಾಗುತ್ತಿದೆ. ದೇಶ ಮೊದಲು ಎನ್ನುವುದಕ್ಕಿಂತ ದಲಿತರು, ಮಹಿಳೆಯರು, ದುರ್ಬಲರು ಮೊದಲು ಎಂಬುದಾಗಬೇಕು." ಎನ್ನುತ್ತಾ ಅಭಿವೃದ್ಧಿ ಚಿಂತನೆಗಳಲ್ಲಿ ಡಾ. ಅಂಬೇಡ್ಕರ್ ಅವರ ಚಿಂತನೆಗಳನ್ನು ಅನ್ವಯಿಸುವುದು ಹೇಗೆ ಎಂದು ವಿವರಿಸಿದರು. ಕುಷ್ಟಗಿ ಸಮುದಾಯದ ಅಧ್ಯಕ್ಷ ಮೋಹನಲಾಲ ಜೈನ್ ಅಧ್ಯಕ್ಷತೆ ವಹಿಸಿದ್ದು, ಪ್ರೊ. ಆರ್.ಕೆ.ಹುಡಗಿ, ದೇವೇದ್ರ ಗೌಡ, ಪರಸಪ್ಪ ಪಂಚಮ್, ಬಿ.ಎಂ.ಕಂಬ್ಳಿ, ಶಾರದಾ ಕಟ್ಟೀಮನಿ, ಮುಂತಾದವರು ಉಪಸ್ಥಿತರಿದ್ದರು.



ಕುಂದಾಪುರ ಸಮುದಾಯವು ಅಕ್ಟೋಬರ್ 02ರ ಗಾಂಧೀ ಜಯಂತಿಯಂದು "ಗಾಂಧೀ ಮತ್ತು ಅಂಬೇಡ್ಕರ್ : ಚಾರಿತ್ರಿಕ ಮುಖಾಮುಖಿ" ಎಂಬ ವಿಶೇಷ ಉಪನ್ಯಾಸ ಆಯೋಜಿಸಿತ್ತು. ಮುಖ್ಯ ಉಪನ್ಯಾಸಕರಾದ ಶ್ರೀ ವಾಸುದೇವ ಬೆಳ್ಳೆ ರವರು ಮಾತನಾಡಿ ಗಾಂಧಿ ಮತ್ತು ಅಂಬೇಡ್ಕರ್ ತಮ್ಮ ಗುರಿಯಲ್ಲಿ ಮುಖ್ಯ ವ್ಯತ್ಯಾಸಗಳನ್ನು ಹೊಂದಿರದಿದ್ದರೂ ಆರಿಸಿಕೊಂಡ ಮಾರ್ಗದಿಂದಾಗಿಯೇ ಎಂದೂ ಕೂಡದ ಹಳಿಗಳಂತೆ ಅವರಿಬ್ಬರ ದಾರಿಗಳನ್ನು ಗುರುತಿಸಲಾಗಿದೆ. ಆದರೆ, ಈ ಜನಪ್ರಿಯ ಗ್ರಹಿಕೆಯ ಹೊರತಾಗಿಯೂ ಅವರಿಬ್ಬರು ಒಬ್ಬರಿಗೊಬ್ಬರೂ ಪೂರಕವಾಗಿ ಯೋಚಿಸಿದ, ಪರಸ್ಪರರ ಮೇಲೆ ಪ್ರಭಾವಿಸಿದ ಸಂಗತಿಗಳನ್ನು ಗುರುತಿಸಬಹುದು ಎಂದರು. ಮನ:ಪರಿವರ್ತನೆಯಿಂದ ಮಾತ್ರ ಬದಲಾವಣೆಗಳನ್ನು ತರಲು ಸಾಧ್ಯವೆಂದು ನಂಬಿದ್ದ ಗಾಂಧಿ ಮತ್ತು ಕಾನೂನಿನ ಮೂಲಕ ಅಸಮಾನತೆಗಳನ್ನು ಸರಿಪಡಿಸಬಹುದೆಂದು ವಾದಿಸುತ್ತಿದ್ದ ಅಂಬೇಡ್ಕರ್ ಇಬ್ಬರೂ ನಮಗೆ ಈಗಲೂ ಪ್ರಸ್ತುತ ಎಂದು ಅವರು ಅಭಿಪ್ರಾಯಪಟ್ಟರು.




ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಒಂದೇ ದಿಕ್ಕಿನತ್ತ ಪ್ರಯಾಣ ಬೆಳೆಸಿದ ಎರಡು ಸಮಾನಾಂತರ ರೈಲು ಹಳಿಗಳು ಎಂದು ಕೆಲವರು ಅವರಿಬ್ಬರ ಭಿನ್ನ ಪಥಗಳನ್ನು ಗುರುತಿಸುತ್ತಾರೆ. ಅವರಿಬ್ಬರೂ ಜೊತೆ-ಯಾಗಿ ನಡೆಯುವ ಪಥಿಕರು ಎಂಬುದನ್ನು ನಮ್ಮ ಗ್ರಹಿಕೆಗೆ ತರುವಂತೆ ಸಮುದಾಯದ ಗಾಂಧಿ-ಅಂಬೇಡ್ಕರ್ ಚಾರಿತ್ರಿಕ ಮುಖಾಮುಖಿ ಕಾರ್ಯಕ್ರಮ ಆಯೋಜನೆಗೊಂಡಿತ್ತು.

ವೇದಿಕೆಯಲ್ಲಿ ಸಮುದಾಯ ಕರ್ನಾಟಕದ ಟಿ.ಸುರೇಂದ್ರ ರಾವ್, ಸಾಹಿತ್ಯ ಸಮುದಾಯದ ಡಾ. ವಿಠಲ ಭಂಡಾರಿ ಮತ್ತು ಕುಂದಾಪುರ ಸಮುದಾಯದ ಅಧ್ಯಕ್ಷರಾದ ಶ್ರೀ ಉದಯ ಗಾಂವಕಾರ ಉಪಸ್ಥಿತರಿದ್ದರು.

ಪುಟ 10 ಕ್ಕೆ

ಹೆಚ್.ಆರ್. ನವೀನ್‌ಕುಮಾರ್



ಮೂಲ : 'ಕೃಷಿಯಲ್ಲಿ ಜಾಗತೀಕರಣ ನೀತಿಗಳಿಂದ ಬಂದ ಬದಲಾವಣೆಗಳು' ಬಗೆಗಿನ ಸಿಪಿಐ(ಎಂ) ವಿಶೇಷ ಅಧ್ಯಯನ ತಂಡದ ವರದಿ

ಡಿವೈಎಫ್‌ಐನ 10ನೇ ಸಮ್ಮೇಳನ ಕೊಚ್ಚಿಯಲ್ಲಿ



ಭಾರತೀಯ ಯುವಜನತೆಯ ಅತಿ ದೊಡ್ಡ ಸಂಘಟನೆ ಮತ್ತು ಜಗತ್ತಿನ ಎರಡನೇ ಅತಿ ದೊಡ್ಡ ಯುವಜನ ಸಂಘಟನೆ ಡೆಮಾಕ್ರಟಿಕ್ ಯೂತ್ ಫೆಡರೇಶನ್ ಆಫ್ ಇಂಡಿಯಾ(ಡಿವೈಎಫ್‌ಐ)ದ 10ನೇ ಅಖಿಲ ಭಾರತ ಸಮ್ಮೇಳನ ಕೇರಳದ ಕೊಚ್ಚಿಯಲ್ಲಿ ಫೆಬ್ರುವರಿ 2 ರಿಂದ 5ರ ವರೆಗೆ ನಡೆಯಲಿದೆ ಎಂದು ಡಿವೈಎಫ್‌ಐ ಪ್ರಕಟಣೆ ತಿಳಿಸಿದೆ. ಸಮ್ಮೇಳನದ ಆವರಣಕ್ಕೆ ಶಹೀದ್ ನಗರ ಎಂದೂ, ವೇದಿಕೆಗೆ ವೆಮುಲ ಮಂಚ್ ಎಂದೂ ಹೆಸರಿಡಲಾಗಿದೆ.

ಈ ಸಮ್ಮೇಳನದ ಭಾಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸಾಂಸ್ಕೃತಿಕ ಇವೆಂಟ್‌ಗಳು, ಚಲನ ಚಿತ್ರೋತ್ಸವಗಳು, ವಿಚಾರ ಸಂಕಿರಣಗಳು ದೇಶಾದ್ಯಂತ ನಡೆಯಲಿವೆ.

ಒಂದು ಕೋಟಿ 25ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಪ್ರತಿನಿಧಿಸುವ 700ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಫೆಬ್ರುವರಿ 5ರಂದು ಸಮ್ಮೇಳನದ ಕೊನೆಯ ದಿನ ಒಂದು ಬೃಹತ್ ಯುವಜನ ರ್‍ಯಾಲಿ ನಡೆಯಲಿದೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**